ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಬೆಳಗಾವಿ ಜಿಲ್ಲೆಯ ಹುದಲಿ ಗ್ರಾಮದಲ್ಲಿ ಸ್ವಾತಂತ್ರ್ಯ ಯೋಧ ಶ್ರೀ ಗಂಗಾಧ ದೇಶಪಾಂಡೆ ಅವರ ಸ್ಮಾರಕ ನಿರ್ಮಾಣ ಮಾಡಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಿ, ರೂ.1.00 ಕೋಟಿಗಳನ ಜಿಲ್ಲಾಧಿಕಾರಿಗಳು, ಬೆಳಗಾಂ ಜಿಲ್ಲೆ, ಬೆಳಗಾಂ ಇವರಿಗೆ ಬಿಡುಗಡೆ ಮಾಡಿದೆ.

ಷರತ್ತುಗಳು:

1) ಕಾಮಗಾರಿಯ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ/ತಾಂತ್ರಿಕ ಅನುಮೋದನೆಯನ್ನು ಪಡೆದು ಕಾಮಗಾರಿ ಕೈಗೊಳ್ಳುವುದು.
2) ಕಾಮಗಾರಿಯನ್ನು ಟೆಂಡರ್ ಕರೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ರಂತೆ ಕ್ರಮ ಕಾಮಗಾರಿ ಕೈಗೊಂಡ ನಂತರ ಪ್ರಗತಿ ಆಧರಿಸಿ, ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡುವುದು.
3) ಕಾಮಗಾರಿಯನ್ನು ಪೂರ್ಣಗೊಳಿಸಲು ಸಮಯ ನಿಗದಿಪಡಿಸಿಕೊಂಡು ಆ ಸಮಯದೊಳಗ ಪೂರ್ಣಗೊಳಿಸುವುದು.
4) ಕಾಮಗಾರಿಯನ್ನು ಜಿಲ್ಲಾಧಿಕಾರಿಗಳು, ಬೆಳಗಾಂ ಜಿಲ್ಲೆ ಇವರ ಮೇಲುಸ್ತುವಾರಿಯಲ್ಲಿ ಕೈಗೊಳ್ಳುವುದು.
5) ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.1.00 ಕೋಟಿಗಳಿಗೆ ನಿಗಧಿಪಡಿಸಿಕೊಳ್ಳುವುದು.

ಈ ಅನುದಾನವನ್ನು 2009–10ನೇ ಸಾಲಿನ ಲೆಕ್ಕ ಶೀರ್ಷಿಕೆ 2205–00–800–0–10 (ಸ್ವಾತಂತ್ರ್ಯ ಯೋಧರ ಗ್ರಾಮಗಳ ಅಭಿವೃದ್ಧಿ) ಇದರಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಆಇ 925 ವೆಚ್ಚ–7 2009 ದಿನಾಂಕ:13.10.2009 ಹಾಗೂ ಯೋಜನಾ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಯೋಇ/76/ಜಶ/2009 ದಿನಾಂಕ:14.09.2009 ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 2423

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ವಿಷಯ: ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಕಿತ್ತೂರಿನಲ್ಲಿ ವೀರ ರಾಣಿ ಕಿತ್ತೂರು ಚೆನ್ನಮ್ಮ ಸ್ಮಾರಕ ಭವನ ನಿರ್ಮಾಣ ಮಾಡುವ ಕುರಿತು.

ಓದಲಾಗಿದೆ: ಜಿಲ್ಲಾಧಿಕಾರಿಗಳು, ಬೆಳಗಾಂ ಜಿಲ್ಲೆ, ಇವರ ಪತ್ರ ಸಂಖ್ಯೆ ಕಂಶಾ ಕಿತ್ತೂರ ಅಭಿವೃದ್ಧಿ/ವಿವ.3/09–10, ದಿನಾಂಕ 26.08.2009

ಪ್ರಸ್ತಾವನೆ:

2009–10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಕಿತ್ತೂರಿನಲ್ಲಿ ವೀರ ರಾಣಿ ಕಿತ್ತೂರು ಚೆನ್ನಮ್ಮ ಸ್ಮಾರಕ ಭವನ ನಿರ್ಮಾಣ ಮಾಡಲು ರೂ.1.00 ಕೋಟಿಗಳನ್ನು ನೀಡುವುದಾಗಿ ಘೋಷಣೆ ಮಾಡಿರುತ್ತಾರೆ.

ಮೇಲೆ ಓದಲಾದ ಪತ್ರದಲ್ಲಿ ಬೈಲಹೊಂಗಲ ತಾಲ್ಲೂಕು ಕಿತ್ತೂರಿನಲ್ಲಿ ವೀರ ರಾಣಿ ಕಿತ್ತೂರು ಚೆನ್ನಮ್ಮ ಸ್ಮಾರಕ ಭವನ ನಿರ್ಮಾಣ ಕುರಿತಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಳಗಾವಿ ಇವರು ರೂ.100.00 ಲಕ್ಷಗಳಿಗೆ ಅಂದಾಜು ಪಟ್ಟಿ ಮತ್ತು ನೀಲಿ ನಕ್ಷೆ ಸಲ್ಲಿಸಿರುವ ಪ್ರಸ್ತಾವನೆಗೆ ಆಡಳಿತಾತ್ಮ

ನುಮೋದನೆ ನೀಡಿ, ರೂ.1.00 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿಗಳು, ಬೆಳಗಾಂ ಜಿಲ್ಲೆ ರವರು ೀರಿರುತ್ತಾರೆ.

ಜಿಲ್ಲಾಧಿಕಾರಿಗಳು, ಬೆಳಗಾಂ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ರೂ.1.00 ಕೋಟಿ ಮೊತ್ತದ ಅಂದಾಜು ಪಟ್ಟಿ ತ್ತು ನೀಲಿ ನಕ್ಷೆಯನ್ನು ಆರ್ಥಿಕ ಇಲಾಖೆ ಹಾಗೂ ಯೋಜನಾ ಇಲಾಖೆಗೆ ಕಳುಹಿಸಿ, ಪ್ರಸ್ತಾವನೆಗೆ ಅನುದಾನ ಬಿಡುಗಡೆ ರಿತು ಅನುಮೋದನೆ ಪಡೆಯಲಾಯಿತು. ಸದರಿ ಯೋಜನೆಯನ್ನು ಕಾರ್ಯಾನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಿದ ರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 47 ಸ್ಮಾಪ್ರನಿ 2009, ಬೆಂಗಳೂರು, ದಿನಾಂಕ: 24ನೇ ಅಕ್ಟೋಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಕಿತ್ತೂರಿನಲ್ಲಿ ವೀರ ರಾಣಿ ಕಿತ್ತೂರು ನ್ನಮ್ಮ ಸ್ಮಾರಕ ಭವನ ನಿರ್ಮಾಣ ಮಾಡಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಿ, ರೂ.1.00 ಕೋಟಿಗಳನ್ನು ಲ್ಲಾಧಿಕಾರಿಗಳು, ಬೆಳಗಾಂ ಜಿಲ್ಲೆ, ಬೆಳಗಾಂ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ರತ್ತುಗಳು:

1) ಕಾಮಗಾರಿಯ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ/ತಾಂತ್ರಿಕ ಅನುಮೋದನೆಯನ್ನು ಪಡೆದು ಕಾಮಗಾರಿ ಕೈಗೊಳ್ಳುವುದು.
2) ಕಾಮಗಾರಿಯನ್ನು ಟೆಂಡರ್ ಕರೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ರಂತೆ ಕ್ರಮ ಕೈಗೊಳ್ಳತಕ್ಕದ್ದು
3) ಕಾಮಗಾರಿ ಕೈಗೊಂಡ ನಂತರ ಪ್ರಗತಿ ಆಧರಿಸಿ, ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡುವುದು.
4) ಸ್ಮಾರಕ ಭವನ ನಿರ್ಮಾಣ ಕಾರ್ಯವು ನಿಗಧಿಪಡಿಸಿದ ಕಾಲದಲ್ಲಿ ಅಂದಾಜು ಹೆಚ್ಚಾಗದಂತೆ ಮತ್ತು ನಿಗದಿತ ಅನುದಾನದಲ್ಲಿ ಮುಗಿಸತಕ್ಕದ್ದು
5) ಕಾಮಗಾರಿಯನ್ನು ಹಾಗೂ ಸ್ಮಾರಕದ ನಿರ್ವಹಣೆಯನ್ನು ಜಿಲ್ಲಾಧಿಕಾರಿಗಳು, ಬೆಳಗಾಂ ಜಿಲ್ಲೆ ಬೆಳಗಾಂ ಇವರ ಮೇಲುಸ್ತುವಾರಿಯಲ್ಲಿ ಕೈಗೊಳ್ಳುವುದು.
6) ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.1.00 ಕೋಟಿಗಳಿಗೆ ನಿಗದಿಪಡಿಸಿಕೊಳ್ಳುವುದು ಹಾಗೂ ಒಂದು ಬಾರಿಯ ಅನುದಾನವಾದ್ದರಿಂದ ಯಾವ ಉದ್ದೇಶಕ್ಕೆ ನೀಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸಿಕೊಂಡು ಹಣಬಳಕೆಯ ಬಗ್ಗೆ ಪ್ರಮಾಣಪತ್ರ ಸಲ್ಲಿಸುವುದು. ಈ ಕಾಮಗಾರಿಯ ನಿರ್ವಹಣೆ ಮತ್ತು ಪುನರಾವೃತ್ತಿ ವೆಚ್ಚವನ್ನು ಜಿಲ್ಲಾಡಳಿತವೇ ನಿರ್ವಹಿಸುವುದು.

ಈ ಅನುದಾನವನ್ನು 2009–10ನೇ ಸಾಲಿನ ಲೆಕ್ಕ ಶೀರ್ಷಿಕೆ 4202–04–800–1–08 (ಗಡಿ ಭಾಗಗಳಲ್ಲಿ ಸುವರ್ಣ ೌಧ ನಿರ್ಮಾಣ) ಇದರಡಿ (ಒದಗಿಸಲಾದ ರೂ.1000.00 ಲಕ್ಷಗಳಲ್ಲಿ) ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಆಇ 926 ವೆಚ್ಚ–7 2009, ನಾಂಕ:13.10.2009 ಹಾಗೂ ಯೋಜನಾ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಯೋಇ/76/ಜಶ/2009, ನಾಂಕ:14.09.2009 ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

.ಆರ್. 2439

ವಿಷಯ: ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕು ಅಣ್ಣಿಗೇರಿಯಲ್ಲಿ ಪಂಪ ಸ್ಮಾರಕ ಭವನ ನಿರ್ಮಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಪತ್ರ ಸಂಖ್ಯೆ ಕಸನಿ/23/ ಸ್ಮಾರಕ/2009–10, ದಿನಾಂಕ 03.08.2009.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ 03.08.2009 ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು 009–10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕು ಣ್ಣಿಗೇರಿಯಲ್ಲಿ ಪಂಪ ಸ್ಮಾರಕ ಭವನ ನಿರ್ಮಿಸಲು ರೂ.1.00 ಕೋಟಿಗಳ ಅನುದಾನ ಘೋಷಣೆ ಮಾಡಿ ರೂ.1.00 ೋಟಿಗಳನ್ನು ಪ್ರಸಕ್ತ ಸಾಲಿನ ಕ್ರಿಯಾಯೋಜನೆಯಲ್ಲಿ ಒದಗಿಸಲಾಗಿದೆ ಎಂದು, ಈ ಕಾಮಗಾರಿಗೆ ರೂ.1.00 ಕೋಟಿಗಳ ಂದಾಜು ವೆಚ್ಚ ಪಟ್ಟಿ ಹಾಗೂ ನೀಲಿ ನಕಾಶೆಯನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರು ಸಲ್ಲಿಸಿರುವುದಾಗಿ ತಿಳಿಸಿ,

ಸದರಿ ಯೋಜನೆಗೆ ತಗಲುವ ವೆಚ್ಚ ರೂ.1.00 ಕೋಟಿಗಳನ್ನು ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಇವರಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಇದನ್ನು ಕಾರ್ಯಾನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 46 ಸ್ಮಾಪ್ರನಿ 2009, ಬೆಂಗಳೂರು, ದಿನಾಂಕ: 24ನೇ ಅಕ್ಟೋಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕು ಅಣ್ಣಿಗೇರಿಯಲ್ಲಿ ಪಂಪ ಸ್ಮಾರಕ ಭವನ ನಿರ್ಮಾಣ ಮಾಡಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಿ, ರೂ.1.00 ಕೋಟಿಗಳನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ಇವರಿಗೆ ಬಿಡುಗಡೆ ಮಾಡಿದೆ.

ಷರತ್ತುಗಳು:

1) ಕಾಮಗಾರಿಯ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ/ತಾಂತ್ರಿಕ ಅನುಮೋದನೆಯನ್ನು ಪಡೆದು ಕಾಮಗಾರಿ ಕೈಗೊಳ್ಳುವುದು.
2) ಕಾಮಗಾರಿಯನ್ನು ಟೆಂಡರ್ ಕರೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ರಂತೆ ಕ್ರಮ ಕೈಗೊಳ್ಳತಕ್ಕದ್ದು
3) ಕಾಮಗಾರಿ ಕೈಗೊಂಡ ನಂತರ ಪ್ರಗತಿ ಆಧರಿಸಿ, ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡುವುದು.
4) ಸ್ಮಾರಕ ಭವನ ನಿರ್ಮಾಣ ಕಾರ್ಯವು ನಿಗಧಿಪಡಿಸಿದ ಕಾಲದಲ್ಲಿ ಅಂದಾಜು ಹೆಚ್ಚಾಗದಂತೆ ಮತ್ತು ನಿಗದಿತ ಅನುದಾನದಲ್ಲಿ ಮುಗಿಸತಕ್ಕದ್ದು
5) ಕಾಮಗಾರಿಯನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಧಾರವಾಡ ಇವರ ಮೇಲುಸ್ತುವಾರಿಯಲ್ಲಿ ಕೈಗೊಳ್ಳುವುದು.
6) ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.1.00 ಕೋಟಿಗಳಿಗೆ ನಿಗದಿಪಡಿಸಿಕೊಳ್ಳುವುದು ಹಾಗೂ ಒಂದು ಬಾರಿಯ ಅನುದಾನವಾದ್ದರಿಂದ ಯಾವ ಉದ್ದೇಶಕ್ಕೆ ನೀಡಲಾಗಿದೆಯೋ ಆದೇ ಉದ್ದೇಶಕ್ಕೆ ಬಳಸಿಕೊಂಡು ಹಣಬಳಕೆಯ ಬಗ್ಗೆ ಪ್ರಮಾಣಪತ್ರ ಸಲ್ಲಿಸುವುದು. ಈ ಕಾಮಗಾರಿಯ ನಿರ್ವಹಣೆ ಮತ್ತು ಪುನರಾವೃತ್ತಿ ವೆಚ್ಚವನ್ನು ಜಿಲ್ಲಾಡಳಿತವೇ ನಿರ್ವಹಿಸುವುದು.

ಈ ಅನುದಾನವನ್ನು 2009–10ನೇ ಸಾಲಿನ ಲೆಕ್ಕ ಶೀರ್ಷಿಕೆ 2205–00–102–4–31–059 ಇದರಡಿ (ಒದಗಿಸಿರುವ ರೂ.30.00 ಕೋಟಿಗಳ ಅನುದಾನಲ್ಲಿ) ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಆಇ 796 ವೆಚ್ಚ–7 2009, ದಿನಾಂಕ:02.09.2009 ಹಾಗೂ ಯೋಜನಾ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಯೋಇ/92/ಜಶ/2009, ದಿನಾಂಕ:07.10.2009 ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 2438

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ವಿಷಯ: ಬಸವರಾಜ ರಾಜಗುರು ರವರ ಹೆಸರಿನಲ್ಲಿ ಸ್ಮಾರಕ ನಿರ್ಮಾಣ ಮಾಡುವ ಕುರಿತು.

ಓದಲಾಗಿದೆ: ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಇವರ ಪತ್ರ ಸಂಖ್ಯೆ ಕಸಂಇ:ಬ:ರಾಸ್ಮಾರಕ:2009–10, ದಿನಾಂಕ 22.08.2009.

ಪ್ರಸ್ತಾವನೆ:

2009–10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಖ್ಯಾತ ಹಿಂದೂಸ್ಥಾನಿ ಗಾಯಕರಾದ ಬಸವರಾಜ ರಾಜಗುರು ರವರ ಹೆಸರಿನಲ್ಲಿ ಧಾರವಾಡದಲ್ಲಿ ಸ್ಮಾರಕ ನಿರ್ಮಾಣಕ್ಕಾಗಿ ರೂ.1.00 ಕೋಟಿಗಳನ್ನು ನೀಡುವುದಾಗಿ ಘೋಷಣೆ ಮಾಡಿರುತ್ತಾರೆ.

ಮೇಲೆ ಓದಲಾದ ಪತ್ರದಲ್ಲಿ ಬಸವರಾಜ ರಾಜಗುರು ಅವರು ವಾಸಿಸಿದ ಮನೆಯನ್ನು ವಸ್ತು ಸಂಗ್ರಹಾಲಯವನ್ನಾಗಿ ಪರಿವರ್ತಿಸಲು ಹಾಗೂ ಸ್ಮಾರಕ ಭವನ ನಿರ್ಮಿಸಲು ಪ್ರಸ್ತಾವನೆ ಸಲ್ಲಿಸುವಂತೆ ಉಪನಿರ್ದೇಶಕರು, ಭೂ ಸೇನಾ ನಿಗಮ ಇವರಿಗೆ ತಿಳಿಸಿದ್ದು, ಅವರು ರೂ.1.00 ಕೋಟಿ ಮೊತ್ತದ ಅಂದಾಜು ಪಟ್ಟಿ ಮತ್ತು ನೀಲಿ ನಕ್ಷೆ ಸಲ್ಲಿಸಿರುವ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ, ರೂ.1.00 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ರವರು ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ರೂ.1.00 ಕೋಟಿ ಮೊತ್ತದ ಅಂದಾಜು ಪಟ್ಟಿ ಮತ್ತು ನೀಲಿ ನಕ್ಷೆಯನ್ನು ಆರ್ಥಿಕ ಇಲಾಖೆ ಹಾಗೂ ಯೋಜನಾ ಇಲಾಖೆಗೆ ಕಳುಹಿಸಿ, ಪ್ರಸ್ತಾವನೆಗೆ ಅನುದಾನ ಬಿಡುಗಡೆ

ಕುರಿತು ಅನುಮೋದನೆ ಪಡೆಯಲಾಯಿತು. ಸದರಿ ಯೋಜನೆಯನ್ನು ಕಾರ್ಯಾನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 56 ಸ್ಮಾಪ್ರನಿ 2009, ಬೆಂಗಳೂರು, ದಿನಾಂಕ: 23ನೇ ಅಕ್ಟೋಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಖ್ಯಾತ ಹಿಂದೂಸ್ಥಾನಿ ದಿಗ್ಗಜ ಬಸವರಾಜ ರಾಜಗುರು ಅವರ ಹೆಸರಿನಲ್ಲಿ ಸ್ಮಾರಕ ನಿರ್ಮಾಣ ಮಾಡಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ರೂ.1.00 ಕೋಟಿಗಳನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ಇವರಿಗೆ ಬಿಡುಗಡೆ ಮಾಡಿದೆ.

ಷರತ್ತುಗಳು:

1) ಕಾಮಗಾರಿಯ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ/ತಾಂತ್ರಿಕ ಅನುಮೋದನೆಯನ್ನು ಪಡೆದು ಕಾಮಗಾರಿ ಕೈಗೊಳ್ಳುವುದು.
2) ಕಾಮಗಾರಿಯನ್ನು ಟೆಂಡರ್ ಕರೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ರಂತೆ ಕ್ರಮ ಕೈಗೊಳ್ಳತಕ್ಕದ್ದು
3) ಕಾಮಗಾರಿ ಕೈಗೊಂಡ ನಂತರ ಪ್ರಗತಿ ಆಧರಿಸಿ, ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡುವುದು.
4) ಕಾಮಗಾರಿಯನ್ನು ಪೂರ್ಣಗೊಳಿಸಲು ಸಮಯ ನಿಗಧಿ ಪಡಿಸಿಕೊಂಡು ಆ ಸಮಯದೊಳಗೆ ಪೂರ್ಣಗೊಳಿಸುವುದು.
5) ಕಾಮಗಾರಿಯನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರ ಮೇಲುಸ್ತುವಾರಿಯಲ್ಲಿ ಕೈಗೊಳ್ಳುವುದು.
6) ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.1.00 ಕೋಟಿಗಳಿಗೆ ನಿಗಧಿಪಡಿಸಿಕೊಳ್ಳುವುದು.
7) ಕಾಮಗಾರಿಗೆ ಅನುದಾನ ಉಪಯೋಗಿಸಿದ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸುವುದು

ಈ ಅನುದಾನವನ್ನು 2009–10ನೇ ಸಾಲಿನ ಲೆಕ್ಕ ಶೀರ್ಷಿಕೆ 2205–00–102–4–31–059 (ಕನ್ನಡ ಮತ್ತು ಸಂಸ್ಕೃತಿಗೆ ಉತ್ತೇಜನ) ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ: 08.10.2009 ರ ಟಿಪ್ಪಣಿ ಸಂಖ್ಯೆ: ಆಇ 932 ವೆಚ್ಚ–7 2009 ರಲ್ಲಿ ಆರ್ಥಿಕ ಇಲಾಖೆಯ ಸಹಮತಿಯನ್ನು ಹಾಗೂ ದಿನಾಂಕ: 11.09.2009 ರ ಟಿಪ್ಪಣಿ ಸಂಖ್ಯೆ: ಯೋಇ 89 ಜಶ 2009ರಲ್ಲಿ ಯೋಜನಾ ಇಲಾಖೆಯ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಕೆ. ಭರ್ಮರಾಜಪ್ಪ

ಪಿ.ಆರ್. 2437 ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ವಿಷಯ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ ಕೈಗೊಳ್ಳುವ ಸಂರಕ್ಷಣಾ ಕಾರ್ಯಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಲು ಸಮಿತಿ ರಚಿಸುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಸಂಕಇ 201 ಕೆಎಂಯು 2002 ದಿನಾಂಕ: 22.5.2002.
2) ಸರ್ಕಾರದ ಆದೇಶ ಸಂಖ್ಯೆ: ಸಂಕಇ 201 ಕೆಎಂಯು 2002 ದಿನಾಂಕ:27.6.2002.
3) ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ನಿರ್ದೇಶಕರ, ಪತ್ರ ಸಂಖ್ಯೆ: ಡಿಎಎಂ:ಸಂವಿ/ದ.ವ/ಮೈಸೂರು :2005–06 ದಿನಾಂಕ:28.11.2005.
4) ಸರ್ಕಾರದ ಆದೇಶ ಸಂಖ್ಯೆ: ಸಂಕಇ 152 ಕೆಎಂಯು 2005 ದಿನಾಂಕ: 08.02.2006.
5) ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ನಿರ್ದೇಶಕರ, ಪತ್ರ ಸಂಖ್ಯೆ: ಡಿಎಎಂ:ಎಸಿಟಿ.6/49/2009–10, ದಿನಾಂಕ 18.07.2009

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಸರ್ಕಾರಿ ಆದೇಶದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ವತಿಯಿಂದ ಕೈಗೊಳ್ಳುವ ಸಂರಕ್ಷಣಾ ಕಾಮಗಾರಿಗಳ ಅಂದಾಜು ಮೊತ್ತವು ರೂ.5.00 ಲಕ್ಷ ಮೀರಿದಲ್ಲಿ ಅಂತಹ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ ತಾಂತ್ರಿಕ ಸಮಿತಿಯನ್ನು ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿ ಈ ಕೆಳಕಂಡ ಮೂರು ಜನ ಅಧಿಕಾರೇತರ ತಾಂತ್ರಿಕ ಸದಸ್ಯರನ್ನು ಮೂರು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

(1) ಶ್ರೀ.ಜಿ.ಅಶ್ವತ್ಥನಾರಾಯಣ, ನಿವೃತ್ತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.

(2) ಶ್ರೀ.ಹೆಚ್. ಅಪ್ಪಾಜಪ್ಪ, ನಿವೃತ್ತ ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ.

(3) ಶ್ರೀ.ಎಂ.ಎಂ.ರಾಯಚೂರು, ನಿವೃತ್ತ ಉಪ ಇಂಜಿನಿಯರ್, ಭಾರತೀಯ ಪುರಾತತ್ವ ಸರ್ವೇಕ್ಷಣೆ.

ಮೇಲೆ ಓದಲಾದ ಕ್ರಮಸಂಖ್ಯೆ: (3)ರ ಪತ್ರದಲ್ಲಿ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಇವರು ಕ್ರಮಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿನ ಮೂರು ಜನ ಅಧಿಕಾರೇತರ ತಾಂತ್ರಿಕ ಸದಸ್ಯರ ಪೈಕಿ ಶ್ರೀ ಅಪ್ಪಾಜಪ್ಪ, ನಿವೃತ್ತ ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಇವರು ತಾಂತ್ರಿಕ ಸಮಿತಿಯ ಸದಸ್ಯರಾಗಿ ಮುಂದುವರೆಯಲು ಇಚ್ಛಿಸುವುದಿಲ್ಲವೆಂದು ತಿಳಿಸಿರುವ ಹಿನ್ನಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಶ್ರೀ.ಬಿ.ನರಸಿಂಹಯ್ಯ, ನಿವೃತ್ತ ಅಧೀಕ್ಷರು, ಭಾರತೀಯ ಪುರಾತತ್ವ ಸರ್ವೇಕ್ಷಣೆ, ಚೆನ್ನೈ ಇವರನ್ನು ತಾಂತ್ರಿಕ ಸಮಿತಿಗೆ ಹೊಸದಾಗಿ ಸದಸ್ಯರನ್ನಾಗಿ ನೇಮಿಸಿಕೊಂಡು ಉಳಿದ ಇಬ್ಬರು ಸದಸ್ಯರನ್ನು ಒಳಗೊಂಡಂತೆ ಒಟ್ಟು ಮೂರು ಜನ ಅಧಿಕಾರೇತರ ಸದಸ್ಯರನ್ನು ಮತ್ತೆ 3 ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಬೇಕೆಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಸರ್ಕಾರಿ ಆದೇಶದಲ್ಲಿ ಮೂರು ಜನ ಅಧಿಕಾರೇತರ ಸದಸ್ಯರನ್ನು ಒಳಗೊಂಡಂತೆ ತಾಂತ್ರಿಕ ಸಲಹಾ ಸಮಿತಿಯನ್ನು ದಿನಾಂಕ 08.02.2006 ರಿಂದ ಮೂರು ವರ್ಷಗಳ ಅವಧಿಗೆ ಪುನರ್‌ರಚಿಸಿ ಮುಂದುವರೆಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿ, ತಾಂತ್ರಿಕ ಸಲಹಾ ಸಮಿತಿಯ ಅವಧಿಯನ್ನು ಮುಂದಿನ ಮೂರು ವರ್ಷಗಳ ಅವಧಿಗೆ ಮುಂದುವರೆಸಲು ಕೋರಿ ಅದರಲ್ಲಿ ಶ್ರೀ ಬಿ. ನರಸಿಂಹಯ್ಯ, ನಿವೃತ್ತ ಅಧೀಕ್ಷಕ ಪುರಾತತ್ವಜ್ಞರು, ಭಾರತೀಯ ಪುರಾತತ್ವ ಸರ್ವೇಕ್ಷಣ ಇವರು ದಿನಾಂಕ 20.05.2009 ರಂದು ಮರಣ ಹೊಂದಿರುತ್ತಾರೆಂದು ತಿಳಿಸಿ, ಅವರ ಜಾಗಕ್ಕೆ ಶ್ರೀ ಸಿ.ಬಿ ಪಾಟೀಲ್, ನಿವೃತ್ತ ಉಪ ಅಧೀಕ್ಷಕ ಪುರಾತತ್ವಜ್ಞರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇವರನ್ನು ನೇಮಿಸಿ, ಸಮಿತಿಯನ್ನು ಪುನರ್‌ರಚಿಸಿ ಮುಂದುವರೆಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 134 ಕೆಎಂಯು 2009, ಬೆಂಗಳೂರು, ದಿನಾಂಕ: 14ನೇ ಅಕ್ಟೋಬರ್ 2009

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ ಕೈಗೊಳ್ಳುವ ಸ್ಮಾರಕಗಳ ಸಂರಕ್ಷಣಾ ಕಾಮಗಾರಿಗಳ ಅಂದಾಜು ರೂ.5.00 ಲಕ್ಷ ಮೀರಿದರೆ ಅಂತಹ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಲು ಅಧಿಕಾರಯುಕ್ತ ಸಮಿತಿಗೆ ಸರ್ಕಾರದ ಆದೇಶ ಸಂಖ್ಯೆ: ಸಂಕಇ 152 ಕೆಎಂಯು 2005 ದಿನಾಂಕ: 08.02.2006 ರಲ್ಲಿ ಪುನರ್‌ರಚಿಸಿ ನೇಮಿಸಲಾದ ಅಧಿಕಾರೇತರ ಸದಸ್ಯರಲ್ಲಿ ಶ್ರೀ ಬಿ. ನರಸಿಂಹಯ್ಯ, ನಿವೃತ್ತ ಅಧೀಕ್ಷಕ ಪುರಾತತ್ವಜ್ಞರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇವರು ದಿನಾಂಕ 20.05.2009 ರಂದು ಮರಣ ಹೊಂದಿರುವುದರಿಂದ ಅವರ ಅವಧಿಯನ್ನು ದಿನಾಂಕ 08.02.2009 ರಿಂದ 19.05.2009ರವರೆಗೆ ಹಾಗೂ ಉಳಿದ ಇಬ್ಬರು ಅಧಿಕಾರೇತರ ಸದಸ್ಯರ ಅವಧಿಯನ್ನು 08.02.2009 ರಿಂದ 07.02.2012 ರವರೆಗೆ ಮತ್ತೆ ಮೂರು ವರ್ಷಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರಿಸಿ ಆದೇಶಿಸಿದೆ.

ಶ್ರೀ ಬಿ.ನರಸಿಂಹಯ್ಯ, ನಿವೃತ್ತ ಅಧೀಕ್ಷಕರು, ಭಾರತೀಯ ಪುರಾತತ್ವ ಸರ್ವೇಕ್ಷಣೆ, ಚೆನ್ನೈ ಇವರ ಮರಣದಿಂದ ತೆರವಾದ ಸ್ಥಾನಕ್ಕೆ ಶ್ರೀ ಸಿ.ಬಿ ಪಾಟೀಲ್, ನಿವೃತ್ತ ಉಪ ಅಧೀಕ್ಷಕ ಪುರಾತತ್ವಜ್ಞರು, ಭಾರತೀಯ ಪುರಾತತ್ವ ಸರ್ವೇಕ್ಷಣ ಇವರನ್ನು ತಾಂತ್ರಿಕ ಸಮಿತಿಯ ಅಧಿಕಾರೇತರ ಸದಸ್ಯರಾಗಿ ಹೊಸದಾಗಿ ಈ ಆದೇಶ ಹೊರಡಿಸಿದ ದಿನಾಂಕದಿಂದ ದಿನಾಂಕ 07.02.2012 ರವರೆಗೆ ನೇಮಿಸಿ ಆದೇಶಿಸಿದೆ.

ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಲು ಸಮಿತಿಯ ಸಭೆಯಲ್ಲಿ, ಅಧಿಕಾರೇತರ ಸದಸ್ಯರಲ್ಲಿ (ಇಂಜಿನಿಯರಿಂಗ್) ಕನಿಷ್ಠ ಒಬ್ಬರಾದರೂ ಸಭೆಗೆ ಹಾಜರಾಗಿರತಕ್ಕದ್ದು.

ಅಧಿಕಾರೇತರ ಸದಸ್ಯರು ಸಭೆಗೆ ಹಾಜರಾದಾಗ ನಿಯಮಾನುಸಾರ ಪ್ರವಾಸ ಹಾಗೂ ದಿನಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2383

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ವಿಷಯ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯಲ್ಲಿ ಪುಸ್ತಕ ಖರೀದಿಯ ಬಿಲ್ ಪಾವತಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಅವರ ಪತ್ರ ಸಂಖ್ಯೆ:ಡಿಎಎಂ/ಎಸಿಟಿ/4/2009-10 ದಿನಾಂಕ 12.05.2009

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿ, ಮೆ: ಸಂದೀಪ ಪ್ರಕಾಶನ್, ದೆಹಲಿ ಇವರಿಂದ ಇಲಾಖೆಯ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸಿದ ಬಾಬ್ತು ಡಿ.ಸಿ ಬಿಲ್ ಸಂಖ್ಯೆ 25:2006-07 ದಿನಾಂಕ 13.03.2007 ರಲ್ಲಿ ಜಿಲ್ಲಾ ಖಜಾನೆ, ಮೈಸೂರು ಇವರ ಧನಾದೇಶ ಸಂಖ್ಯೆ 181364, ದಿನಾಂಕ 22.03.2007 ರೂ.1,04,512.00 ಗಳನ್ನು ಲೆಕ್ಕಶೀರ್ಷಿಕೆ 2205-00-103-0-01 (ಯೋಜನೆ) 051 ಸಾಮಾನ್ಯ ವೆಚ್ಚಗಳ ಅಡಿಯಲ್ಲಿ ಭರಿಸಿ, ಪಾವತಿಸಲಾಗಿತ್ತು ಎಂದು ತಿಳಿಸಿ, ಸದರಿ ಧನಾದೇಶವನ್ನು ಹೆಚ್.ಡಿ.ಎಫ್.ಸಿ ಬ್ಯಾಂಕಿನಲ್ಲಿ ಹಾಕಿದಾಗ ಹೆಸರಿನಲ್ಲಿ ವ್ಯತ್ಯಾಸವಿದೆಯೆಂದು ಧನಾದೇಶವನ್ನು ಹಿಂದಕ್ಕೆ ನೀಡಿರುವ ಕಾರಣ ಮತ್ತು ಧನಾದೇಶವು 2 ವರ್ಷಕ್ಕೂ ಮೀರಿರುವುದರಿಂದ ನವೀಕರಿಸಲಾಗಲೀ, ಅಥವಾ ತಿದ್ದುಪಡಿ ಮಾಡಲಾಗಲೀ ಬರುವುದಿಲ್ಲವೆಂದು ಉಪನಿರ್ದೇಶಕರು, ಖಜಾನೆ ಇಲಾಖೆ ಇವರು ಧನಾದೇಶವನ್ನು ಹಿಂದಕ್ಕೆ ಕಳುಹಿಸಿರುವುದರಿಂದ ದಿನಾಂಕ 27.07.2009 ರಂದು ಪತ್ರ ಬರೆದು ಸದರಿ ರೂ.1,04,512.00 ಗಳನ್ನು 2009-10 ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಸೇರಿಸಿ, ಪರಿಶೀಲನಾ ಪಟ್ಟಿಯೊಂದಿಗೆ ಮೆ: ಸಂದೀಪ ಪ್ರಕಾಶನ್, ದೆಹಲಿ ಇವರಿಗೆ ಹಣ ಪಾವತಿಸಲು ಮಂಜೂರಾತಿ ಕೋರಿ ಪ್ರಸ್ತಾಪಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಆದೇಶ ಸಂಖ್ಯೆ: ಕಸಂವಾಪ್ರ 103 ಕೆಎಂಯು 2009, ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್ 2009

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯಲ್ಲಿ ಮೆ: ಸಂದೀಪ ಪ್ರಕಾಶನ್, ದೆಹಲಿ ಇವರಲ್ಲಿ ಪುಸ್ತಕ ಖರೀದಿಸಿದ ಬಾಬ್ತು ರೂ.1,04,512.00 (ರೂ. ಒಂದು ಲಕ್ಷ ನಾಲ್ಕು ಸಾವಿರ ಐದನೂರ ಹನ್ನೆರಡು ಮಾತ್ರ) ಗಳನ್ನು 2009-10 ನೇ ಸಾಲಿನ ಅನುದಾನದಲ್ಲಿ ಲೆಕ್ಕಶೀರ್ಷಿಕೆ 2205-00-103-0-01 (ಯೋಜನೆ) 051 ಸಾಮಾನ್ಯ ವೆಚ್ಚಗಳ ಅಡಿಯಲ್ಲಿ, ಪುನ: ಸದರಿ ಮೊತ್ತಕ್ಕೆ ಬಿಲ್ಲನ್ನು ತರಿಸಿ, ಮೆ: ಸಂದೀಪ ಪ್ರಕಾಶನ್, ದೆಹಲಿ ಇವರಿಗೆ ಪಾವತಿಸಲು ಪಾರದರ್ಶಕ ಅಧಿನಿಯಮ 1999 ಮತ್ತು ಅದರ ನಿಯಮಗಳು 2000 ಗಳನ್ನು ಅನುಸರಿಸುವ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಶಿಇ 2116 ಐಎಫ್(ಬಿ&ಎ) 2009, ದಿನಾಂಕ 01.09.2009 ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10.07.96ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಧರ್ಮರಾಜಪ್ಪ
ಪಿ.ಆರ್. 2286 ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ವಿಷಯ: 2009-10ನೇ ಸಾಲಿಗೆ ಕೆಳದಿ ವಸ್ತುಸಂಗ್ರಹಾಲಯ ಮತ್ತು ಸಂಶೋಧನ ಕೇಂದ್ರ ಇವರಿಗೆ ನಿಗಧಿ ಪಡಿಸಿರುವ ಅನುದಾನ ರೂ.7.63 ಲಕ್ಷ ಹಣವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಅವರ ಪತ್ರ ಸಂಖ್ಯೆ: ಡಿಎಎಂ/ಎಸಿಟಿ/1/57/2007-08 ದಿನಾಂಕ 17.08.2009

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದನ್ವಯ ಕುವೆಂಪು ವಿಶ್ವವಿದ್ಯಾನಿಲಯದವರು ಕೋರಿರುವಂತೆ ಕೆಳದಿ ವಸ್ತುಸಂಗ್ರಹಾಲಯ ಮತ್ತು ಸಂಶೋಧನ ಕೇಂದ್ರದ ಸಿಬ್ಬಂದಿಯ ವೇತನ ಮತ್ತು ಭತ್ಯೆಗಳಿಗಾಗಿ 2009-10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2205-00-103-0-01(ಯೋಜನೇತರ) 101 ಸಹಾಯಾನುದಾನ ಇದರಡಿಯಲ್ಲಿ ಕೆಳದಿ ವಸ್ತು ಸಂಗ್ರಹಾಲಯಕ್ಕೆ ನಿಗಧಿ ಪಡಿಸಲಾಗಿರುವ ಅನುದಾನ ರೂ.7.63 ಲಕ್ಷವನ್ನು ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ ಇವರಿಗೆ ಪೇಯಿಸ್ ರಸೀತಿ ಮೂಲಕ ಬಿಡುಗಡೆ ಮಾಡಲು ಮಂಜೂರಾತಿ ಆದೇಶ ನೀಡುವಂತೆ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಆದೇಶ ಸಂಖ್ಯೆ: ಕಸಂವಾಪ್ರ 166 ಕೆಎಂಯು 2009, ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್ 2009

ಕೆಳದಿ ವಸ್ತುಸಂಗ್ರಹಾಲಯ ಮತ್ತು ಸಂಶೋಧನ ಕೇಂದ್ರದ ಸಿಬ್ಬಂದಿಯ ವೇತನ ಮತ್ತು ಭತ್ಯೆಗಳಿಗಾಗಿ 2009-10ನೇ ಸಾಲಿನಲ್ಲಿ ನಿಗಧಿ ಪಡಿಸಲಾಗಿರುವ ಅನುದಾನ ರೂ.7.63 (ರೂ. ಏಳು ಲಕ್ಷ ಅರವತ್ತೂರು ಸಾವಿರ ಮಾತ್ರ) ಗಳನ್ನು ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ ಇವರಿಗೆ ಪೇಯಿಸ್ ರಸೀತಿ ಮೂಲಕ ಬಿಡುಗಡೆ

ಮಾಡಲು ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಇವರಿಗೆ ಈ ಮೂಲಕ ಸರ್ಕಾರದ ಮಂಜೂರಾತಿ ನೀಡಿದೆ. ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2205–00–103–0–01(ಯೋಜನೇತರ) 101 ಸಹಾಯಾನುದಾನ ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಆಇ 2149 ಐಎಫ್(ಐ&ಎ) 2009, ದಿನಾಂಕ 01.09.2009 ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10.07.96ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಪಿ.ಆರ್. 2285

ವಿಷಯ: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಆಪ್ತಶಾಖೆಗೆ ಸಿಬ್ಬಂದಿಗಳನ್ನು ನೇಮಕ ಮಾಡುವ ಬಗ್ಗೆ.

ಓದಲಾಗಿದೆ: 1 ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅವರ ಟಿಪ್ಪಣಿ ಸಂಖ್ಯೆ: ಕಗಪ್ರಅಪ್ರಾ/ಸಿನೇ/01/2009–10, ದಿನಾಂಕ 22.06.2009

2\. ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅವರ ಟಿಪ್ಪಣಿ ಸಂಖ್ಯೆ: ಕಗಪ್ರಅಪ್ರಾ/ಪತ್ರ/38/2009–10, ದಿನಾಂಕ 19.08.2009

ಪ್ರಸ್ತಾವನೆ:

ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅವರು ಮೇಲೆ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಓದಲಾದ ಟಿಪ್ಪಣಿಗಳಲ್ಲಿ ಅವರ ಆಪ್ತಶಾಖೆಗೆ ಸಿಬ್ಬಂದಿಯನ್ನು ನೇಮಕಾತಿ ಮಾಡುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 33 ಕೆಜಿಎಲ್ 2009, ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್ 2009

ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಆಪ್ತಶಾಖೆಗೆ ಈ ಕೆಳಕಂಡ ಸಿಬ್ಬಂದಿಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ನೇಮಕಾತಿಗಳಿಗೆ ಸಂಬಂಧಪಟ್ಟಂತೆ ಷರತ್ತು ಮತ್ತು ನಿಬಂಧನೆಗಳನ್ನು ನಂತರ ಹೊರಡಿಸಲಾಗುವುದು.

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ನೇಮಕ ಮಾಡಿರುವ ಹುದ್ದೆ ಹಾಗೂ ಜಾರಿಗೆ ಬರುವ ದಿನಾಂಕ
1.	ಶ್ರೀಮತಿ ಎಸ್.ಜಿ. ಹೇಮಾಂಬಿಕ W/o ಲೇಟ್ ನಾಗೇಶ್, ನಂ.8/3, ಮುನೇಶ್ವರ ಬ್ಲಾಕ್, "ಡಿ" ಕ್ರಾಸ್, ಮಠದಹಳ್ಳಿ, ಆರ್.ಟಿ.ನಗರ್ ಪೋಸ್ಟ್, ಬೆಂಗಳೂರು – 32	ಆಪ್ತ ಸಹಾಯಕಿ; ದಿನಾಂಕ 15.06.2009
2.	ಶ್ರೀ ಹೆಚ್.ಟಿ. ವಿಜಯ S/o ಹೆಚ್.ಟಿ. ತಿಪ್ಪೇಶಪ್ಪ, ಹೊನ್ನೇಕೆರೆ, ಅರಳಹಳ್ಳಿ ಪೋಸ್ಟ್, ಬಾಗುರು ಮಾರ್ಗ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	ಗ್ರೂಪ್ –ಡಿ; ದಿನಾಂಕ 19.08.2009

ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಆಇ 883 ವೆಚ್ಚ–7/2009 ದಿನಾಂಕ 16–09–2009ರಲ್ಲಿ ಪಡೆದು ಈ ಆದೇಶವನ್ನು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಪಿ.ಆರ್. 2281

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ತಿದ್ದೋಲೆ

ಸಂಖ್ಯೆ:ಕಸಂವಾಪ್ರ 196 ಸ್ವೀಮರ 2009, ಬೆಂಗಳೂರು, ದಿನಾಂಕ: 20ನೇ ಅಕ್ಟೋಬರ್, 2009

ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 196 ಸ್ವೀಮರ 2009, ದಿನಾಂಕ:30.7.2009ರಲ್ಲಿ ಮೌಲ್ಯಮಾಪನ ಕಾರ್ಯಗಳಿಗಾಗಿ ಇಲಾಖಾ ಮೌಲ್ಯಮಾಪನ ಸಮಿತಿಯಲ್ಲಿ ನೇಮಿಸಲಾದ ಸದಸ್ಯರುಗಳಲ್ಲಿ ಕ್ರಮ ಸಂಖ್ಯೆ(5)ರಲ್ಲಿರುವ ಮಾಹಿತಿ ತಂತ್ರಜ್ಞಾನ ಇಲಾಖೆಯ ಪ್ರತಿನಿಧಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸಮಿತಿಯ ಸದಸ್ಯತ್ವದಿಂದ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2420

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಬುದ್ದಪ್ಪಾ, ಮಾಜಿ ಸಿ.ಪಿ.ಸಿ., ಸೇಡಂ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ: ಸಿಬಿ(8)18/ 2008–09 ದಿನಾಂಕ: 29–01–2009.
2. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 27–02–2009
3. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ (8) 18/2008–09 ದಿನಾಂಕ: 06–07–2009

ಪ್ರಸ್ತಾವನೆ:

ಶ್ರೀ ಬುದ್ದಪ್ಪಾ, ಇವರು ಶೋರಾಪುರ ಪೊಲೀಸ್ ಠಾಣೆಯಲ್ಲಿ ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ. (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಘೋರ ಲೋಪವೆಸಗಿರುವ ಕಾರಣದ ಮೇಲೆ ಇನ್ನೋರ್ವ ಅಧಿಕಾರಿಯೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6ರ ಜೊತೆ 8 ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

" ಶ್ರೀ ಬುದ್ದಪ್ಪಾ ಸಿ.ಪಿ.ಸಿ.–532, ಶೋರಾಪುರ ಪೊಲೀಸ್ ಠಾಣೆ, ಆದ ನೀವು ದಿನಾಂಕ:21–05–2006ರ ರಾತ್ರಿ 10–00 ಗಂಟೆಯಿಂದ ಠಾಣೆ ಪಹರೆ ಕರ್ತವ್ಯದಲ್ಲಿದ್ದು, ಅಂದು ಬಂದಿಖಾನೆಯಲ್ಲಿದ್ದ ಆರೋಪಿ ಲಕ್ಕಪ್ಪ ತಂದೆ ಕನಕಪ್ಪ ಪೂಜಾರಿ ಈತನಿಗೆ ಕೈಕೋಳ ತೊಡಿಸದೇ ಬಂದಿಖಾನೆಗೆ ಕೀಲಿಯನ್ನು ಹಾಕದೇ ಹಾಗೆಯೇ ಇಟ್ಟಿದ್ದರಿಂದ ದಿನಾಂಕ: 22–05–2006 ರಂದು ಬೆಳಗಿನ ಜಾವ 3–30 ಗಂಟೆಯ ಸಮಯದಲ್ಲಿ ಆರೋಪಿ ಲಕ್ಕಪ್ಪ ಪೂಜಾರಿ ಈತನು ಲಾಕಪ್‌ನಿಂದ ಓಡಿಹೋಗಿದ್ದು, ಆತನು ಓಡಿ ಹೋಗಲು ಪರೋಕ್ಷವಾಗಿ ಸಹಾಯ ಮಾಡಿ ಕರ್ತವ್ಯದಲ್ಲಿ ಘೋರಲೋಪ ವೆಸಗಿರುವಿರಿ. "

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 29–01–09ರ ಆದೇಶದಲ್ಲಿ "ಅರ್ಜಿದಾರರನ್ನು ತಕ್ಷಕಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಲಾಗಿದೆ."

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 58 ಪೊಸಿಅ 2009 ಬೆಂಗಳೂರು ದಿನಾಂಕ: 31ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬುದ್ದಪ್ಪಾ ಮಾಜಿ ಸಿ.ಪಿ.ಸಿ., ಸೇಡಂ ಪೊಲೀಸ್ ಗುಲ್ಬರ್ಗಾ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿ

ಟಿ.ಎನ್. ರವಿಪ್ರಕಾಶ್

ಪಿ.ಆರ್. 2174

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ : ಶ್ರೀ ಡಿ. ಪ್ರಭಾಕರ್, ಎಚ್.ಸಿ.–2111, ಶಿವಾಜಿನಗರ ಪೊಲೀಸ್ ಠಾಣೆ, ಬೆಂಗಳೂರು ಜಿಲ್ಲೆ, ಇ ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಡೆಪ್ಯೂಟಿ ಪೊಲೀಸ್ ಕಮೀಷನರ್, ಕೇಂದ್ರ ವಿಭಾಗ, ಬೆಂಗಳ ಇವರ ಆದೇಶ ಸಂಖ್ಯೆ: 43:ಡಿಇ:ಆರ:6(1):92 ದಿ: 20–10–95
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಕಮೀಷನರ್, ಆಡಳಿತ ಮತ್ತು ಸಂಚ ಬೆಂಗಳೂರು, ಇವರ ಆದೇಶ ಸಂಖ್ಯೆ: 59/ಅಪೀಲು/95–96 ದಿನಾಂಕ: 29–02–1996
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ:29–05–08.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸ ಅಪೀಲು(2)32/2008–09 ದಿನಾಂಕ: 20–02–2009.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 46 ಸಿಎನ್‌ಎಸ್ 2 ದಿನಾಂಕ: 22–07–2009.

ಪ್ರಸ್ತಾವನೆ:

ಶ್ರೀ ಡಿ. ಪ್ರಭಾಕರ್, ಎಚ್.ಸಿ.–2111, ಶಿವಾಜಿನಗರ ಪೊಲೀಸ್ ಠಾಣೆ, ಬೆಂಗಳೂರು, ಇವರು ವೈಯ್ಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮ ಅರ್ಜಿದಾರರೆಂದು ಕರೆಯಲ್ಪಡುವ) ಅನಧಿಕೃತವಾಗಿ ಗೈರುಹಾಜರಿ ಹಾಗೂ ದುರ್ನಡತೆಗಾಗಿ ಇವರ ವಿರುದ್ಧ ಕರ್ನಾಟಕ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

1) "ಆರೋಪಿತ ಪೊಲೀಸ್ ಅಧಿಕಾರಿಯಾದ ಪಿ.ಸಿ.–4764, ಪ್ರಭಾಕರ್, ವೈಯಾಲಿಕಾವಲ್ ಪೊಲೀಸ್ ಠಾಣೆ ನೀವು ದಿನಾಂಕ: 20–03–92 ರಂದು ಮಧ್ಯಾಹ್ನ 1–00 ಗಂಟೆಯಿಂದ ರಾತ್ರಿ 9–00 ಗಂಟೆಯ ಕರ್ತವ್ಯಕ್ಕೆಬರಬೇಕಾಗಿದ್ದು, ಕರ್ತವ್ಯಕ್ಕೆ ಬರದೇ ಗೈರುಹಾಜರಾಗಿರುವುದು.

2) ಆರೋಪಿತ ಪೊಲೀಸ್ ಅಧಿಕಾರಿಯಾದ ಪಿ.ಸಿ.–4764, ಪ್ರಭಾಕರ್, ವೈಯಾಲಿಕಾವಲ್ ಪೊಲೀಸ್ ಠಾಣೆ ನೀವು ದಿ:20–03–92 ರಂದು ಸುಮಾರು 3–30 ಗಂಟೆ (ಮದ್ಯಾಹ್ನ) ಸಮಯದಲ್ಲಿ ಮದ್ಯಪಾನ ಮಾ ಪಾನಮತ್ತರಾಗಿದ್ದು, ವೈಯಾಲಿಕಾವಲ್ ಪೊಲೀಸ್ ಠಾಣೆಯ ಮುಂಭಾಗದ ರಸ್ತೆಯಲ್ಲಿ ನಿಂತು. ಸಾರ್ವಜನಿಕರನ್ನು ಅ ಶಬ್ದಗಳಿಂದ "ನಾನು ಯಾರು ಗೊತ್ತಾ ಪೊಲೀಸ್, ಸೂಳೆ ಮಕ್ಕಳ ನಿಮ್ಮಮ್ಮನಾಕೇಯಾ ಬೋಳಿಮಕ್ಕಳಾ" ಎಂದುಬೈ ಸಾರ್ವಜನಿಕರ ನೆಮ್ಮದಿಗೆ ಭಂಗವುಂಟುಮಾಡಿದ್ದು ಮತ್ತು ವಾಹನಗಳ ಸಂಚಾರಕ್ಕೆ ತೊಂದರೆ ಉಂಟುಮಾಡಿದ್ದು, ಇಲಾಖೆಯಲ್ಲಿರುವ ನೀವು ಒಬ್ಬ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಗೆ ಸಲ್ಲದ ರೀತಿ ವರ್ತಿಸಿ ದುರ್ನಡತೆ ಪ್ರದರ್ಶಿ ಆರೋಪ.

3) ಆರೋಪಿತ ಪೊಲೀಸ್ ಅಧಿಕಾರಿಯಾದ ಪಿ.ಸಿ.–4764, ಪ್ರಭಾಕರ್, ಆದ ನಿಮ್ಮನ್ನು ದಿ:20–03–92 ಸುಮಾರು 3–45 ಗಂಟೆಯಲ್ಲಿ ಪಾನಮತ್ತರಾಗಿದ್ದ ನಿಮ್ಮನ್ನು ಪಿ.ಎಸ್.ಐ. ಶ್ರೀ ಈ.ಆರ್.ನಾರಾಯಣ ಸ್ವಾಮಿ, ವೈಯಾಲಿ ಪೊಲೀಸ್ ಠಾಣೆ, ರವರು ಎಚ್.ಸಿ.–1247, 1899 ಮತ್ತು ಪಿಸಿ–7439, ರವರ ಬೆಂಗಾವಲಿನಲ್ಲಿ ಮೆಮೋ ನಂ ದಿನಾಂಕ: 20–03–92ರಲ್ಲಿ ಆಟೋರಿಕ್ಷಾ ನಂ:ಎಂವೈಡಿ:7579ರಲ್ಲಿ ಕೆ.ಸಿ.ಜಿ. ಆಸ್ಪತ್ರೆಗೆ ಮೆಮೋ ಮಾಡಿಸಿಕೊಂಡು ಕಳುಹಿಸಿದ್ದು, ನೀವು ಕೆ.ಸಿ.ಜಿ. ಆಸ್ಪತ್ರೆಯ ಬಳಿ ಆಟೋರಿಕ್ಷಾದಿಂದ ಇಳಿದು ಕೈಯಿಂದ ಕೊಸರಾಡಿ ಬಿಡಿಸಿಕೊಂಡು ಕೆಳಗೆ

ಒಂದು ಕಲ್ಲನ್ನು ತೆಗೆದು ಕೊಂಡು ಎತ್ತಿಹಾಕಲು ಪ್ರಯತ್ನಿಸಿದ್ದು ಹಾಗೂ ಬೆದರಿಕೆ ಹಾಕಿ ಆಸ್ಪತ್ರೆಯ ಬಳಿ ಅಸಭ್ಯ ರೀತಿ ವರ್ತಿಸಿ ತಪ್ಪಿಸಿಕೊಂಡು ಓಡಿಹೋಗಿದ್ದು, ದುರ್ನಡತೆ ಪ್ರದರ್ಶಿಸಿರುವ ಆರೋಪ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಡೆಪ್ಯೂಟಿ ಪೊಲೀಸ್ ಕಮೀಷನರ್, ಕೇಂದ್ರ ವಿಭಾಗ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 20–10–95ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಿ ಆದೇಶಿಸಿದ್ದಾರೆ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮಾನವೀಯ ದೃಷ್ಟಿಯಿಂದ ಇವರನ್ನು ಕರ್ತವ್ಯಕ್ಕೆ ಪುನರ್ ನೇಮಿಸಿ, ಇವರ ವೇತನವನ್ನು ಪೊಲೀಸ್ ಪೇದೆಯ ಹುದ್ದೆಯ ಕನಿಷ್ಠ ವೇತನಕ್ಕೆ ಇಳಿಸಿ ಅಲ್ಲಿಂದ ಹೊಸದಾಗಿ ವಾರ್ಷಿಕ ವೇತನ ಬಡ್ತಿಯನ್ನು ಪಡೆಯುವುದು ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ: 29–02–96ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರದ ಆದೇಶವನ್ನು ಭಾಗಶ: ಮಾರ್ಪಡಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಮೇಲ್ಮನವಿ ಪ್ರಾಧಿಕಾರವು ಭಾಗಶ: ಮಾರ್ಪಡಿಸಿದ ದಂಡನಾದೇಶವು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 59(1)(ಬಿ)ಗೆ ವ್ಯತಿರಿಕ್ತವಾಗಿರುವುದನ್ನು ಮನಗಂಡು ಪರಿಷ್ಕರಣ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಲು ತೀರ್ಮಾನಿಸಿ, ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 67 ಪೊಸಿಅ 2009 ಬೆಂಗಳೂರು, ದಿನಾಂಕ: 26ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಡಿ. ಪ್ರಭಾಕರ್, ಎಚ್.ಸಿ.–2111, ಶಿವಾಜಿನಗರ ಪೊಲೀಸ್ ಠಾಣೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿ ಈ ಕೆಳಕಂಡಂತೆ ಆದೇಶಿಸಿದೆ.

I. ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ಕಾಲಿಕ ವೇತನ ಶ್ರೇಣಿ ರೂ.1040–1900/– ಆಗಿದ್ದು (1994ರ ಪರಿಷ್ಕೃತ ವೇತನ ಶ್ರೇಣಿಯಂತೆ) ಇವರ ವೇತನವನ್ನು ಸದರಿ ಹುದ್ದೆಯ ಕನಿಷ್ಠ ವೇತನ ರೂ.1040–ಕ್ಕೆ (ದಿ:01–03–1996 ರಿಂದ ಜಾರಿಗೆ ಬರುವಂತೆ) ಐದು ವರ್ಷಗಳ ಕಾಲ ಸಂಚಿತ ಪರಿಣಾಮ ರಹಿತ (Without Cummulative Effect)ವಾಗಿ ಇಳಿಸಿದೆ. ದಂಡನೆಯ ಅವಧಿಯಲ್ಲಿ ಇವರು ಯಾವುದೇ ವಾರ್ಷಿಕ ವೇತನ ಬಡ್ತಿಯಾಗಲೀ ಅಥವಾ ಪದೋನ್ನತಿಯಾಗಲಿ ಪಡೆಯಲು ಅರ್ಹರಿರುವುದಿಲ್ಲ, ಇವರ ವೇತನವು ಸ್ಥಿರವಾಗಿರುತ್ತದೆ.

II. ಮೇಲ್ಮನವಿ ಪ್ರಾಧಿಕಾರವು ಇವರ ದಂಡನೆಯನ್ನು ಮಾರ್ಪಡಿಸಿ, ಆದೇಶ ಹೊರಡಿಸಿದ ತಿಂಗಳಿನ ಮುಂದಿನ ತಿಂಗಳು ಅಂದರೆ ದಿ:01–03–1996 ರಿಂದ ಜಾರಿಗೆ ಬರುತ್ತದೆ [ದಂಡನಾದೇಶದ ದಿನಾಂಕ:29–02–1996 ಆಗಿರುವುದರಿಂದ]

III. ಇವರ ದಂಡನೆಯು ದಿ:01–03–1996 ರಿಂದ 31–03–2001ರ ವರೆಗೆ ಐದು ವರ್ಷಗಳು ಇರುತ್ತದೆ.

IV. ದಂಡನಾವಧಿಯಾದ ಐದು ವರ್ಷಗಳು ಪೂರ್ಣಗೊಂಡ ನಂತರ ಇವರ ವೇತನವನ್ನು ಇವರು ದಂಡನಾವಧಿಯ ಪೂರ್ವದಲ್ಲಿ ಪಡೆಯುತ್ತಿದ್ದ ಮೂಲ ವೇತನ ಹಾಗೂ ತಡೆಹಿಡಿಯಲಾಗಿದ್ದ ಐದು ವಾರ್ಷಿಕ ವೇತನ ಬಡ್ತಿಗಳನ್ನು ಸೇರಿಸಿ ಕಾಲ್ಪನಿಕವಾಗಿ ಮರುನಿಗದಿಗೊಳಿಸುವುದು.

V. ಸೇವೆಯಿಂದ ವಜಾಗೊಂಡು ಮತ್ತೆ ಸೇವೆಗೆ ಪುನರ್ ನೇಮಕವಾಗುವವರೆಗಿನ ಕರ್ತವ್ಯ ನಿರ್ವಹಿಸದ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿ (Dies-Non) ಎಂದು ಪರಿಗಣಿಸಿದೆ.

VI. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2175

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ : ಶ್ರೀ ಎಂ.ಎಂ. ನದಾಫ್, ಪಿ.ಎಸ್.ಐ., ಅಬಕಾರಿದಳ, ಜಿಲ್ಲಾ ಪೊಲೀಸ್ ಕಛೇರಿ, ಹಾವೇರಿ ಜಿ
ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಹಾಗೂ ಡೆಪ್ಯೂಟಿ ಪೊಲೀಸ್ ಕಮೀಷನರ್, ಕೇಂದ್ರ ವಿಭಾಗ, ಬೆಂಗಳೂರ ಇವರ ಆದೇಶ ಸಂಖ್ಯೆ: 43:ಡಿಇ:ಆರ:6(1):92 ದಿ: 20–10–95
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾಂ, ಇವ ಆದೇಶ ಸಂಖ್ಯೆ: ಅಪೀಲು 15/ಉವ/2008 ದಿನಾಂಕ: 31–05–2008
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 21–08–2008
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ ಅಪೀಲು(2)66/2008–09 ದಿನಾಂಕ: 04–12–2008
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 68 ಸಿಎನ್‌ಎಸ್ 2009 ದಿನಾಂ 22–07–2009

ಪ್ರಸ್ತಾವನೆ:

ಶ್ರೀ ಎಂ.ಎಂ. ನದಾಫ್, ಇವರು ಹಾವೇರಿ ಜಿಲ್ಲೆಯ ಗುತ್ತಲ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ನಿರ್ಲಕ್ಷತೆ, ದುರ್ನಡತೆ, ಬೇಜವಾಬ್ದಾರಿತನ ಪ್ರದರ್ಶಿ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕ ದೋಷಾರೋಪಣೆಯನ್ನು ಹೊರಿಸಲಾಗಿತ್ತು,

ದೋಷಾರೋಪಣೆ:

"ಶಿಸ್ತುಪಾಲನಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೀವು ಗುತ್ತಲ ಪೊಲೀಸ್ ಠಾಣೆಯ ಸರಹದ್ದಿನ ಗು ಲಮಾಣಿ ತಾಂಡಾದಲ್ಲಿ ದಿ:17–10–2007 ರಂದು ಗಣೇಶಪ್ಪ ಶಿವಪ್ಪ ಲಮಾಣಿ ಮತ್ತು ರಾಜಾ ಲಕ್ಕಪ್ಪ ಲಮಾಣಿ ಹಾ ಇತರರು ನಲ್ಲಿಯ ನೀರಿನ ಸಲುವಾಗಿ ಹೊಡೆದಾಡಿದ ಮಾಹಿತಿ ನಿಮ್ಮ ಠಾಣೆಗೆ ಸಾಯಂಕಾಲ 07–00 ಗಂಟೆಗೆ ತಲು ನಂತರ ನೀವು ಗಾಯಾಳುಗಳನ್ನು ಗುತ್ತಲದ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿ, ಅವರಿಂದ ಯಾವುದೇ ದೂರು ಸ್ವೀಕರಿಸ ಮಸ್ತಿಯಲ್ಲಿ ಸರ್ಕಾರಿ ವಾಹನ ಮತ್ತು ರಿವಾಲ್ವರ ತೆಗೆದುಕೊಂಡು ತಂಟೆಗೆ ಸಂಬಂಧಪಡದ ತಾಂಡಾದ ಕರಿ ಹನುಮಂತಪ್ಪ ಲಮಾಣಿ 30 ವರ್ಷ, ಈತನಿಗೆ ಲಾಠಿಯಿಂದ ಹೊಡೆದು ಗಾಯಪಡಿಸಿ, ಅದನ್ನು ಕೇಳಲು ಬ ಸಾರ್ವಜನಿಕರಿಗೆ ಅವಾಚ್ಯವಾಗಿ ಬೈದು ರಿವಾಲ್ವರಿನಿಂದ ಗುಂಡು ಹಾರಿಸುತ್ತೇನೆಂದು ಬೆದರಿಸಿದ್ದಕ್ಕಾಗಿ ಸಾರ್ವಜನಿಕರು ವ ನಿಮ್ಮ ಮಧ್ಯೆ ಗಲಾಟೆಯಾಗಿ ನಿಮ್ಮ ಸಿಬ್ಬಂದಿಯೊಂದಿಗೆ ಠಾಣೆಗೆ ಬಂದು ನಡೆದ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸ ಬಿ.ಜೆ.ಪಿ. ಮತ್ತು ಕಾಂಗ್ರೆಸ್ ಪಕ್ಷದ ಜನರ ನಡುವೆ ಗಲಟೆ ನಡೆದಿದೆ ಎಂದು ಡಿ.ಎ.ಆರ್. ತುಕಡಿಗಳನ್ನು ಕಳುಹಿಸಲು ನಿಸ್ತ ಮುಖಾಂತರ ತಪ್ಪು ಮಾಹಿತಿ ಕಳುಹಿಸಿ, ಪರಿಸ್ಥಿತಿಯನ್ನು ನಿಯಂತ್ರಿಸದೇ ಮತ್ತಷ್ಟು ಗಲಾಟೆ ನಡೆಯಲು ನೀವು ನೇರವ ಕಾರಣೀಭೂತರಾಗಿ ಸದರಿ ಘಟನೆಯು ದಿನಪತ್ರಿಕೆಗಳಲ್ಲಿ ಬರುವಂತೆ ಮಾಡಿ ನಿಮ್ಮ ಕರ್ತವ್ಯವನ್ನು ಸಮರ್ಪಕವ ನಿರ್ವಹಿಸದೇ ಆದ್ಯ ಕರ್ತವ್ಯದಲ್ಲಿ ತೀವ್ರ ಕರ್ತವ್ಯ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುತ್ತೀರಿ. ಅಲ ಸಾರ್ವಜನಿಕರಲ್ಲಿ ಇಲಾಖೆಯ ಘನತೆ ಧಕ್ಕೆಯನ್ನುಂಟು ಮಾಡಿ ದುರ್ನಡತೆ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಹಾವೇರಿ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ದಿನಾಂಕ: 07–12–20 ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣ ಬೀರದಂತೆ 3 ತಿಂಗಳ ಕಾಲ ತಡೆಹಿಡಿಯುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾಂ, ಇವರು ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾ 31–05–2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರು ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಶಿಸ್ತು ಪ್ರಾಧಿಕ ದಂಡನೆಯನ್ನು ಭಾಗಶ: ಮಾರ್ಪಡಿಸುವ ಸಲುವಾಗಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾ ಆಯೋಗವು ಶಿಸ್ತು ಪ್ರಾಧಿಕಾರದ ದಂಡನೆಗೆ ಓದಲಾದ (5)ರ ಪತ್ರದಲ್ಲಿ ಸಹಮತಿ ನೀಡಿರುವ ಹಿನ್ನೆಲೆಯಲ್ಲಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 290 ಪೊಸಿಅ 2008 ಬೆಂಗಳೂರು, ದಿನಾಂಕ: 01ನೇ ಸೆಪ್ಟೆಂಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ನದಾಫ್, ಪಿ.ಎಸ್.ಐ., ಅಬಕಾರಿ ದಳ, ಜಿಲ್ಲಾ ಪೊಲೀಸ್ ಕಛೇರಿ, ಹಾವೇರಿ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

.ಆರ್. 2176

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ : ಶ್ರೀ ಕೆ. ಪ್ರಭಾಕರ್, ಪಿ.ಎಸ್.ಐ., ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ, ಮೈಸೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಇವರ ಆದೇಶ ಸಂಖ್ಯೆ: ಶಿಕ್ಷೆ/101 /2006-07 ಓ.ಬಿ/ಸಿವಿಲ್/181/06-07 ದಿ: 23-11-2006
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ: ಅಪೀಲು/29/2006-07 ದಿನಾಂಕ: 10-04-2007
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ:13-08-07
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)74/2007-08 ದಿನಾಂಕ: 12-11-2007 & 08-09-2008
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 44 ಸಿಎನ್‌ಎಸ್ 2009 ದಿನಾಂಕ: 21-07-2009.

ಪ್ರಸ್ತಾವನೆ:

ಶ್ರೀ ಕೆ. ಪ್ರಭಾಕರ್, ಪಿ.ಎಸ್.ಐ., ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ನಿರ್ಲಕ್ಷತೆ, ಬೇಜವಾಬ್ದಾರಿತನ ಹಾಗೂ ಕರ್ತವ್ಯಲೋಪವೆಸಗಿರುವ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ದಿ:05-07-06ರಂದು ಹಗಿನವಾಳು ಗ್ರಾಮದಲ್ಲಿ ಪಿರ್ಯಾದಿ ಚಿಕ್ಕಯ್ಯನವರ ಪತ್ನಿ ಮಹದೇವಮ್ಮ ಎಂಬುವವರನ್ನು ಪಿರ್ಯಾದಿಯ ತಮ್ಮಂದಿರಾದ ಮಹದೇಶ ಮತ್ತು ಲಿಂಗಪ್ಪ, ಇರವರುಗಳು ಆಸ್ತಿಯ ವಿಚಾರವಾಗಿ ಮನಸ್ತಾಪದಿಂದ ಚಾಕುವಿನಿಂದ ಕೊಲೆ ಮಾಡಿರುತ್ತಾರೆಂದು ಚಿಕ್ಕಯ್ಯ, ಹಗಿನವಾಳು ಗಾಮರವರು ನೀಡಿದ ದೂರಿನ ಮೇರೆಗೆ ನಂಜನಗೂಡು ಗ್ರಾಮಾಂತರ ಠಾಣೆ ಮೊ.ಸಂ.177/06 ಕಲಂ 448, 341, 114, 302, ರೆ/ವಿ 34 ಐ.ಪಿ.ಸಿ. ಪ್ರಕರಣ ದಾಖಲಾಗಿರುತ್ತದೆ. ಹಿಂದಿನಿಂದಲೂ ಆರೋಪಿಗಳಿಗೂ ಮತ್ತು ಮೃತಳಿಗೂ ಆಸ್ತಿಯ ವಿಚಾರದಲ್ಲಿ ವಿವಾದವಿದ್ದು, ಈ ಘಟನೆ ನಡೆಯುವ ಮೊದಲು ಮೃತಳು ಒಟ್ಟು ನಾಲ್ಕು ಬಾರಿ ದೂರುಗಳನ್ನು ನಂಜನಗೂಡು ಗ್ರಾಮಾಂತರ ಠಾಣೆಗೆ ನೀಡಿರುತ್ತಾರೆ.

ನೀವು ಒಬ್ಬ ಜವಾಬ್ದಾರಿಯುತ ಠಾಣಾಧಿಕಾರಿಯಾಗಿದ್ದು, ಈ ಪ್ರಕರಣದ ಹಿನ್ನೆಲೆಯಲ್ಲಿ ಮೃತಳು ಆರೋಪಿಗಳಿಂದ ಆಸ್ತಿಯ ವಿವಾದದಲ್ಲಿ ಉಂಟಾದ ಗಲಭೆ ಬಗ್ಗೆ ಈ ಪ್ರಕರಣ ವರದಿಯಾಗುವ ಮೊದಲೇ ದೂರುಗಳನ್ನು ಮೃತಳು ನೀಡಿದ್ದರು ಸಹ ಮುಂಜಾಗ್ರತಾ ಕ್ರಮವಾಗಿ ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ 107, 145, ರೀತ್ಯಾ ಕೇಸು ಗಳನ್ನು ದಾಖಲು ಮಾಡದೇ ಇರುವುದರ ಮೂಲಕ ಕರ್ತವ್ಯದಲ್ಲಿ ಬೇಜವಾಬ್ದಾರಿ ಹಾಗೂ ನಿರ್ಲಕ್ಷತೆ ಪ್ರದರ್ಶಿಸಿ ಕರ್ತವ್ಯಲೋಪ ವೆಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 23-11-2006ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷದ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 10-04-2007ರ ಆದೇಶದಲ್ಲಿ ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪದಲ್ಲಿ ಇವರ ಪಾತ್ರವನ್ನು ಗಮನಿಸಿದಲ್ಲಿ ದಂಡನೆಯು ಅಧಿಕವೆಂದು ಪರಿಗಣಿಸಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಲು ತೀರ್ಮಾನಿಸಿ, ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 349 ಪೊಸಿಅ 2007 ಬೆಂಗಳೂರು, ದಿನಾಂಕ: 24 ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ. ಪ್ರಭಾಕರ್, ಪಿ.ಎಸ್.ಐ. ನಂಜನಗೂಡು ಗ್ರಾಮಾಂತರ ಠಾಣೆ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಒಂದು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2060

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ : **ಶ್ರೀ.ಎಸ್.ರಾಮಚಂದ್ರ, ಮಾಜಿ ಸಿ.ಪಿ.ಸಿ., ಹರಿಹರ ನಗರ ದಾವಣಗೆರೆ, ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.**

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಸಿಬಿ(8)2/2005-06 ದಿನಾಂಕ:17-04-2006
2. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:30-05-2006
3. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8) 2005-06 ದಿ:14-2-2007.
4. ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 83 ಸಿಎನ್‌ಎಸ್ 07 ದಿನಾಂಕ:12-03-2009 ಮತ್ತು 21.7.2009.

ಪ್ರಸ್ತಾವನೆ:

ಶ್ರೀ.ಎಸ್.ರಾಮಚಂದ್ರ, ಮಾಜಿ ಸಿ.ಪಿ.ಸಿ., ಹರಿಹರ ನಗರ ದಾವಣಗೆರೆ, ಜಿಲ್ಲೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಬರಹಗಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕರ್ತವ್ಯದಲ್ಲಿ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇತರೆ ಇಬ್ಬರು ಸಿಬ್ಬಂದಿಗಳೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ಮತ್ತು 8 ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

1. ನೀವು ದಿ:17-01-2002 ರಿಂದ 03-06-2003ರ ವರೆಗೆ ಹರಿಹರ ನಗರ ಠಾಣಾ ಬರಹಗಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಆ ವೇಳೆಯಲ್ಲಿ ಠಾಣೆಯ ಹಣಕಾಸಿನ ವ್ಯವಹಾರವನ್ನು ನಿರ್ವಹಿಸಿದ್ದು, ದಿ:07-08-2002 ರಿಂದ 30-09-2002ರ ವರೆಗೆ ಠಾಣೆಯಲ್ಲಿ ದಾಖಲು ಮಾಡಿದ ಒಟ್ಟು 75 ಎಂ.ವಿ. ಪ್ರಕರಣಗಳಲ್ಲಿ ವಸೂಲಿ ಮಾಡಿದ ದಂಡದ ಒಟ್ಟು ಮೊತ್ತ ರೂ.7,500/- (ರೂಪಾಯಿ ಏಳು ಸಾವಿರದ ಐದುನೂರು ಮಾತ್ರ) ಗಳನ್ನು ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡು ಕರ್ತವ್ಯದಲ್ಲಿ ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ.

2. ದಿ:18-10-2002 ರಿಂದ 03-06-2003ರ ವರೆಗೆ ಎಂ.ವಿ. ಪ್ರಕರಣಗಳಲ್ಲಿ ದಂಡ ವಸೂಲಿ ಮಾಡಿದ್ದು ಒಟ್ಟು ಹಣ ರೂ.32,100/- (ರೂಪಾಯಿ ಮೂವತ್ತೆರೆಡು ಸಾವಿರದ ಒಂದು ನೂರು ಮಾತ್ರ)ಗಳ ಬಗ್ಗೆ ಒಟ್ಟು 22 ನಕಲಿ ಚಲನಗಳನ್ನು ಸೃಷ್ಟಿಸಿ ಮೊತ್ತವನ್ನು ಸರ್ಕಾರಕ್ಕೆ ಜಮಾಮಾಡಿದ ರೀತಿಯಲ್ಲಿ ಸುಳ್ಳು ದಾಖಲೆ ಸೃಷ್ಟಿ ಮಾಡಿ ಸದರಿ ಮೊತ್ತ ರೂ.32,100/-ಗಳನ್ನು ದುರುಪಯೋಗ ಪಡಿಸಿಕೊಂಡು ಕರ್ತವ್ಯದಲ್ಲಿ ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ.

3. ನೀವು ದಿ:17-01-2002 ರಿಂದ 03-06-2003ರ ವರೆಗೆ ಐ.ಎಂ.ವಿ ಪ್ರಕರಣಗಳಲ್ಲಿ ದಂಡ ವಸೂಲಿ ಮಾಡಿದ ದಿಗಳಲ್ಲಿ ಹೆಚ್ಚಿನ ಮೊತ್ತಕ್ಕೆ ದಂಡ ಹಾಕಿದ್ದ ರಸೀದಿ ಸಂಖ್ಯೆ:83311, 242002, 242027, 59517, 192417 ಹಾಗೂ 023 ಗಳಲ್ಲಿ ಕಡಿಮೆ ಮೊತ್ತವನ್ನು ನಮೂದಿಸಿ ಸರ್ಕಾರಕ್ಕೆ ಜಮಾ ಮಾಡಿ ಒಟ್ಟು ರೂ.800/- (ಎಂಟು ನೂರು ತ್ರ)ಗಳನ್ನು ದುರುಪಯೋಗ ಪಡಿಸಿಕೊಂಡು ಕರ್ತವ್ಯದಲ್ಲಿ ತೀವ್ರತರದ ದುರ್ನಡತೆಯನ್ನು ಪ್ರದರ್ಶಿಸಿರುತ್ತೀರಿ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ನಾಂಕ:17-04-2006ರ ಆದೇಶದಲ್ಲಿ ``ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಿ ಅಮಾನತ್ತಿನ ಅವಧಿಯನ್ನು ಮಾನತ್ತೆಂದೆ ಪರಿಗಣಿಸುವ ಶಿಕ್ಷೆ ವಿಧಿಸಿರುತ್ತಾರೆ.``

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ದಂಡನೆಯ ಪ್ರಮಾಣವು ಧಿಕವೆಂದು ಪರಿಗಣಿಸಿ, ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ತೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 101 ಪೊಸಿಅ 2007 ಬೆಂಗಳೂರು, ದಿನಾಂಕ:22ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ತಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ.ಎಸ್.ರಾಮಚಂದ್ರ, ಮಾಜಿ ಸಿ.ಪಿ.ಸಿ., ಹರಿಹರ ನಗರ ವಣಗೆರೆ, ಜಿಲ್ಲೆ, ಇವರಿಗೆ ಶಿಸ್ತುಪ್ರಾಧಿಕಾರದ ದಂಡನೆಯ ಆದೇಶವನ್ನು ಭಾಗಶ: ಮಾರ್ಪಡಿಸಿ, ಈ ಕೆಳಕಂಡಂತೆ ದೇಶಿಸಿದೆ.

i) ಅರ್ಜಿದಾರರನ್ನು ಸೇವೆಗೆ ಪುನರ್ ನೇಮಕ ಮಾಡಲಾಗಿದೆ.

ii) ಇವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮಬೀರುವಂತೆ ತಡೆಹಿಡಿಯಲಾಗಿದೆ.

iii ಸೇವೆಯಿಂದ ವಜಾಗೊಂಡು ಪುನರ್ ನೇಮಕಾತಿ ಹೊಂದಿ ಕರ್ತವ್ಯಕ್ಕೆ ಹಾಜರಾಗುವವರೆಗಿನ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿ (Dies-Non) ಎಂದು ಪರಿಗಣಿಸಲಾಗಿದೆ.

iv) ಅಮಾನತ್ತಿನಲ್ಲಿದ್ದ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2061

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ : ಶ್ರೀಮತಿ ಎಸ್.ಪಿ. ಅಟಗಲ್, ಮ.ಪಿ.ಸಿ.-784, ಸವದತ್ತಿ ಪೊಲೀಸ್ ಠಾಣೆ, ಹಾಗೂ ಶ್ರೀ ಆರ್.ಬಿ. ಪಾಟೀಲ್, ಪಿ.ಸಿ.-2462, ಗೋಕಾಕ ಗ್ರಾಮೀಣ ಪೊಲೀಸ್ ಠಾಣೆ, ರವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಬೆಳಗಾವಿ ಜಿಲ್ಲೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ 2/ಇವಿ/04/2007 ಅ.ಪು.ಸಂ: 962/07 ದಿ: 07-10-07
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ: ಅಪೀಲು 4/ಉವ/2008 ದಿನಾಂಕ: 19-04-2008
3. ಅರ್ಜಿದಾರರುಗಳ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 12-08-2008
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)52/2008-09 ದಿನಾಂಕ: 20-10-2008
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 217 ಸಿಎನ್‌ಎಸ್ 2008 ದಿನಾಂಕ:24-07-2009

ಪ್ರಸ್ತಾವನೆ:

ಶ್ರೀಮತಿ ಎಸ್.ಪಿ. ಅಟಗಲ್, ಮ.ಪಿ.ಸಿ.-784, ಸವದತ್ತಿ ಪೊಲೀಸ್ ಠಾಣೆ, ಹಾಗೂ ಶ್ರೀ ಆರ್.ಬಿ. ಪಾಟೀಲ್, ಪಿ.ಸಿ.-2462, ಗೋಕಾಕ ಗ್ರಾಮೀಣ ಪೊಲೀಸ್ ಠಾಣೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರುಗಳ ವಿರುದ್ಧ

ಘೋರ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರ ಜೊತೆಗೆ 8 ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು,

ದೋಷಾರೋಪಣೆ:

"ಆಪಾದಿತ ಪೊಲೀಸ್ ಅಧಿಕಾರಿಗಳಾದ ನೀವುಗಳು ಒಬ್ಬರಿಗೊಬ್ಬರು ಅನೈತಿಕ ಸಂಬಂಧ ಇಟ್ಟುಕೊಂಡಿದ್ದು ಅಲ್ಲದೆ, ಆರ್.ಬಿ. ಪಾಟೀಲ, ಸಿ.ಪಿ.ಸಿ. ಬ.ನಂ:2452, ಗೋಕಾಕ ಗ್ರಾಮೀಣ ಪೊಲೀಸ್ ಠಾಣೆ, ನೀವು ಮೇಲಿಂದ ಮೇಲೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರ ಉಳಿದು ಗೋಕಾಕದಿಂದ ಸವದತ್ತಿಗೆ ಬಂದು ಸವದತ್ತಿ ಪೊಲೀಸ್ ವಸತಿಗೃಹದಲ್ಲಿ ವಾಸವಾಗಿರುವ ಎಸ್.ಪಿ. ಅಟಗಲ್ ಮ.ಪಿ.ಸಿ.–784 ರವರೊಂದಿಗೆ ದಿ:18–09–06 ರಂದು ರಾತ್ರಿ ಅನೈತಿಕ ಸಂಬಂಧ ಹೊಂದಿ ಅರೆನಗ್ನಾವಸ್ಥೆಯಲ್ಲಿ ಸಿಕ್ಕಿಬಿದ್ದು, ವಸತಿ ಗೃಹ ಲೇನದಲ್ಲಿ ಗೌರವಸ್ಥ ಕುಟುಂಬಗಳಿಗೆ ದುಷ್ಪರಿಣಾಮ ಬೀರುವಂತೆ ವರ್ತಿಸಿ ನಿಮ್ಮ ಕರ್ತವ್ಯದಲ್ಲಿ ಘೋರ ದುರ್ನಡತೆ ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಬೆಳಗಾವಿ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 17–10–2007ರ ಆದೇಶದಲ್ಲಿ ಅರ್ಜಿದಾರರಿಗೆ ಪೊಲೀಸ್ ಪೇದೆ ಹುದ್ದೆಯ ಕನಿಷ್ಠ ಮೂಲ ವೇತನಕ್ಕೆ ಇಳಿಸಿ, ಅರ್ಜಿದಾರರುಗಳು ಹೊಸದಾಗಿ ವೇತನ ಬಡ್ತಿಗಳನ್ನು ಗಳಿಸುವ ದಂಡನೆ ವಿಧಿಸಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 19–04–2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರುಗಳು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಶಿಸ್ತು ಪ್ರಾಧಿಕಾರದ ದಂಡನಾದೇಶವು ಕರ್ನಾಟಕ ನಾಗರಿಕ ಸೇವಾ ನಿಯಮಗಳು, ನಿಯಮ 59(1)(ಬಿ)ಗೆ ವ್ಯತಿರಿಕ್ತವಾಗಿರುವುದರಿಂದ ಪರಿಷ್ಕರಣ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಲು ತೀರ್ಮಾನಿಸಿ, ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 238 ಪೊಸಿಅ 2008 ಬೆಂಗಳೂರು, ದಿನಾಂಕ: 26ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ,

ಶ್ರೀಮತಿ ಎಸ್.ಪಿ. ಅಟಗಲ್, ಮ.ಪಿ.ಸಿ.–784, ಸವದತ್ತಿ ಪೊಲೀಸ್ ಠಾಣೆ, ಹಾಗೂ ಶ್ರೀ ಆರ್.ಬಿ. ಪಾಟೀಲ್, ಪಿ.ಸಿ.–2462, ಗೋಕಾಕ ಗ್ರಾಮೀಣ ಪೊಲೀಸ್ ಠಾಣೆ, ಇವರುಗಳು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿ ಈ ಕೆಳಕಂಡಂತೆ ಆದೇಶಿಸಿದೆ.

i) ಇವರುಗಳ ವೇತವನ್ನು ಪಿ.ಸಿ. ಹುದ್ದೆಯ ಕನಿಷ್ಠ ವೇತನ ರೂ.5,800/–ಕ್ಕೆ ಐದು ವರ್ಷಗಳ ಕಾಲ ಸಂಚಿತ ಪರಿಣಾಮ ರಹಿತವಾಗಿ ಇಳಿಸಲಾಗಿದೆ. ಈ ಆದೇಶವು ಶಿಸ್ತುಪ್ರಾಧಿಕಾರವು ಹೊರಡಿಸಿದ ದಂಡನಾದೇಶದ ದಿನಾಂಕದಿಂದ ಜಾರಿಗೆ ಬರುತ್ತದೆ.

ii) ಈ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿಯಾಗಲಿ ಅಥವಾ ಪದೋನ್ನತಿಯಾಗಲಿ ಪಡೆಯಲು ಅರ್ಹರಿರುವುದಿಲ್ಲ ಇವರ ವೇತನವು ಸ್ಥಿರವಾಗಿರುತ್ತದೆ.

iii ದಂಡನಾವಧಿಯಾದ 5 ವರ್ಷಗಳು ಪೂರ್ಣಗೊಂಡ ನಂತರ ಇವರುಗಳ ವೇತನವನ್ನು ದಂಡನಾವಧಿಯ ಪೂರ್ವದಲ್ಲಿ ಪಡೆಯುತ್ತಿದ್ದ ಮೂಲ ವೇತನ ಹಾಗೂ ತಡೆಹಿಡಿಯಲಾಗಿದ್ದ 5 ವಾರ್ಷಿಕ ವೇತನ ಬಡ್ತಿಗಳನ್ನು ಸೇರಿಸಿ ಕಾಲ್ಪನಿಕವಾಗಿ ಮರುನಿಗದಿಗೊಳಿಸುವುದು.

iv) ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2062

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ : ಶ್ರೀ ಜಗದೀಶ ಸಿ.ಪಿ.ಸಿ. 411, ನೇತಾಜಿ ನಗರ ಪೊಲೀಸ್ ಠಾಣೆ, ರಾಯಚೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು, ಇವರ ಆದೇಶ ಸಂಖ್ಯೆ: ಸಿಬ್ಬಂದಿ(3)/ಇವಿ/19/2007 ಓ.ಬಿ. ಸಂ: 225/08 ದಿನಾಂಕ: 06-03-2008
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ: ಅಪೀಲು58/ಈವ/2008/6768ಅ.ಪು.ಸಂ:65/ಈವ/2008 ದಿನಾಂಕ:07-12-08
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 03-03-2009
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)128/ 2008-09 ದಿನಾಂಕ: 03-07-2009

ಪ್ರಸ್ತಾವನೆ:

ಶ್ರೀ ಜಗದೀಶ ಸಿ.ಪಿ.ಸಿ. 411, ನೇತಾಜಿ ನಗರ ಪೊಲೀಸ್ ಠಾಣೆ, ರಾಯಚೂರು ಜಿಲ್ಲೆ, ಇವರು ತುರ್ವಿಹಾಳ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ದುರ್ನಡತೆಯನ್ನು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿಯಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

"ಶ್ರೀ ಜಗದೀಶ್ ರವರೇ ನೀವು ಶ್ರೀ ಪ್ರಕಾಶ ತಂದೆ ನಾಗೇಶ್ವರರಾವ ಸಾ: ಗುಂಜಳ್ಳಿ ಕ್ಯಾಂಪ ಎಂಬ ಮಟಕಾ ಬುಕ್ಕಿಯನ್ನು ಪಿ.ಎಸ್.ಐ., ತುರ್ವಿಹಾಳ ಠಾಣೆ ರವರು ಕರೆದುಕೊಂಡು ಬರಲು ಹೇಳಿದ್ದಾರೆ ನಡೆ ಠಾಣೆಗೆ ಹೋಗೋಣ ಅಂತಾ ಹೇಳಿ ಆತನನ್ನು ಠಾಣೆಗೆ ಕರೆದುಕೊಂಡು ಹೋಗದೇ, ಆತನ ಪರವಾಗಿ ಆತನ ಮಿತ್ರನಾದ ಬಸಪ್ಪನಿಂದ ರೂ.300/- ಅಕ್ರಮ ಸಂಭಾವನೆ ಪಡೆದಿದ್ದು ಅಲ್ಲದೇ ವಾರದಲ್ಲಿ ಒಂದೆರಡಲು ಸಲ ಗುಂಜಳ್ಳಿ ಕ್ಯಾಂಪ್‌ಗೆ ಹೋಗಲಿ ಅಲ್ಲಿ ಕಾನೂನು ಬಾಹಿರ ಚಟುವಟಿಕೆಗಳಾದ ಮಟಕಾ/ಇಸ್ಪೆಟ್ ಜೂಜಾಟದಲ್ಲಿ ತೊಡಗಿದ್ದವರಿಂದ ಅಕ್ರಮ ಸಂಭಾವನೆ ಪಡೆದು ಕಾನೂನು ಬಾಹಿರ ಚಟುವಟಿಕೆಗಳು ನಡೆಯುವಂತೆ ಪರೋಕ್ಷವಾಗಿ ಸಹಕರಿಸಿ ಕರ್ತವ್ಯದಲ್ಲಿ ಅತೀವ ದುರ್ನಡತೆಯನ್ನು ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 06-03-2008ರ ಆದೇಶದಲ್ಲಿ ಅರ್ಜಿದಾರರ ಮುಂದಿನ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಮುಂದೂಡಲಾಗಿದೆ. ದಿನಾಂಕ:22-06-2007ರಿಂದ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವವರೆಗಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಶಿಸ್ತು ಪ್ರಾಧಿಕಾರದ ಆದೇಶವನ್ನು ಭಾಗಶಃ ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂಬರುವ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಎರಡು ವರ್ಷಗಳ ಕಾಲ ಮುಂದೂಡಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 07-12-08ರಲ್ಲಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 59 ಪೊಸಿಅ 2009 ಬೆಂಗಳೂರು, ದಿನಾಂಕ: 21ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಗದೀಶ ಸಿ.ಪಿ.ಸಿ. 411, ನೇತಾಜಿ ನಗರ ಪೊಲೀಸ್ ಠಾಣೆ, ರಾಯಚೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2181

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ : ಶ್ರೀ ಎಸ್. ಉಮೇಶ್, ಮಾಜಿ ಪಿ.ಸಿ., ಯಶವಂತಪುರ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ : 1. ಶಿಸ್ತು ಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗ, ಬೆಂಗಳೂರು ಇವರ ಆದೇಶ ಸಂಖ್ಯೆ: 11/ಡಿಇ/ಆರ್–6/ಡಿಸಿಪಿ.ಉ/2005 ದಿನಾಂಕ: 29–10–2007

2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಕಮೀಷನರ್, ಆಡಳಿತ, ಬೆಂಗಳೂರು, ಇವರ ಆದೇಶ ಸಂಖ್ಯೆ:104/ಅಪೀಲು/2007 ದಿನಾಂಕ: 13–06–2008

3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 07–02–2009

4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)116/2008–09 ದಿನಾಂಕ: 08–05–2009

ಪ್ರಸ್ತಾವನೆ:

ಶ್ರೀ ಎಸ್. ಉಮೇಶ್, ಇವರು ಯಶವಂತಪುರ ಪೊಲೀಸ್ ಠಾಣೆ, ಬೆಂಗಳೂರು, ಇಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ದುರ್ನಡತೆ ಪ್ರದರ್ಶಿಸಿದರು ಎಂಬ ಕಾರಣಕ್ಕಾಗಿ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:–

"ನೀವು ಅಂದರೆ ಶ್ರೀ ಉಮೇಶ್, ಪಿ.ಸಿ.–6082, ಯಶವಂತಪುರ ಪೊಲೀಸ್ ಠಾಣೆ, ಆದ ನೀವು ಯಶವಂತಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ: 01–09–2005 ರಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ನಿಮ್ಮ ಪತ್ನಿ ಶ್ರೀಮತಿ ಸವಿತ ಎಸ್., ರವರನ್ನು ಹೆಚ್ಚಿನ ವರದಕ್ಷಿಣೆಗಾಗಿ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ನೀಡಿರುವುದಾಗಿ ಶ್ರೀಮತಿ ಸವಿತಾ ಎಸ್., ರವರು ಬೆಂಗಳೂರಿನ ಅಲಸೂರು ಗೇಟ್ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಈ ಬಗ್ಗೆ ದೂರು ದಾಖಲಿಸಿಕೊಂಡು ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ಶಿವಮೊಗ್ಗ ಜಿಲ್ಲೆಯ ಭದ್ರಾವತಿ, ಹೊಸನಗರ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿದ್ದು, ಸದರಿ ದೂರು ನಿಮ್ಮ ವಿರುದ್ಧ ಭದ್ರಾವತಿ ಹೊಸನಗರ ಪೊಲೀಸ್ ಠಾಣೆ ಮೊ.ಸಂ:121/05 ಕಲಂ 498ಎ–506 ಸಹಿತ 34 ಐಪಿಸಿ ಮತ್ತು 3,4, ಡಿಪಿ ಆಕ್ಟ್ ಪ್ರಕಾರ ಪ್ರಕರಣ ದಾಖಲಾಗಿದ್ದು, ನಿಮ್ಮನ್ನು ಸದರಿ ಪೊಲೀಸರು ದಿ:10–10–2005 ರಂದು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಮಾನ್ಯ ನ್ಯಾಯಾಲಯವು 1(ಒಂದು) ದಿನದ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತದೆ.

ನೀವು ಶಿಸ್ತು ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಹೆಚ್ಚಿನ ವರದಕ್ಷಿಣೆಗಾಗಿ ನಿಮ್ಮ ಪತ್ನಿಯನ್ನು ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ಆರೋಪದ ಮೇಲೆ ನಿಮ್ಮ ವಿರುದ್ಧ ಪ್ರಕರಣ ದಾಖಲಾಗಿದ್ದು, ಸದರಿ ಕೇಸಿನಲ್ಲಿ ದಸ್ತಗಿರಿಯಾಗಿ ನ್ಯಾಯಾಂಗ ಬಂಧನಕ್ಕೆ ಒಳಪಟ್ಟಿರುವಿರಿ, ಇದರಿಂದ ನೀವು ಇಲಾಖೆಗೆ ಸಲ್ಲದ ರೀತಿಯಲ್ಲಿ ದುರ್ನಡತೆಯನ್ನು ಪ್ರದರ್ಶಿಸಿದ್ದು, ಇಲಾಖೆಗೆ ಅಗೌರವ ತಂದಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:29–10–2007ರ 'ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಿ ಆದೇಶಿಸಿದ್ದಾರೆ.ದಿನಾಂಕ:22–10–2005 ರಿಂದ 19–07–2007ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಕಮೀಷನರ್, ಆಡಳಿತ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 13–06–2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅತೀವ ದುರ್ನಡತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 36 ಪೊಸಿಅ 2009 ಬೆಂಗಳೂರು ದಿನಾಂಕ: 06ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 5(3)ರಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್. ಉಮೇಶ್, ಮಾಜಿ ಪಿ.ಸಿ., ಯಶವಂತಪುರ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1962

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಇಂಧನ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಇಎನ್ 292 ಎನ್‌ಸಿಇ 2007, ಬೆಂಗಳೂರು, ದಿನಾಂಕ: 7ನೇ ಅಕ್ಟೋಬರ್, 2009

ಸರ್ಕಾರಿ ಆದೇಶ ಸಂಖ್ಯೆ: ಇಎನ್ 292 ಎನ್‌ಸಿಇ 2007 ದಿನಾಂಕ:25.6.2009ರ ಆದೇಶ ಭಾಗದ ಮೊದಲನೆ ಕಂಡಿಕೆಯಲ್ಲಿ ಈ ಕೆಳಗಿನಂತೆ ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

" Longitude $74^0$45' to $74^0$46' & Latituted:$14^0$23' to $14^0$25'

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2374

ಎಸ್.ಜಿ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಸೇರ್ಪಡೆ

ಸಂಖ್ಯೆ:ಸಿಐ:76:ಎಂಜಿಎಸ್:2008(1), ಬೆಂಗಳೂರು, ದಿನಾಂಕ: 12ನೇ ಅಕ್ಟೋಬರ್, 2009

ದಿನಾಂಕ:18.8.2009ರ ಆದೇಶ ಸಂಖ್ಯೆ:ಸಿಐ 76 ಎಂಜಿಎಸ್ 2008 ರ ಆದೇಶ ಭಾಗದ 6 ಮತ್ತು 7ನೇ ಸಾಲಿನಲ್ಲಿನ "ಅಂತರ್ಜಲ ವಿಭಾಗಗಳನ್ನು ಬಲಡಿಸಲು" ಆದನಂತರ "(ಖನಿಜಾಡಳಿತದ ಕಾರ್ಯಚಟುವಟಿಕೆಗಳೂ ಸೇರಿದಂತೆ)" ಎಂದು ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

ಇನ್ನುಳಿದಂತೆ, ಸದರಿ ಆದೇಶದಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2379

ಎ.ಪಿ. ರಾಮಕೃಷ್ಣ
ಪೀಠಾಧಿಕಾರಿ (ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆಕುಕ 261 ಹೆಚ್‌ಎಸ್‌ಹೆಚ್ 2009, ಬೆಂಗಳೂರು, ದಿನಾಂಕ: 22ನೇ ಅಕ್ಟೋಬರ್, 2009

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು, ಸರ್ಕಾರಿ ಸೇವೆಯಲ್ಲಿ ಸಕ್ರಮಗೊಳಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ:ಆಕುಕ 350 ಹೆಚ್‌ಎಸ್‌ಹೆಚ್ 2003 ದಿನಾಂಕ:17.3.2006 ರ ಕ್ರಮಸಂಖ್ಯೆ 306 ರಲ್ಲಿ "ಡಾ:ಮಹೇಶ್ ಜಿ. ಮೋರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಮುಸ್ತೂರು" ಎಂಬುದಕ್ಕೆ ಬದಲಾಗಿ "ಡಾ:ಮಹೇಶ ಬಿ. ಮೋರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಮುಷ್ಠೂರು" ಎಂದು ಜನ್ಮ ದಿನಾಂಕವನ್ನು "1.10.1979" ಎಂಬದರ ಬದಲಾಗಿ "1.10.1971" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2456

ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು-1)

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗುಲ್ಬರ್ಗಾ ಜಿಲ್ಲೆ ಮತ್ತು ಗುಲ್ಬರ್ಗಾ ಜಿಲ್ಲೆಯ ಅಫಜಲ್ ಪುರ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದ್ದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್. 2354

ವಿಷಯ : M/s Sri Dhanalakshmi Power Pvt., Ltd., ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/ಕೊಂಕಿ/2007/2971 ದಿನಾಂಕ: 03.11.2007/25.01.2008.

2. ದಿನಾಂಕ: 13.02.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಓದಲಾದ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s. Sri Dhanalakshmi Power Pvt., Ltd., ಕಂಪನಿಗೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕು, ಕೊಂಕಿ ಗ್ರಾಮದ ಬಳಿ ಬೆಡ್ತಿ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕೊಂಕಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 13.02.2009ರಂದು ನಡೆದ ಹಂಚಿಕೆ ಸಮಿತಿ ಸಭೆಯ ಮುಂದೆ ಮಂಡಿಸಲಾಗಿದ್ದು, ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಮೆ: ಧನಲಕ್ಷ್ಮಿ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಪರಿಗಣಿಸಲಾಗಿದೆ. ಆದುದರಿಂದ, ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ: ಇಎನ್ 49 ಎನ್‌ಸಿಇ 2008, ಬೆಂಗಳೂರು, ದಿನಾಂಕ: 03.ನೇ ಅಕ್ಟೋಬರ್, 2009.

M/s Sri Dhanalakshmi Power Pvt., Ltd., ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕು, ಕೊಂಕಿ ಗ್ರಾಮದ ಬಳಿ ಬೆಡ್ತಿ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:

1.(ಅ) ಸದರಿ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ ನಲ್ವತ್ತೈದು ದಿನಗಳೊಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಅಂತಹ ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣಾ ಶುಲ್ಕವನ್ನು ತುಂಬುವುದು.

2.(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4. ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದ್ದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜಿ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್. 2355

ಒಳಾಡಳಿತ ಸಚಿವಾಲಯ

ವಿಷಯ : ಮತೀಯ ನಾಗರೀಕ ಗಲಭೆಗಳಲ್ಲಿ ತೊಂದರೆಗೊಳಗಾದವರಿಗೆ ಪರಿಹಾರ ಧನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 75 ಎಸ್‌ಎಸ್‌ಟಿ 1993, ದಿನಾಂಕ:2.3.1993.

2. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 05 ಸಿಆರ್‌ಆರ್ 2003, ದಿನಾಂಕ:24.3.2005.

3. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 45/ಬಿಆರ್‌ಎಸ್/2009, ದಿನಾಂಕ:21.8.2009.

ಪ್ರಸ್ತಾವನೆ:

ಮೇಲೆ ಓದಲಾದ (1) ಮತ್ತು (2)ರ ಆದೇಶದನ್ವಯ ಮತೀಯ, ನಾಗರೀಕ ಹಾಗೂ ಒಂದೇ ಧರ್ಮದ ವಿವಿಧ ಕೋಮುಗಳ ನಡುವೆ ನಡೆಯುವ ಗಲಭೆಗಳಲ್ಲಿ ಮೃತಪಟ್ಟ, ಗಾಯಗೊಂಡ, ಆಸ್ತಿಪಾಸ್ತಿ ನಷ್ಟ ಹೊಂದಿದವರಿಗೆ ಪರಿಹಾರ ಮಂಜೂರು ಮಾಡಲು ಪರಿಹಾರದ ಮೊತ್ತವನ್ನು ನಿಗದಿಗೊಳಿಸಿ, ಪರಿಹಾರಧನವನ್ನು ಮಂಜೂರು ಮಾಡುವ ಪೂರ್ಣ ಅಧಿಕಾರವನ್ನು ಆಯಾಯ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ ಹಾಗೂ ಮತೀಯ ಗಲಭೆಯಿಂದ ಹಾನಿಗೀಡಾದ ಅಥವಾ ನೆಲಸಮ ಹೊಂದಿದ ಪೂಜಾ ಸ್ಥಳವನ್ನು ದುರಸ್ಥಿಗೊಳಿಸುವ ಅಥವಾ ಸದರಿ ಪೂಜಾ ಸ್ಥಳವನ್ನು ಮೊದಲಿದ್ದಂತೆ ನಿರ್ಮಿಸುವ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆಯೂ ಸಹಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಗಿದೆ.

ಇಂತಹ ಗಲಭೆಗಳಲ್ಲಿ ಸಾವು-ನೋವು ಅನುಭವಿಸಿದವರಿಗೆ, ಆಸ್ತಿ-ಪಾಸ್ತಿ ನಷ್ಟ ಹೊಂದಿದವರಿಗೆ ಪರಿಹಾರ ಮಂಜೂರು ಮಾಡುವ ಹಾಗೂ ಹಾನಿಗೊಳಗಾದ ಪೂಜಾ ಸ್ಥಳವನ್ನು ದುರಸ್ಥಿ ಮಾಡುವ ಪುನರ್ ನಿರ್ಮಾಣ ಮಾಡುವ ಕೆಲಸಗಳು ತುಂಬಾ ತುರ್ತಿನವು ಹಾಗೂ ಅಗತ್ಯವಾದವುಗಳು ಆಗಿರುವುದರಿಂದ ಮಾನವೀಯತೆ ದೃಷ್ಟಿಯಿಂದ ಅನುಕಂಪದ ಮೇರೆಗೆ ತಕ್ಷಣ ಪುನರ್ ವಸತಿ, ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಆದ್ದರಿಂದ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಿಂದ ಆಡಳಿತಾತ್ಮಕ ತೊಂದರೆಗಳನ್ನು ನಿವಾರಿಸುವ ಹಾಗೂ ಪುನರ್ ವಸತಿ ಕಾರ್ಯಕ್ರಮಗಳಗಳ ವಿಳಂಬಕ್ಕೆ ಅವಕಾಶ ಮಾಡದೆ ತ್ವರಿತವಾಗಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಅನುಕೂಲವಾಗುವಂತೆ ಓದಲಾದ (1) ಮತ್ತು (2)ರ ಸರ್ಕಾರಿ ಆದೇಶದನ್ವಯ ಅಧಿಕಾರ ಪ್ರತ್ಯಾಯೋಜನೆ ಆದೇಶ ಹೊರಡಿಸಿದೆ. ಸಂತ್ರಸ್ತರ ಪರಿಹಾರ, ಪುನರ್ವಸತಿಗಾಗಿ ಅವಶ್ಯ ಅನುದಾನ ಬಿಡುಗಡೆ ಮಾಡಲು ಉದ್ದೇಶಿಸಿ ಮೇಲೆ ಓದಲಾದ (3)ರ ಸರ್ಕಾರದ ಆದೇಶದನ್ವಯ ಈ ಕೆಳಗಿನ ಆದೇಶ.

ಸರ್ಕಾರಿ ಆದೇಶ ಸಂಖ್ಯೆ:ಹೆಚ್‌ಡಿ 28 ಸಿಆರ್‌ಆರ್ 2009, ಬೆಂಗಳೂರು, ದಿನಾಂಕ: 21ನೇ ಅಕ್ಟೋಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ತಲಾ 1 ಲಕ್ಷ ರೂ.ಗಳಂತೆ ಅನುಬಂಧದಲ್ಲಿ ತೋರಿಸಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ "2235-60-200-3-100 (ಯೋಜನೇತರ)" ರಡಿಯಲ್ಲಿ ಒಟ್ಟು 29 ಲಕ್ಷ ರೂ.ಗಳ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಿ ಮಂಜೂರಾತಿ ನೀಡಿದೆ.

1) ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಗಲಭೆಗಳಿಗೆ ಸಂಬಂಧಿಸಿದಂತೆ ಕಟ್ಟಡ ದುರಸ್ಥಿ, ಪುನರ್ ನಿರ್ಮಾಣ ಮುಂತಾದ ಕಾರ್ಯಕ್ರಮಗಳಿಗೆ ಎಷ್ಟು ಪ್ರಮಾಣದ ಖರ್ಚನ್ನು ಭರಿಸಲಾಗಿದೆ ಎಂಬ ಬಗ್ಗೆ ಲೆಕ್ಕ ಪತ್ರ ದಾಖಲೆಗಳನ್ನು ನಿರ್ವಹಿಸತಕ್ಕದ್ದು.

2) ಪ್ರತಿ ಜಿಲ್ಲಾಧಿಕಾರಿಯು ಸರ್ಕಾರದಿಂದ ಬಿಡುಗಡೆ ಮಾಡಲಾದ ಅನುದಾನದಲ್ಲಿ, ವಿನಿಯೋಗಿಸಲ್ಪಟ್ಟ ಮೊತ ಹಾಗೂ ಎಷ್ಟು ಮೊತ್ತ ಉಳಿದಿದೆ ಎಂಬುದರ ಬಗೆಗಿನ ವಿವರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3) ಜಿಲ್ಲಾಧಿಕಾರಿಗಳು ಸರ್ಕಾರದಿಂದ ಹಂಚಿಕೆಯಾದ ಅನುದಾನವನ್ನು ಬಿಡುಗಡೆ (ವಿತರಣೆ) ಮಾಡಲು ಮಾತ್ರ ಖಜಾನೆಯಿಂದ ಹಣ ಪಡೆಯಬಹುದು. ಅನುದಾನವನ್ನು ತೆಗೆದು ವೈಯಕ್ತಿಕ ಠೇವಣಿ ಅಥವಾ ಯಾವುದೇ ಖಾತೆಗೆ ಜಮಾ ಮಾಡತಕ್ಕದ್ದಲ್ಲ. ಈ ಆರ್ಥಿಕ ವರ್ಷದ ಕೊನೆಯಲ್ಲಿ ತಪ್ಪದೇ ಜರೂರಾಗಿ ಉಳಿದ ಅನುದಾನವನ್ನು ಸರ್ಕಾರಕ್ಕೆ ಆದ್ಯರ್ಪಣೆ ಮಾಡತಕ್ಕದ್ದು (ನಿಗಧಿತ ಅವಧಿಯೊಳಗೆ). ಹೀಗೆ ಆದ್ಯರ್ಪಣೆ ಮಾಡಲು ವಿಳಂಬವಾದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳೇ ಹೊಣೆಯಾಗಿರುತ್ತಾರೆ. ಇದು ಅತಿ ಮುಖ್ಯವೆಂದು ಪರಿಗಣಿಸುವುದು

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ/691/ವೆಚ್ಚ–11/2009, ದಿನಾಂಕ:25.8.2009 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ. (ಕಾನೂನು ಮತ್ತು ಸುವ್ಯವಸ್ಥೆ)

ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 28 ಸಿಆರ್‌ಆರ್ 2009, ದಿ:21ನೇ ಅಕ್ಟೋಬರ್ 2009

ಅನುಬಂಧ

ಕ್ರ ಸಂ.	ಜಿಲ್ಲೆಗಳ ಹೆಸರು	ಮೊಬಲಗು (ಲಕ್ಷಗಳಲ್ಲಿ)	ಕ್ರ ಸಂ.	ಜಿಲ್ಲೆಗಳ ಹೆಸರು	ಮೊಬಲಗು (ಲಕ್ಷಗಳಲ್ಲಿ)
1	ಬೆಂಗಳೂರು ನಗರ	1.00 ಲಕ್ಷ	2	ಬೆಂಗಳೂರು ಗ್ರಾಮಾಂತರ	1.00 ಲಕ್ಷ
3	ಬಾಗಲಕೋಟೆ	1.00 ಲಕ್ಷ	4	ಬೆಳಗಾವಿ	1.00 ಲಕ್ಷ
5	ಬಳ್ಳಾರಿ	1.00 ಲಕ್ಷ	6	ಬೀದರ್	1.00 ಲಕ್ಷ
7	ಬಿಜಾಪುರ	1.00 ಲಕ್ಷ	8	ಚಾಮರಾಜನಗರ	1.00 ಲಕ್ಷ
9	ಚಿಕ್ಕಮಗಳೂರು	1.00 ಲಕ್ಷ	10	ಚಿತ್ರದುರ್ಗ	1.00 ಲಕ್ಷ
11	ದಾವಣಗೆರೆ	1.00 ಲಕ್ಷ	12	ದಕ್ಷಿಣ ಕನ್ನಡ	1.00 ಲಕ್ಷ
13	ಧಾರವಾಡ	1.00 ಲಕ್ಷ	14	ಗದಗ್	1.00 ಲಕ್ಷ
15	ಗುಲ್ಬರ್ಗಾ	1.00 ಲಕ್ಷ	16	ಹಾಸನ	1.00 ಲಕ್ಷ
17	ಹಾವೇರಿ	1.00 ಲಕ್ಷ	18	ಕೊಡಗು	1.00 ಲಕ್ಷ
19	ಕೊಪ್ಪಳ	1.00 ಲಕ್ಷ	20	ಕೋಲಾರ	1.00 ಲಕ್ಷ
21	ಮಂಡ್ಯ	1.00 ಲಕ್ಷ	22	ಮೈಸೂರು	1.00 ಲಕ್ಷ
23	ರಾಯಚೂರು	1.00 ಲಕ್ಷ	24	ಶಿವಮೊಗ್ಗ	1.00 ಲಕ್ಷ
25	ತುಮಕೂರು	1.00 ಲಕ್ಷ	26	ಉತ್ತರ ಕನ್ನಡ	1.00 ಲಕ್ಷ
27	ಉಡುಪಿ	1.00 ಲಕ್ಷ	28	ಚಿಕ್ಕಬಳ್ಳಾಪುರ	1.00 ಲಕ್ಷ
29	ರಾಮನಗರ	1.00 ಲಕ್ಷ			

ಕೆ. ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ. (ಕಾನೂನು ಮತ್ತು ಸುವ್ಯವಸ್ಥೆ)

ಪಿ.ಆರ್. 2459

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಜಿಲ್ಲಾ ಮುಖ್ಯ ರಸ್ತೆಗಳನ್ನು ಕೆಳದರ್ಜೆಗಿಳಿಸುವ ಬಗ್ಗೆ.

ಓದಲಾಗಿದೆ : ಶ್ರೀಸಿ.ಎಸ್. ಪುಟ್ಟರಾಜು ಮೇಲುಕೋಟೆ ವಿಧಾನ ಸಭಾ ಸದಸ್ಯರು, ಇವರ ಪತ್ರದ ದಿನಾಂಕ:20.10.2009

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಶ್ರೀ ಸಿ. ಎಸ್. ಪುಟ್ಟರಾಜು, ಮೇಲುಕೋಟೆ ವಿಧಾನ ಸಭಾ ಸದಸ್ಯರು, ಮಂಡ್ಯ ಜಿಲ್ಲೆ, ಪಾಮಡವಪುರ ತಾಲ್ಲೂಕಿನ ಜಿಲ್ಲಾ ಮುಖ್ಯ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಅನುದಾನದ ಕೊರತೆಯಿಂದ ಸಮಗ್ರವಾಗಿ ಅಭಿವೃದ್ಧಿಪಡಿಸಲು ಸಾಧ್ಯವಾಗದೇ ಇರುವುದರಿಂದ ಈ ಕೆಳಕಂಡ ರಸ್ತೆಗಳನ್ನು ಕೆಳದರ್ಜೆಗಿಳಿಸಿ ಪಿ.ಎಂ.ಜಿ.ಎಸ್.ವೈ. ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಕ್ರ.ಸಂ	ರಸ್ತೆಯ ವಿವರಗಳು	ಉದ್ದ (ಕಿ.ಮೀ)
1	ಪಾಂಡವಪುರ ತಾಲ್ಲೋಕು ಬಿ.ಬಿ.–ಬಿ.ಟಿ. ರಸ್ತೆಯಿಂದ ಕ್ಯಾತನಹಳ್ಳಿಗೆ ಸೇರುವ ರಸ್ತೆ ಕಿಮೀ 0.00 ರಿಂದ 7.00 ಮಾರ್ಗ ಹರವು–ಚಲುವರಸನಕೊಪ್ಪಲು–ಬ್ಯಾಟೇತಿಮ್ಮನಕೊಪ್ಪಲು	7.00
2	ಪಾಂಡವಪುರ ತಾಲ್ಲೋಕು ಮಾಣಿಕ್ಯನಹಳ್ಳಿಯಿಂದ ಗರುಡಾಪುರಕ್ಕೆ ಸೇರುವ ರಸ್ತೆ ಕಿಮಿ 0.00 ರಿಂದ 9.00 ವರೆಗೆ ಮಾರ್ಗ ಗೌಡಗೆರೆ–ಕಾಡೇನಹಳ್ಳಿ–ಕದಲಗೆರೆ–ದೊಡ್ಡಿಘಟ್ಟ	9.00
3	ಪಾಂಡವಪುರ ತಾಲ್ಲೋಕು ಮಹದೇಶ್ವರಪುರದಿಂದ ಕಾಳೇನಹಳ್ಳಿಗೆ ಸೇರುವ ರಸ್ತೆ ಕಿ.ಮೀ 0.00 ರಿಂದ 10 ಕಿಮೀ ವರೆಗೆ ಮಾರ್ಗ ಅತ್ತಿಗಾನಹಳ್ಳಿ–ಕೊಡಗನಹಳ್ಳಿ–ಸುಂಕಾತೊಣ್ಣೂರು	10.00

4	ಪಾಂಡವಪುರ ತಾಲ್ಲೋಕು ನಾರಾಯಣಪುರದಿಂದ ಸಿಂಗಾಪುರಕ್ಕೆ ಸೇರುವ ರಸ್ತೆ ಕಿಮೀ 0,00 ರಿಂದ 4.00 ವರೆಗೆ ಮಾರ್ಗ–ನಲ್ಲೇನಹಳ್ಳಿ–ಮಾರ್ವಳ್ಳಿ	4.00
5	ಪಾಂಡವಪುರ ತಾಲ್ಲೋಕು ಬಿ.ಬಿ.–ಬಿ.ಟಿ. ರಸ್ತೆಯಿಂದ ಶ್ರೀರಂಗಪಟ್ಟಣ–ಜೇವರ್ಗಿ–ರಸ್ತೆಗೆ ಸೇರುವ ರಸ್ತೆ ಕಿಮೀ 0.00 ರಿಂದ 3.25 ವರೆಗೆ ಮಾರ್ಗ ಕುಂತೀಬೆಟ್ಟ–ಹಿರೇಮರಳಿ ಮತ್ತು ಹಿರೇಮರಳಿ–ಚಿಕ್ಕಮರಳಿ	3.25
6	ಪಾಂಡವಪುರ ತಾಲ್ಲೋಕು ಬಿ.ಬಿ.–ಬಿ.ಟಿ. ರಸ್ತೆಯಿಂದ ಬೇವಿನಕುಪ್ಪೆ–ಶಂಭುವಿನಹಳ್ಳಿ ರಸ್ತೆಗೆ ಸೇರುವ ರಸ್ತೆ ಕಿಮೀ 0.00 ರಿಂದ 8.10 ವರೆಗೆ ಮಾರ್ಗ ಚಿಕ್ಕಮರಳಿ–ನುಗ್ಗಹಳ್ಳಿ–ಅನುವಾಳು ಮತ್ತು ನುಗ್ಗಹಳ್ಳಿ–ಕನಗನಮರಡಿ ಕೂಡು ರಸ್ತೆ	8.10
7	ಪಾಂಡವಪುರ ತಾಲ್ಲೋಕು ಪಾಂಡವಪುರದಿಂದ ಚಂದ್ರೆ ಶಂಕಹಳ್ಳಿ–ಕೊಡಳ್ಳಿ ಹೊಸೂರು ರಸ್ತೆ ಕಿಮೀ 0.00 ರಿಂದ 8.10 ವರೆಗೆ ಮಾರ್ಗ ಶ್ರೀರಂಗಪಟ್ಟಣ ಜೇವರ್ಗಿ–ರಸ್ತೆಗೆ ಸೇರುವ ರಸ್ತೆ.	8.10
	ಒಟ್ಟು	49.45

ಮಾನ್ಯ ವಿಧಾನ ಸಭಾ ಸದಸ್ಯರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಲೋಇ 564 ಸಿಆರ್ಎಂ 2009, ಬೆಂಗಳೂರು, ದಿನಾಂಕ:23ನೇ ಅಕ್ಟೋಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭದ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಈ ಕೆಳಕಂಡ (ಏಳು) ಜಿಲ್ಲಾ ಮುಖ್ಯ ರಸ್ತೆಗಳನ್ನು ನಿಯಮಾನುಸಾರ ಕೆಳದರ್ಜೆಗಿಳಿಸಿ (Denotify) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಶಕ್ಕೆ ನೀಡಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕ್ರ.ಸಂ	ರಸ್ತೆಯ ವಿವರಗಳು	ಉದ್ದ (ಕಿ.ಮೀ)
1	ಪಾಂಡವಪುರ ತಾಲ್ಲೋಕು ಬಿ.ಬಿ.–ಬಿ.ಟಿ. ರಸ್ತೆಯಿಂದ ಕ್ಯಾತನಹಳ್ಳಿಗೆ ಸೇರುವ ರಸ್ತೆ ಕಿಮೀ 0.00 ರಿಂದ 7.00 ಮಾರ್ಗ ಹರವು–ಚಲುವರಸನಕೊಪ್ಪಲು–ಬ್ಯಾಟೇತಿಮ್ಮನಕೊಪ್ಪಲು	7.00
2	ಪಾಂಡವಪುರ ತಾಲ್ಲೋಕು ಮಾಣಿಕ್ಯನಹಳ್ಳಿಯಿಂದ ಗರುಡಾಪುರಕ್ಕೆ ಸೇರುವ ರಸ್ತೆ ಕಿಮಿ 0.00 ರಿಂದ 9.00 ವರೆಗೆ ಮಾರ್ಗ ಗೌಡಗೆರೆ–ಕಾಡೇನಹಳ್ಳಿ–ಕದಲಗೆರೆ–ದೊಡ್ಡಘಟ್ಟ	9.00
3	ಪಾಂಡವಪುರ ತಾಲ್ಲೋಕು ಮಹದೇಶ್ವರಪುರದಿಂದ ಕಾಳೇನಹಳ್ಳಿಗೆ ಸೇರುವ ರಸ್ತೆ ಕಿ.ಮೀ 0.00 ರಿಂದ 10 ಕಿಮೀ ವರೆಗೆ ಮಾರ್ಗ ಅತ್ತಿಗಾನಹಳ್ಳಿ–ಕೊಡಗನಹಳ್ಳಿ–ಸುಂಕಾತೊಣ್ಣೂರು	10.00
4	ಪಾಂಡವಪುರ ತಾಲ್ಲೋಕು ನಾರಾಯಣಪುರದಿಂದ ಸಿಂಗಾಪುರಕ್ಕೆ ಸೇರುವ ರಸ್ತೆ ಕಿಮೀ 0,00 ರಿಂದ 4.00 ವರೆಗೆ ಮಾರ್ಗ–ನಲ್ಲೇನಹಳ್ಳಿ–ಮಾರ್ವಳ್ಳಿ	4.00
5	ಪಾಂಡವಪುರ ತಾಲ್ಲೋಕು ಬಿ.ಬಿ.–ಬಿ.ಟಿ. ರಸ್ತೆಯಿಂದ ಶ್ರೀರಂಗಪಟ್ಟಣ–ಜೇವರ್ಗಿ–ರಸ್ತೆಗೆ ಸೇರುವ ರಸ್ತೆ ಕಿಮೀ 0.00 ರಿಂದ 3.25 ವರೆಗೆ ಮಾರ್ಗ ಕುಂತೀಬೆಟ್ಟ–ಹಿರೇಮರಳಿ ಮತ್ತು ಹಿರೇಮರಳಿ–ಚಿಕ್ಕಮರಳಿ	3.25
6	ಪಾಂಡವಪುರ ತಾಲ್ಲೋಕು ಬಿ.ಬಿ.–ಬಿ.ಟಿ. ರಸ್ತೆಯಿಂದ ಬೇವಿನಕುಪ್ಪೆ–ಶಂಭುವಿನಹಳ್ಳಿ ರಸ್ತೆಗೆ ಸೇರುವ ರಸ್ತೆ ಕಿಮೀ 0.00 ರಿಂದ 8.10 ವರೆಗೆ ಮಾರ್ಗ ಚಿಕ್ಕಮರಳಿ–ನುಗ್ಗಹಳ್ಳಿ–ಅನುವಾಳು ಮತ್ತು ನುಗ್ಗಹಳ್ಳಿ–ಕನಗನಮರಡಿ ಕೂಡು ರಸ್ತೆ	8.10
7	ಪಾಂಡವಪುರ ತಾಲ್ಲೋಕು ಪಾಂಡವಪುರದಿಂದ ಚಂದ್ರೆ ಶಂಕಹಳ್ಳಿ–ಕೊಡಳ್ಳಿ ಹೊಸೂರು ರಸ್ತೆ ಕಿಮೀ 0.00 ರಿಂದ 8.10 ವರೆಗೆ ಮಾರ್ಗ ಶ್ರೀರಂಗಪಟ್ಟಣ ಜೇವರ್ಗಿ–ರಸ್ತೆಗೆ ಸೇರುವ ರಸ್ತೆ.	8.10
	ಒಟ್ಟು	49.45

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2460

ಎಂ. ದೇವೀಪ್ರಸಾದ್
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ),
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. (ಸಂಪರ್ಕ)

I -F7 -B/B

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಶ್ರೀ ಹೆಚ್.ಬಿ. ಕುಳ್ಳಾನಾಯಕ್, ರೇಷ್ಮೆ ಸಹಾಯಕ ನಿರ್ದೇಶಕರು, ಸರ್ಕಾರಿ ರೇಷ್ಮೆ ಮಾದರಿ ಬಿತ್ತನೆ ಕೋಠಿ, ಹಾಸನ (ಹಾಲಿ ಅಮಾನತ್ತಿನಲ್ಲಿರುವ) ಇವರ ವಿರುದ್ಧ ಶಿಸ್ತು ಕ್ರಮ–ಸೇವೆಯಿಂದ ವಜಾಗೊಳಿಸಿ ಇವರಿಂದ ಸರ್ಕಾರಕ್ಕೆ ನಷ್ಟ ಉಂಟಾದ ರೂ. 4,33,208/–ಗಳ ವಸೂಲಾತಿ ಬಗ್ಗೆ.

ಓದಲಾಗಿದೆ :
1. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂ:ಸಿ3ಎ:ಶಿಸ್ತು:0 1999–2000 ದಿ:17.7.2000.
2. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂ:ಸಿ3ಎ:ಶಿಸ್ತು:09– 1999–2000 ದಿ:7.12.2000.
3. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂ:ಸಿ3ಎ:ಶಿಸ್ತು:09– 1999–2000 ದಿ: 27.01.2004.
4. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂ:ಸಿ3ಎ:ಶಿಸ್ತು:09– 1999–2000 ದಿ:6.2.2006.
5. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂ:ಸಿ3ಎ:ಶಿಸ್ತು:02– 2004–05 ದಿ:3.3.2005.
6. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂ:ಸಿ3ಎ:ಶಿಸ್ತು:02– 2004–05 ದಿ:27.10.2005.
7. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂ:ಸಿ3ಎ:ಶಿಸ್ತು:02– 2004–05 ದಿ:5.3.2006.
8. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂ:ಸಿ3ಎ:ಶಿಸ್ತು:02– 2004–05 ದಿ:1.6.2006.
9. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂ:ಸಿ3ಎ:ಶಿಸ್ತು:09– 1999–2000 ದಿ:24.5.2006.
10. ಸರ್ಕಾರದ ಪತ್ರ ಸಂ:ವಾಕೈ 39 ರೇಸೇವಿ 2006 ದಿ:20.1.2007.
11. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂ:ಪಿಎಸ್‌ಸಿ/197/ಸಿಎನ್‌ಎಸ್/06 ದಿ:29.6.2007.
12. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಆದೇಶ ಸಂ:ಸಿ3ಎ:ಶಿಸ್ತು:09– 1999–2000 ದಿ:30.9.2008.

ಪ್ರಸ್ತಾವನೆ:

ಶ್ರೀ ಹೆಚ್.ಬಿ. ಕುಳ್ಳಾನಾಯಕ್, ರೇಷ್ಮೆ ಸಹಾಯುಕ ನಿರ್ದೇಶಕರು, ಸರ್ಕಾರಿ ರೇಷ್ಮೆ ಮಾದರಿ ಬಿತ್ತನೆ ಕೋಠಿ ಹಾಸ (ಹಾಲಿ ಅಮಾನತ್ತಿನಲ್ಲಿ) ಇವರು ಈ ಹಿಂದೆ ದಿನಾಂಕ:26.5.1993 ರಿಂದ 26.6.1995ರವರೆಗೆ ಚಾಮರಾಜನಗರದಲ್ಲಿ ರೇ ಸಹಾಯಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಎಸಗಿದ ಆರ್ಥಿಕ ದುರುಪಯೋಗ, ಅಧಿಕಾರ ದುರುಪಯೋ ಸರ್ಕಾರಿ ಕೆಲಸದಲ್ಲಿ ಕರ್ತವ್ಯ ಲೋಪ ಹಾಗೂ ಕಾರ್ಯ ನಿರ್ಲಕ್ಷ್ಯತೆ ಬಗ್ಗೆ ಆರೋಪಗಳಿದ್ದು ಕರ್ನಾಟಕ ನಾಗರೀಕ ಸೇ (ಸಿಸಿ &ಎ) ನಿಯಮ 11ರಡಿಯಲ್ಲಿ ಈ ಬಗ್ಗೆ ತಿಳುವಳಿಕೆ ಪತ್ರದೊಂದಿಗೆ ಆರೋಪ ಪಟ್ಟಿಯನ್ನು ಶ್ರೀ ಹೆಚ್.ಬಿ. ಕುಳ್ಳಾನಾಯ ರೇಷ್ಮೆ ಸಹಾಯಕ ನಿರ್ದೇಶಕರು, ಇವರಿಗೆ ಜಾರಿಗೊಳಿಸಲಾಗಿದ್ದಿತು. ಆರೋಪಿತ ಅಧಿಕಾರಿಯು ಆರೋಪ ಪಟ್ಟಿಯನ್ನು ಸ್ವೀಕರಿ ತಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ನಿರಾಕರಿಸಿದ ಹಿನ್ನೆಲೆಯಲ್ಲಿ ಪ್ರಕರಣದ ಸತ್ಯಾಸತ್ಯತೆಯನ್ನು ವಿಚಾರಣೆ ಮೂ ತಿಳಿಯುವ ಸಲುವಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಆದೇಶದಂತೆ ರೇಷ್ಮೆ ಉಪ ನಿರ್ದೇಶಕರು (ಜಿ ಪಂಚಾಯತ್), ಮಂಡ್ಯ ಇವರನ್ನು ವಿಚಾರಣಾಧಿಕಾರಿಯನ್ನಾಗಿಯೂ ಹಾಗೂ ಅದೇ ಕಛೇರಿಯ ಪತ್ರಾಂಕಿತ ವ್ಯವಸ್ಥಾಪಕರು- ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಕ ಮಾಡಲಾಗಿತ್ತು. ಈ ಹಂತದಲ್ಲಿ ಆರೋಪಿತ ಅಧಿಕಾರಿಯು ಮನವಿಯ ಸಲ್ಲಿಸಿ ಹಾಲಿ ನೇಮಕಗೊಂಡಿದ್ದ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯವರನ್ನು ಬದಲಾಯಿಸಲು ಕೋರಿದ್ದರಿ ಇವರ ಮನವಿಯನ್ನು ಪುರಸ್ಕರಿಸಿ ಮೇಲೆ ಓದಲಾದ ಕ್ರಮಸಂಖ್ಯೆ (2)ರಲ್ಲಿನ ಆದೇಶದಂತೆ ರೇಷ್ಮೆ ಜಂಟಿ ನಿರ್ದೇಶಕರು, ರೇ ವಿನಿಮಯ ಕೇಂದ್ರ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿಯೂ ಹಾಗೂ ಅದೇ ಕಛೇರಿಯ ಪತ್ರಾಂ ವ್ಯವಸ್ಥಾಪಕರು–2 ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಕ ಮಾಡಲಾಯಿತು. ಆದರೆ ಆರೋಪಿತ ಅಧಿಕಾರಿ ಇಲಾಖಾ ವಿಚಾರಣೆಗೆ ಸರಿಯಾಗಿ ಹಾಜರಾಗದೆ ಗೈರುಹಾಜರಿಯಾದ ಕಾರಣ ವಿಚಾರಣೆಯು ಅನವಶ್ಯಕವಾ ವಿಳಂಬವಾಗುತ್ತಿದೆಯೆಂದು ವಿಚಾರಣಾಧಿಕಾರಿಗಳು ಶಿಸ್ತು ಪ್ರಾಧಿಕಾರಕ್ಕೆ ತಿಳಿಸಿ ವಿಚಾರಣೆಯನ್ನು ಪೂರ್ಣಗೊಳಿಸದಿರುವ ಬ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿರುತ್ತಾರೆ. ಇದರಿಂದ ಇಲಾಖಾ ವಿಚಾರಣೆಯನ್ನು ಸಿ.ಸಿ.ಎ ನಿಯಮ 11(20)ರಡಿಯ

ಲಾಗುವುದೆಂದು ಆರೋಪಿತ ಅಧಿಕಾರಿಗೆ ಎಚ್ಚರಿಸಿದ ನಂತರ ಶಿಸ್ತು ಪ್ರಾಧಿಕಾರಕ್ಕೆ ಆರೋಪಿತ ಅಧಿಕಾರಿಯು ನವಿಯನ್ನು ಸಲ್ಲಿಸಿ ಮತ್ತೊಮ್ಮೆ ವಿಚಾರಣಾಧಿಕಾರಿಯನ್ನು ಬದಲಾಯಿಸಲು ಕೋರಿದ್ದರು. ಆರೋಪಿತ ಅಧಿಕಾರಿಯ ಈ ನವಿಯನ್ನೂ ಸಹ ಪುರಸ್ಕರಿಸಿ ಮೇಲೆ ಓದಲಾದ ಕ್ರಮಸಂಖ್ಯೆ (3)ರಲ್ಲಿನ ಆದೇಶದಂತೆ ರೇಷ್ಮೆ ಉಪ ನಿರ್ದೇಶಕರು, ಕೇಂದ್ರ ೀರಿ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಯಿತು ಮತ್ತು ರೇಷ್ಮೆ ವಿನಿಮಯ ಕೇಂದ್ರ ಬೆಂಗಳುರು ೇರಿಯ ಪತ್ರಾಂಕಿತ ವ್ಯವಸ್ಥಾಪಕರ-2ನ್ನು ಮಂಡನಾಧಿಕಾರಿಯನ್ನಾಗಿ ಮುಂದುವರೆಸಲಾಯಿತು. ಇಲಾಖಾ ವಿಚಾರಣೆಯ ತರ ಆರೋಪಿತ ಅಧಿಕಾರಿಯು ಚಾಮರಾಜನಗರದ ರೇಷ್ಮೆ ಸಹಾಯಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ವಧಿಯಲ್ಲಿ ರೂ. 3,41,088/-ಗಳ ಮೊತ್ತವು ಸರ್ಕಾರಕ್ಕೆ ನಷ್ಟವುಂಟಾಗಲು ಕಾರಣರಾಗಿರುವುದು ಸಾಕ್ಷ್ಯಾಧಾರಗಳಿಂದ ಬೀತಾಗಿರುವುದಾಗಿ ವಿಚಾರಣಾಧಿಕಾರಿಗಳು ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಿದ ವಿಚಾರಣಾ ವರದಿಯನ್ನು ಆಧರಿಸಿ ಶ್ರೀ ಹೆಚ್.ಬಿ. ್ಯಾನಾಯಕ್, ರೇಷ್ಮೆ ಸಹಾಯಕ ನಿರ್ದೇಶಕರು, ಇವರಿಗೆ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟದ ವಸೂಲಿಯೊಂದಿಗೆ ಕಠಿಣ ಡನೆಯನ್ನು ವಿಧಿಸುವುದು ಸಮಂಜಸವೆಂದು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಭಿಪ್ರಾಯಪಟ್ಟು ಕರ್ನಾಟಕ ನಾಗರೀಕ ಸೇವಾ (ಸಿ.ಸಿ &ಎ) ನಿಯಮ (8)ರ ಅಡಿಯಲ್ಲಿ ಆದೇಶವನ್ನು ಹೊರಡಿಸುವಂತೆ ೇಲೆ ಓದಲಾದ ಕ್ರಮಸಂಖ್ಯೆ (4)ರ ಪತ್ರದಲ್ಲಿ ಪ್ರಸ್ತಾವನೆಯೊಂದಿಗೆ ಸಮಗ್ರ ಇಲಾಖಾ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಲ್ಲಿಸಿರುತ್ತಾರೆ.

2) ಶ್ರೀ ಹೆಚ್.ಬಿ. ಕುಳ್ಳಾನಾಯಕ್, ರೇಷ್ಮೆ ಸಹಾಯಕ ನಿರ್ದೇಶಕರು, ಇವರು ರೇಷ್ಮೆ ಗೂಡಿನ ಮಾರುಕಟ್ಟೆ ಶಾಲನಗರ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿ ಅಧಿಕಾರಿಯ ಮೇಲೆ ಆರ್ಥಿಕ ದುರುಪಯೋಗ, ಅಧಿಕಾರ, ರುಪಯೋಗ, ಸರ್ಕಾರಿ ಕೆಲಸದಲ್ಲಿ ಕರ್ತವ್ಯ ಲೋಪ ಹಾಗೂ ಕಾರ್ಯ ನಿರ್ಲಕ್ಷ್ಯತೆಯ ಆರೋಪಗಳಿದ್ದು ಕರ್ನಾಟಕ ಗರೀಕ ಸೇವಾ (ಸಿಸಿ&ಎ) ನಿಯಮ 11ರಡಿಯಲ್ಲಿ ಈ ಬಗ್ಗೆ ತಿಳಿವಳಿಕೆ ಪತ್ರದೊಂದಿಗೆ ಆರೋಪ ಪಟ್ಟಿಯನ್ನು ಶ್ರೀ ಹೆಚ್.ಬಿ. ಳ್ಳಾನಾಯಕ್, ರೇಷ್ಮೆ ಸಹಾಯಕ ನಿರ್ದೇಶಕರು, ಇವರಿಗೆ ಜಾರಿಗೊಳಿಸಲಾಗಿದ್ದಿತು. ಆರೋಪಿತ ಅಧಿಕಾರಿಯು ೋಪಪಟ್ಟಿಯನ್ನು ಸ್ವೀಕರಿಸಿ ತಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ನಿರಾಕರಿಸಿದ ಹಿನ್ನೆಲೆಯಲ್ಲಿ ಪ್ರಕರಣದ ್ಯಾಸತ್ಯತೆಯನ್ನು ವಿಚಾರಣೆ ಮೂಲಕ ತಿಳಿಯುವ ಸಲುವಾಗಿ ಮೇಲೆ ಓದಲಾದ ಕರಮ ಸಂಖ್ಯೆ (5)ರಲ್ಲಿನ ಆದೇಶದಂತೆ ಚಾರಣಾಧಿಕಾರಿಯನ್ನು ನೇಮಕ ಮಾಡಲಾಯಿತು. ಈ ಹಂತದಲ್ಲಿ ಆರೋಪಿತ ಅಧಿಕಾರಿಯ ಮೇಲೆ ಮತ್ತೊಂದು ಹಣದ ರುಪಯೋಗದ ಆರೋಪ ಬಂದ ಕಾರಣದಿಂದ ಕರ್ನಾಟಕ ನಾಗರೀಕ ಸೇವಾ (ಸಿಸಿ&ಎ) ನಿಯಮ 11ರಡಿಯಲ್ಲಿ ಈ ಬಗ್ಗೆ ಿವಳಿಕೆ ಪತ್ರದೊಂದಿಗೆ ಆರೋಪ ಪಟ್ಟಿಯನ್ನು ಶ್ರೀ ಹೆಚ್.ಬಿ. ಕುಳ್ಳಾನಾಯಕ್ ರೇಷ್ಮೆ ಸಹಾಯಕ ನಿರ್ದೇಶಕರು, ಇವರಿಗೆ ರಿಗೊಳಿಸಲಾಗಿದ್ದಿತು. ಆರೋಪಿತ ಅಧಿಕಾರಿಯು ಆರೋಪಪಟ್ಟಿಯನ್ನು ಸ್ವೀಕರಿಸಿ ತಮ್ಮ ವಿರುದ್ಧ ಮಾಡಲಾದ ೋಪಗಳನ್ನು ನಿರಾಕರಿಸಿದ ಹಿನ್ನೆಲೆಯಲ್ಲಿ ಪ್ರಕರಣದ ಸತ್ಯಾಸತ್ಯತೆಯನ್ನು ವಿಚಾರಣೆ ಮೂಲಕ ತಿಳಿಯುವ ಸಲುವಾಗಿ ಮೇಲೆ ದಲಾದ ಕ್ರಮ ಸಂಖ್ಯೆ (6)ರಲ್ಲಿನ ಆದೇಶದಂತೆ ವಿಚಾರಣಾಧಿಕಾರಿಯಾಗಿ ರೇಷ್ಮೆ ಜಂಟಿ ನಿರ್ದೇಶಕರು, ಹಾಸನ ಮತ್ತು ತ್ರಾಂಕಿತ ವ್ಯವಸ್ಥಾಪಕರು, ರೇಷ್ಮೆ ಜಂಟಿ ನಿರ್ದೇಶಕರ ಕಛೇರಿ ಹಾಸನ ಇವರನ್ನು ಮಂಡನಾಧಿಕಾರಿಯಾಗಿ ನೇಮಕ ಾಡಲಾಯಿತು. ಈ ನಡುವೆ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಉಂಟಾದ ಬದಲಾವಣೆಯಿಂದ ರೇಷ್ಮೆ ಜಂಟಿ ನಿರ್ದೇಶಕರು, ಸನ ಇವರ ಹುದ್ದೆಯು ಮೈಸೂರಿಗೆ ಸ್ಥಳಾಂತರಗೊಂಡಿರುತ್ತದೆ ಹಾಗೂ ರೇಷ್ಮೆ ಇದೇ ಕಛೇರಿಯಲ್ಲಿರುವ ಪತ್ರಾಂಕಿತ ವಸ್ಥಾಪಕರ ಹುದ್ದೆಯು ರೇಷ್ಮೆ ಜಂಟಿ ನಿರ್ದೇಶಕರ ಕಛೇರಿ, ಬಿಳಿದೇವಾಲಯಕ್ಕೆ ಸ್ಥಳಾಂತರಗೊಂಡಿರುತ್ತದೆ. ಈ ದಲಾವಣೆಗಳ ಹಿನ್ನೆಲೆಯಲ್ಲಿ ಶ್ರೀ ಹೆಚ್.ಬಿ. ಕುಳ್ಳಾನಾಯಕ್, ರೇಷ್ಮೆ ಸಹಾಯಕ ನಿರ್ದೇಶಕರು, ಇವರ ವಿರುದ್ಧದ ಎರಡೂ ೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಮೇಲೆ ಓದಲಾದ ಕ್ರಮಸಂಖ್ಯೆ (7)ರಲ್ಲಿನ ಆದೇಶದಲ್ಲಿ ರೇಷ್ಮೆ ಜಂಟಿ ರ್ದೇಶಕರು, ಮೈಸೂರು, ಇವರನ್ನು ವಿಚಾರಣಾಧಿಕಾರಿಗಳಾಗಿಯೂ ಹಾಗೂ ರೇಷ್ಮೆ ಉಪ ನಿರ್ದೇಶಕರು, ಜಿಲ್ಲಾ ಚಾಯತ್ ಮೈಸೂರು ಇವರ ಕಛೇರಿಯ ಪತ್ರಾಂಕಿತ ವ್ಯವಸ್ಥಾಪಕರು-2ರವರನ್ನು ಮಂಡನಾಧಿಕಾರಿಯಾಗಿಯೂ ನೇಮಕ ಾಡಲಾಯಿತು. ಇದೇ ಅವಧಿಯಲ್ಲಿನ ಮತ್ತೊಂದು ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆಯನ್ನು ನಡೆಸುವ ಸಲುವಾಗಿ ಾಗಲೇ ನೇಮಕ ಮಾಡಲಾಗಿದ್ದ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ಈ ಪ್ರಕರಣದ ವಿಚಾರಣಾಧಿಕಾರಿ ಗೂ ಮಂಡನಾಧಿಕಾರಿಯಾಗಿ ನೇಮಿಸುವುದು ಸೂಕ್ತವೆಂದು ಪರಿಗಣಿಸಿ ಮೇಲೆ ಓದಲಾದ ಕ್ರಮಸಂಖ್ಯೆ (8)ರಲ್ಲಿನ ೇಶದಲ್ಲಿ ನೇಮಕ ಮಾಡಲಾಗಿರುತ್ತದೆ. ಇಲಾಖಾ ವಿಚಾರಣೆಯ ನಂತರ ಆರೋಪಿತ ಅಧಿಕಾರಿಯು ಕುಶಾಲನಗರದ ರೇಷ್ಮೆ ಾಯಕ ನಿರ್ದೇಶಕರಾಗಿ ಕಾರ್ಯ ನಿರ್ವಹಸುತ್ತಿದ್ದ ಅವಧಿಯಲ್ಲಿ ರೂ. 92.120.-ಗಳ ಮೊತ್ತವು ಸರ್ಕಾರಕ್ಕೆ ವುಂಟಾಗಲು ಕಾರಣರಾಗಿರುವುದು ಸಾಕ್ಷ್ಯಾಧಾರಗಳಿಂದ ಸಾಬೀತಾಗಿರುವುದಾಗಿ ವಿಚಾರಣಾಧಿಕಾರಿಗಳು ಶಿಸ್ತು ಪ್ರಾಧಿಕಾರಕ್ಕೆ ಿಸಿದ ವಿಚಾರಣಾ ವರದಿಯನ್ನು ಆಧರಿಸಿ ಶ್ರೀ ಹೆಚ್.ಬಿ. ಕುಳ್ಳಾನಾಯಕ್, ರೇಷ್ಮೆ ಸಹಾಯಕ ನಿರ್ದೇಶಕರು, ಇವರಿಗೆ ರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟದ ವಸೂಲಿಯೊಂದಿಗೆ ಕಠಣ ದಂಡನೆಯನ್ನು ವಿಧಿಸುವುದು ಸಮಂಜಸವೆಂದು ರೇಷ್ಮೆ ಕೃಷಿ ವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಅಭಿಪ್ರಾಯಪಟ್ಟು ಕರ್ನಾಟಕ ನಾಗರೀಕ ಸೇವಾ (ಸಿಸಿ &ಎ) ನಿಯಮ ರ ಅಡಿಯಲ್ಲಿ ಆದೇಶವನ್ನು ಹೊರಡಿಸುವಂತೆ ಮೇಲೆ ಓದಲಾದ ಕ್ರಮಸಂಖ್ಯೆ (12)ರ ಪತ್ರದಲ್ಲಿ ಪ್ರಸ್ತಾವನೆಯೊಂದಿಗೆ ಸಮಗ್ರ ಾಖಾ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

3) ಮೇಲ್ಕಂಡ ಎಲ್ಲಾ ಪ್ರಕರಣಗಳಲ್ಲೂ ಎಲ್ಲಾ ವಿಚಾರಣಾ ವರದಿಗಳ ಪ್ರತಿಗಳನ್ನು ಆರೋಪಿತರಿಗೆ ಜಾರಿ ಮಾ ವಿಚಾರಣಾಧಿಕಾರಿಯ ನಿರ್ಣಯದ ಬಗ್ಗೆ ಲಿಖಿತ ಹೇಳಿಕೆಯನ್ನು ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದ್ದರೂ ಸ ಆರೋಪಿತ ಅಧಿಕಾರಿಯು ಯಾವುದೇ ಲಿಖಿತ ಹೇಳಿಕೆಯನ್ನು ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ.

4) ಶ್ರೀ ಹೆಚ್.ಬಿ. ಕುಳ್ಳಾನಾಯಕ್ ರೇಷ್ಮೆ ಸಹಾಯಕ ನಿರ್ದೇಶಕರು, ಇವರು ಬಿ. ದರ್ಜೆ ಅಧಿಕಾರಿಯಾಗಿದ್ದು ಇವರಿ ದಂಡನೆ ವಿಧಿಸುವ ವಿಷಯದಲ್ಲಿ ಮೊದಲನೆಯ ಇಲಾಖಾ ವಿಚಾರಣಾ ವರದಿಯ ಆಧಾರದ ಮೇಲೆ ರೇಷ್ಮೆ ಆಯುಕ್ತ ಶಿಫಾರಸ್ಸಿನಂತೆ KPSC (Consultation) Regulations 2000ರಡಿಯಲ್ಲಿ ಮೇಲೆ ಓದಲಾದ ಕ್ರಮಸಂಖ್ಯೆ (10)ರ ಪತ್ರದ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾಗಿ, ಆಪಾದಿತರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವನ ಶೇ. 8 ರಂತೆ ಬಡ್ಡಿ ಸಮೇತ ವಸೂಲು ಮಾಡುವ ನಿಬಂಧನೆಗೊಳಪಟ್ಟು ಸೇವೆಯಿಂದ ವಜಾಗೊಳಿಸುವ ದಂಡನೆ ವಿಧಿಸು ಮತ್ತು ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಹಣ ರೂ. 3,41,088/–ಗಳನ್ನು ವಸೂಲಿ ಮಾಡಲು ನ್ಯಾಯಾಲಯದಲ್ಲಿ ದಾ ಹೂಡುವ ಪ್ರಸ್ತಾವನೆಗೆ ಸದರಿ ಆಯೋಗವು ಪತ್ರ ಸಂಖ್ಯೆ:ಪಿಎಸ್‌ಸಿ 197 ಸಿಎನ್‌ಎಸ್ 06 ದಿನಾಂಕ: 29.6.2007 ರ ಸಹಮತಿಯನ್ನು ನೀಡಿರುತ್ತದೆ. ಈ ಮೊದಲನೆಯ ಪ್ರಕರಣದಲ್ಲಿಯೇ ಕರ್ನಾಟಕ ಲೋಕಸೇವಾ ಆಯೋಗವು ಸಹಮ ನೀಡಿರುವುದರಿಂದ ಇನ್ನುಳಿದ ಎರಡು ಪ್ರಕರಣಗಳಲ್ಲಿ ಮತ್ತೆ ಆಯೋಗದ ಸಹಮತಿ ಪಡೆಯುವ ಅವಶ್ಯಕತೆ ಇರುವುದಿಲ್ಲ.

5) ಹಿಂದಿನ ಕಂಡಿಕೆಗಳಲ್ಲಿ ವಿವರಿಸಿರುವನ್ವಯ, ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕ ಶಿಫಾರಸ್ಸಿನಂತೆ ಹಾಗೂ ಲೋಕಸೇವಾ ಆಯೋಗದ ಸಹಮತಿಯ ಹಿನ್ನೆಲೆಯಲ್ಲಿ ಆರೋಪಿತ ಅಧಿಕಾರಿಯಾದ ಶ್ರೀ ಹೆಚ್.ಬಿ ಕುಳ್ಳಾನಾಯಕ್, ರೇಷ್ಮೆ ಸಹಾಯಕ ನಿರ್ದೇಶಕರು, ಸರ್ಕಾರಿ ಮಾದರಿ ಬಿತ್ತನೆ ಕೋಠಿ, ಹಾಸನ (ಹಾಲಿ ಅಮಾನತ್ತಿನಲ್ಲಿರುವ ಇವರನ್ನು ತಕ್ಷಣವೇ ಸೇವೆಯಿಂದ ವಜಾಗೊಳಿಸಲು ಮತ್ತು ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟದ ಮೊತ್ತ ಒಟ್ಟು ರೂ 4,33,208/–ವನ್ನು ವಾರ್ಷಿಕ ಶೇ. 8ರ ಬಡ್ಡಿ ಸಮೇತ ಅವರಿಂದ ವಸೂಲಿ ಮಾಡುವ ಪ್ರಸ್ತಾವನೆಯನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿದೆ. ಪರಿಶೀಲನೆಯ ನಂತರ ಶ್ರೀ ಹೆಚ್.ಬಿ. ಕುಳ್ಳಾನಾಯಕ್, ರೇಷ್ಮೆ ಸಹಾಯಕ ನಿರ್ದೇಶಕರು ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಮೇಲ್ಮನವಿ) ನಿಯಮಗಳು 1957ರ ನಿಯ 8(viii) ರಡಿ ಸೇವೆಯಿಂದ ಕೂಡಲೇ ವಜಾಗೊಳಿಸುವ ದಂಡನೆಯನ್ನು ವಿಧಿಸಲು ಹಾಗೂ ಈ ಎಲ್ಲಾ ಪ್ರಕರಣಗಳಿಂ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟದ ಮೊತ್ತ ಒಟ್ಟು ರೂ. 4,33,208/–ವನ್ನು ವಾರ್ಷಿಕ ಶೇ. 8ರ ಬಡ್ಡಿ ಸಮೇತ ವಸೂ ಮಾಡಲು ಸಕ್ಷಮ ನ್ಯಾಯಾಲಯದಲ್ಲಿ ದಾವೆ ಹೂಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ:

ಸರ್ಕಾರದ ಆದೇಶ ಸಂಖ್ಯೆ:ವಾಕೈ 39 ರೇಸೇವಿ 2006 ಬೆಂಗಳೂರು, ದಿನಾಂಕ: 27ನೇ ಅಕ್ಟೋಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಹೆಚ್.ಬಿ. ಕುಳ್ಳಾನಾಯಕ್, ರೇಷ್ಮೆ ಸಹಾಯ ನಿರ್ದೇಶಕರು, ಸರ್ಕಾರಿ ಮಾದರಿ ಬಿತ್ತನೆ ಕೋಠಿ, ಹಾಸನ (ಹಾಲಿ ಅಮಾನತ್ತಿನಲ್ಲಿರುವ) ಇವರನ್ನು ಕರ್ನಾಟಕ ನಾಗರೀ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಮೇಲ್ಮನವಿ) ನಿಯಮಗಳು 1957ರ ನಿಯಮ 8(viii)ರಡಿ ಸೇವೆಯಿಂ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರವು ವಜಾಗೊಳಿಸಿದೆ. ಅಂತೆಯೇ ಇವರಿಂದ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟ ಮೊತ್ತ ಒಟ್ಟು ರೂ. 4,33,208/– (ರೂ ನಾಲ್ಕು ಲಕ್ಷದ ಮೂವತ್ತೂರು ಸಾವಿರದ ಇನ್ನೂರಾ ಎಂಟು ಮಾತ್ರ) ವನ್ನು ವಾರ್ಷಿ ಶೇ. 8ರ ಬಡ್ಡಿ ಸಮೇತ ವಸೂಲಿ ಮಾಡಲು ಸಕ್ಷಮ ನ್ಯಾಯಾಲಯದಲ್ಲಿ ದಾವೆ ಹೂಡಲು ಸರ್ಕಾರವು ರೇಷ್ಮೆ ಕೃಷಿ ಅಭಿವೃ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರಿಗೆ ಆದೇಶಿಸಿದೆ. ಸದರಿ ಅಧಿಕಾರಿಯವರು ವಸೂಲಾತಿಗೆ ಕೂಡಲೇ ಕ್ರಮ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2461

ಬಿ. ದೇವಿಕ

ಸರ್ಕಾರದ ಅಧೀನ ಕಾರ್ಯದರ್ಶಿ(ರೇಷ್ಮೆ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಿಷಯ : ಶ್ರೀ ಯು.ಹೆಚ್. ಹಿರೇಮಠ, ರೇಷ್ಮೆ ವಿಸ್ತರಣಾಧಿಕಾರಿ, ರೇಷ್ಮೆ ಜಂಟಿ ನಿರ್ದೇಶಕ ಕಛೇರಿ, ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು) (ಹಿಂದಿನ ರೇಷ್ಮೆ ವಿಸ್ತರಣಾಧಿಕಾರಿ, ರೇಷ್ಮೆ ಬಿತ್ತನೆ ಕೋಠಿ, ಹಿಂಡಲಗಾ, ಬೆಳಗಾಂ) ಇವರ ವಿರುದ್ಧದ ಶಿಸ್ತು ಪ್ರಕರಣ –ಸೇವೆಯಿಂದ ವಜಾಗೊಳಿಸಿ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ. 1,01,09, 397/– ಗಳ ವಸೂಲಾತಿ ಬಗ್ಗೆ.

ಓದಲಾಗಿದೆ :
1. ದಿನಾಂಕ:17.1.2003ರ ಆದೇಶ ಸಂ:ವಾಕೈ 415 ರೇಸೇವಿ 2002.
2. ರೇಷ್ಮೆ ಇಲಾಖೆಯ ಆದೇಶ ಸಂ:ಸಿ3/ಶಿಸ್ತು ರೇವಿಅ/22/93–99 ದಿನಾಂಕ:17.9.2003.
3. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂ:ಸಿ3/ಶಿಸು/ರೇವಿಅ/22/ 1998–99 ದಿನಾಂಕ:12.12.2006 ಮತ್ತು 10.8.2007
4. ರೇಷ್ಮೆ ಇಲಾಖೆಯ ಆದೇಶ ಸಂ:ಸಿ3/ಶಿಸ್ತು/ರೇವಿಅ/04/02–03 ದಿನಾಂಕ:21.10.2003.

5. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ:ಸಿ3/ ಶಿಸ್ತು/.ರೇವಿಅ/ 04/2002-03 ದಿನಾಂಕ :10.8.2004, 30.9.2004 ಮತ್ತು 6.2.2006.

6. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂ:ಪಿಎಸ್‌ಸಿ199 ಸಿಎನ್‌ಎಸ್08 ದಿನಾಂಕ:17.6.09

ಸ್ತಾವನೆ:

ಶ್ರೀ ಯು.ಹೆಚ್. ಹಿರೇಮಠ, ರೇಷ್ಮೆ ವಿಸ್ತರಣಾಧಿಕಾರಿ. ಇವರು ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿ ಹಿಂಡಲಗಾ, ಇಲ್ಲಿ ಾರ್ಯನಿರ್ವಹಿಸುತ್ತಿದ್ದಾಗ ಎಸಗಿರುವ ಅಧಿಕಾರ/ಆರ್ಥಿಕ ದುರುಪಯೋಗಕ್ಕೆ ಸಂಬಂಧಿಸಿದಂತೆ ಶಿಸ್ತು ಕ್ರಮ ಜರುಗಿಸಲು ರೇಷ್ಮೆ ೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರನ್ನು ಶಿಸ್ತು ಪ್ರಾಧಿಕಾರಿಯಾಗಿ ಮೇಲೆ ಓದಲಾದ (1)ರ ಆದೇಶದಲ್ಲಿ ರ್ಕಾರವು ನೇಮಿಸಿದೆ.

2) ಶ್ರೀ ಯು.ಹೆಚ್.ಹಿರೇಮಠ, ರೇಷ್ಮೆ ವಿಸ್ತರಣಾಧಿಕಾರಿ, ಇವರು ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿ, ಹಿಂಡಲಗಾ, ೆಳಗಾಂ, ಇಲ್ಲಿ ದಿನಾಂಕ:1.4.1995 ರಿಂದ 14.10.1999 ರ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಬೃಹತ್ ಮೊತ್ತದ ಹಣ ಾಗೂ ಅಧಿಕಾರ ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುತ್ತಾರೆಂದು ರೇಷ್ಮೆ ಿರ್ದೇಶನಾಲಯದಿಂದ ನಡೆಸಿರುವ ಲೆಕ್ಕ ಪರಿಶೋಧನೆ ವರದಿಯಿಂದ ಬೆಳಕಿಗೆ ಬಂದ ಕಾರಣ ಇವರ ವಿರುದ್ಧ ಶಿಸ್ತು ಕ್ರಮ ರುಗಿಸಲು ಸಿ.ಸಿ.ಎ. ನಿಯಮ 11 ರಡಿಯಲ್ಲಿ ತಿಳುವಳಿಕೆ ಪತ್ರದೊಂದಿಗೆ ಆರೋಪ ಪಟ್ಟಿಯನ್ನು ಜಾರಿಗೊಳಿಸಲಾಗಿದ್ದು, ಈ ಧಿಕಾರಿಯು ಆರೋಪ ಪಟ್ಟಿಯನ್ನು ಸ್ವೀಕರಿಸಿದ್ದು, ಆದರೆ ನಿಗದಿತ ಅವಧಿಯಲ್ಲಿ ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿರುವುದಿಲ್ಲ ಾಗೂ ವಿಳಂಬವಾಗಿ ಲಿಖಿತ ಹೇಳಿಕೆ ನೀಡಿ ಆರೋಪವನ್ನು ನಿರಾಕರಿಸಿರುತ್ತಾರೆ. ಮಿಶ್ರತಳಿ ಹಾಗೂ ದ್ವಿತಳಿ ಮೊಟ್ಟೆಗಳನ್ನು ಯಾರಿಸಿ ಅವುಗಳನ್ನು ಮಾರಾಟ ಮಾಡಿದ್ದು ಅವುಗಳ ಮೌಲ್ಯ ದುರುಪಯೋಗಪಡಿಸಿಕೊಂಡಿರುವುದು. ಅಧಿಕಾರಿಯ ರ್ತವ್ಯಲೋಪ ಬೇಜವಾಬ್ದಾರಿ, ಮೇಲಾಧಿಕಾರಿಗಳ ಆದೇಶ ಉಲ್ಲಂಘನೆ, ವಿಳಂಬ ನೀತಿಯ ಆರೋಪಗಳಿಂದ ಸರ್ಕಾರಕ್ಕೆ ನಷ್ಟ ಉಂಟಾಗಲು ಕಾರಣಕರ್ತರಾಗಿರುತ್ತಾರೆ. ಆರೋಪದ ಸತ್ಯಾಸತ್ಯತೆಯನ್ನು ಕಂಡುಹಿಡಿಯಲು ವಿಚಾರಣೆಯನ್ನು ನಡೆಸಲು ಆದೇಶಿಸಿ, ನಿವೃತ್ತ ನ್ಯಾಯಾಧೀಶರಿಗೆ ಇಲಾಖಾ ವಿಚಾರಣೆ ನಡೆಸಲು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ಿರ್ದೇಶಕರು ಮೇಲೆ ಓದಲಾದ (2)ರ ಆದೇಶದಲ್ಲಿ ಆದೇಶಿಸಿದ್ದು, ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಲ್ಲಿಸಿರುತ್ತಾರೆ. ಸದರಿ ವರದಿಯನ್ನು ಶ್ರೀ ಯು.ಹೆಚ್. ಹಿರೇಮಠರವರಿಗೆ ಜಾರಿಮಾಡಿ ಹೇಳಿಕೆ ಇದ್ದಲ್ಲಿ ಲಿಖಿತವಾಗಿ ನೀಡುವಂತೆ ೂಚಿಸಿದ್ದು ಸದರಿ ಅಧಿಕಾರಿಯು ಲಿಖಿತ ಹೇಳಿಕೆ ನೀಡಲು ಹೆಚ್ಚಿನ ಕಾಲಾವಕಾಶ ಕೋರಿ ಮನವಿ ಸಲ್ಲಿಸಿದ್ದು ಅವರ ುನವಿಯನ್ನು ಪರಿಗಣಿಸಿ ಹೆಚ್ಚಿನ ಕಾಲಾವಕಾಶ ನೀಡಿದರೂ ಸಹ ಶ್ರೀ ಯು.ಹೆಚ್. ಹಿರೇಮಠರವರು ಯಾವುದೇ ಲಿಖಿತ ೇಳಿಕೆ ನೀಡಿರುವುದಿಲ್ಲ. ಇವರ ವಿರುದ್ಧದ ಇಲಾಖಾ ವಿಚಾರಣೆಯಲ್ಲಿನ ಎಲ್ಲಾ ಹಂತವನ್ನು ನಿಯಮಾನುಸಾರ ರಿಶೀಲಿಸಲಾಗಿದ್ದು, ಈ ಅಧಿಕಾರಿಯು ನ್ಯಾಯಬದ್ದವಾಗಿ ವಿಚಾರಣೆಗೆ ಹಾಜರಾಗಿಲ್ಲವೆಂದು, ವಿಚಾರಣೆಗೆ ಹಾಜರಾಗಲು ಳುಹಿಸಿರುವ ಪತ್ರಗಳಿಗೆ ಸರಿಯಾಗಿ ಸ್ಪಂದಿಸದೆ ವಿಚಾರಣೆಗೆ ಸಹಕರಿಸದೆ ಇರುವುದು ದಾಖಲೆಗಳಿಂದ ದೃಢಪಡುತ್ತದೆ. ಈ ಧಿಕಾರಿಯ ಮೇಲಿನ 32 ಆರೋಪಗಳ ಪೈಕಿ 22 ಆರೋಪಗಳು ಸಾಬೀತಾಗಿ, ಈ ಸಾಬೀತಾದ ಆರೋಪಗಳಿಂದ ಒಟ್ಟು ೂ. 98,28,733.35ಗಳ ಮೊತ್ತಕ್ಕೆ ಆರೋಪಿತ ಅಧಿಕಾರಿಯು ಕಾರಣಕರ್ತನಾಗಿದ್ದು, ಇವರಿಂದ ಈ ಹಣವನ್ನ ವಸೂಲು ಾಡಿ ಸರ್ಕಾರಕ್ಕೆ ಜಮೆ ಮಾಡಲು ಮತ್ತು ಕಠಿಣ ದಂಡನೆಯನ್ನು ವಿಧಿಸುವಂತೆ ಮೇಲೆ ಓದಲಾದ (3)ರ ಪತ್ರದಲ್ಲಿ ರೇಷ್ಮೆ ೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

3) ಶ್ರೀ ಯು.ಹೆಚ್. ಹಿರೇಮಠ ರೇಷ್ಮೆ ವಿಸ್ತರಣಾಧಿಕಾರಿ, ಇವರ ಮೇಲೆ ಮತ್ತೊಂದು ಆರ್ಥಿಕ ಹಾಗೂ ಅಧಿಕಾರ ುರುಪಯೋಗದ ಪ್ರಕರಣವು ಇದ್ದು, ಈ ಪ್ರಕರಣದಲ್ಲಿಯೂ ರೇಷ್ಮೆ ಕೃಷಿ ಕ್ಷೇತ್ರ ಹಿಂಡಲಗಾ, ಬೆಳಗಾಂ, ಇಲ್ಲಿ ರೇಷ್ಮೆ ಸ್ತರಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಮಿಶ್ರತಳಿ ಮತ್ತು ವಿದೇಶಿ ತಳಿ ಮೊಟ್ಟೆಗಳ ಬಾಬ್ತು ಸರ್ಕಾರಕ್ಕೆ ಇರಸಾಲು ಾಡದೆ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಸಂಸ್ಥೆಗೆ ಸಂಬಂಧಪಟ್ಟ ದಾಖಲೆಗಳನ್ನು ಹಸ್ತಾಂತರಿಸಿಲ್ಲದಿರುವ ಬಗ್ಗೆ ೂರವಾಣಿಯ ದುರ್ಬಳಕೆ ಮುಂತಾದ ಆರೋಪಗಳ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ಇಲಾಖಾ ವಿಚಾರಣೆ ನಡೆಸಲು ೇಲೆ ಓದಲಾದ (4)ರ ಆದೇಶದಲ್ಲಿ ರೇಷ್ಮೆ ಆಯುಕ್ತರು ಆದೇಶಿಸಿದ್ದಾರೆ. ಇಲಾಖಾ ವಿಚಾರಣೆ ನಡೆಸಲ್ಪಟ್ಟಿದ್ದು ವಿಚಾರಣಾ ರದಿಯ ಪ್ರಕಾರ 9 ಆರೋಪಗಳ ಪೈಕಿ 8 ಆರೋಪಗಳು ಸಾಬೀತಾಗಿದ್ದು ರೂ. 2,80,664/-ಗಳ ಮೊತ್ತಕ್ಕೆ ಆರೋಪಿತ ಧಿಕಾರಿಯು ಕಾರಣಕರ್ತರಾಗಿರುತ್ತಾರೆ. ವಿಚಾರಣಾ ವರದಿಯನ್ನು ಸದರಿ ಅಧಿಕಾರಿಗೆ ಜಾರಿ ಮಾಡಲಾಗಿದ್ದು ತಮ್ಮ ಲಿಖಿತ ೇಳಿಕೆಯಲ್ಲಿ ವಿಚಾರಣಾಧಿಕಾರಿಗಳು ತಮ್ಮ ಅನುಪಸ್ಥಿತಿಯಲ್ಲಿ ವಿಚಾರಣೆ ನಡೆಸಿದ್ದಾರೆಂದು ತಿಳಿಸಿ, ವಿಚಾರಣೆಗೆ ಸಕಾಲಕ್ಕೆ ಾಜರಾಗಲು ಸಾಧ್ಯವಾಗದೇ ಇರುವುದೆಂಬ ಕಾರಣಗಳನ್ನು ನೀಡಿ ವಿಚಾರಣೆ ಮುಂದೂಡುವಂತೆ ಕೋರಿದ್ದರೂ ಚಾರಣಾಧಿಕಾರಿಗಳು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿರುತ್ತಾರೆಂದು ಇದರಿಂದ ತಮ್ಮ ಮೇಲೆ ಮಾಡಲಾದ ರೋಪಗಳನ್ನು ಅಲ್ಲಗೆಳೆಯಲು ಸಾಧ್ಯವಾಗದೆ ಹೋಯಿತೆಂದು ತಿಳಿಸಿ ಮರು ವಿಚಾರಣೆಗೆ ಅವಕಾಶ ನೀಡಬೇಕೆಂದು ೋರಿರುತ್ತಾರೆ., ಆದರೆ ವಿಚಾರಣಾ ವರದಿಯನ್ನು ಪರಿಶೀಲಿಸಿದಾಗ ವಿಚಾರಣಾಧಿಕಾರಿಗಳು ವಿಚಾರಣೆಗೆ ಹಾಜರಾಗಲು ಪತ್ರ ವಹಾರ ನಡೆಸಿದ್ದು, ಆಪಾದಿತ ಅಧಿಕಾರಿ ವಿಚಾರಣೆಗೆ ಗೈರುಹಾಜರಾಗಿರುವುದು ಮತ್ತು ವಿಚಾರಣಾಧಿಕಾರಿಗಳು ನೀಡಿರುವ ೋಟೀಸ್‌ಗಳನ್ನು ಪುರಸ್ಕರಿಸಿರುವುದು ಕಂಡುಬರುತ್ತದೆ. ಈ ಕಾರಣಗಳಿಂದಾಗಿ ಇವರ ಮೇಲಿನ ಆರೋಪಗಳು

ಸಾಬೀತಾಗಿರುವುದರಿಂದ ಹಾಗೂ ಗಂಭೀರ ಸ್ವರೂಪದ್ದಾಗಿರುವುದರಿಂದ ಇವರಿಂದ ಈ ಹಣವನ್ನು ವಸೂಲು ಮಾಡುವುದು ಹಾಗೂ ಕಠಿಣ ದಂಡನೆಯನ್ನು ವಿಧಿಸುವುದು ಸೂಕ್ತವೆಂದು ಇಲಾಖಾ ಮುಖ್ಯಸ್ಥರಾದ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

4) ಆದುದರಿಂದ ಶ್ರೀ ಯು.ಹೆಚ್. ಹಿರೇಮಠ, ರೇಷ್ಮೆ ವಿಸ್ತರಣಾಧಿಕಾರಿ, ರೇಷ್ಮೆ ಇಲಾಖೆ ಇವರ ಮೇಲಿನ ಗಂಭೀರ ಸ್ವರೂಪದ ಆರೋಪಗಳು ವಿಚಾರಣೆಯಿಂದ ದೃಢಪಟ್ಟಿರುವುದರಿಂದ ಹಾಗೂ ಭಾರೀ ಪ್ರಮಾಣದ ಸರ್ಕಾರಿ ಹಣ ದುರುಪಯೋಗ ಅಂದರೆ ರೂ. 1,01,09,397/– (ರೂ. ಒಂದು ಕೋಟಿ ಒಂದು ಲಕ್ಷ ಒಂಬತ್ತು ಸಾವಿರದ ಮುನ್ನೂರಾ ತೊಂಬತ್ತೇಳು) ರೂಪಾಯಿಗಳು ಆರ್ಥಿಕ ನಷ್ಟ ಸರ್ಕಾರಕ್ಕೆ ಉಂಟಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ, 1957ರ ನಿಯಮ 8(viii)ರಡಿ ಪ್ರದತ್ತವಾದ ಅಧಿಕಾರದನ್ವಯ ಕೆಳಕಂಡ ದಂಡನೆಯನ್ನು ವಿಧಿಸುವ ಬಗ್ಗೆ ಪರಿಶೀಲಿಸಲಾಗಿದೆ.

ಎ) ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮ, 1957, ನಿಯಮ 8(viii) ರನ್ವಯ ಸೇವೆಯಿಂದ ವಜಾಗೊಳಿಸುವುದು.

ಬಿ) ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ. 1,01,09,397/–ಅನನು ದಾವೆ ಹೂಡುವ ಮೂಲಕ ವಸೂಲಾತಿ ಮಾಡಲು ಕ್ರಮ ಕೈಗೊಳ್ಳವುದು.

5) ಕರ್ನಾಟಕ ಲೋಕಸೇವಾ ಆಯೋಗ (Consultation) Regulation 2000 ದ ಐಟಮ್ 5ರನ್ವಯ ಮೇಲ್ಕಂಡ ಪ್ರಸ್ತಾವನೆಗೆ ಕರ್ನಾಟಕ ಲೋಕಸೇವಾ ಆಯೋಗವು ಪತ್ರ ಸಂಖ್ಯೆ:ಪಿಎಸ್ಎಲ್ 199 ಸಿಎನ್ 508 ದಿನಾಂಕ:17.6.2009ರಲ್ಲಿ ಸಹಮತಿಯನ್ನು ನೀಡಿರುತ್ತದೆ.

6) ಹಿಂದಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ, ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಶಿಫಾರಸ್ಸಿನಂತೆ ಆರೋಪಿತ ಅಧಿಕಾರಿಯಾದ ಶ್ರೀ ಯು.ಹೆಚ್. ಹಿರೇಮಠ, ರೇಷ್ಮೆ ವಿಸ್ತರಣಾಧಿಕಾರಿ, ರೇಷ್ಮೆ ಇಲಾಖೆ, ಬೆಂಗಳೂರು ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಮೇಲ್ಮನವಿ) ನಿಯಮಗಳು, 1957ರ ನಿಯಮ 8(viii)ರಡಿ ಸೇವೆಯಿಂದ ತಕ್ಷಣದಿಂದಲೇ ಜಾರಿಗೆ ಬರುವಂತೆ ವಜಾಗೊಳಿಸುವ ದಂಡನೆಯನ್ನು ವಿಧಿಸಲು ಹಾಗೂ ಈ ಅಧಿಕಾರಿಯಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಮೊತ್ತವಾದ ರೂ. 1,0,1,09,397/–ಗಳನ್ನು ಸಕ್ಷಮ ನ್ಯಾಯಾಯಲದಲ್ಲಿ ದಾವೆ ಹೂಡುವ ಮೂಲಕ ವಸೂಲಾತಿ ಮಾಡುವುದಕ್ಕೆ ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ವಾಕೈ 25 ರೇಸೇವಿ 2007, ಬೆಂಗಳೂರು, ದಿನಾಂಕ: 27ನೇ ಅಕ್ಟೋಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಯು.ಹೆಚ್. ಹಿರೇಮಠ ರೇಷ್ಮೆ ವಿಸ್ತರಣಾಧಿಕಾರಿ, ರೇಷ್ಮೆ ಜಂಟಿ ನಿರ್ದೇಶಕರ ಕಛೇರಿ, ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಮೇಲ್ಮನವಿ) ನಿಯಮಗಳು 1957ರ ನಿಯಮ 8(viii)ರಡಿ ಸರ್ಕಾರಿ ಸೇವೆಯಿಂದ ತಕ್ಷಣದಿಂದಲೇ ಜಾರಿಗೆ ಬರುವಂತೆ ಸರ್ಕಾರವು ವಜಾಗಳಿಸಿದೆ. ಅಂತೆಯೇ ಈ ಅಧಿಕಾರಿಯಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಮೊತ್ತವಾದ ರೂ, 1,01,09,397/– (ಒಂದು ಕೋಟಿ ಒಂದು ಲಕ್ಷ ಒಂಬತ್ತು ಸಾವಿರದ ಮುನ್ನೂರಾ ತೊಂಬತ್ತೇಳು) ಗಳನ್ನು ಸಕ್ಷಮ ನ್ಯಾಯಾಲಯದಲ್ಲಿ ದಾವೆ ಹೂಡುವ ಮೂಲಕ ವಸೂಲಾತಿ ಮಾಡಲು ಸರ್ಕಾರವು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬೆಂಗಳೂರು ಇವರಿಗೆ ಆದೇಶಿಸಿದೆ. ಸದರಿ ಅಧಿಕಾರಿಯವರು ಕೂಡಲೇ ವಸೂಲಾತಿಗೆ ಕ್ರಮ ಜರುಗಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2462

ಬಿ. ದೇವಿಕ

ಸರ್ಕಾರದ ಅಧೀನ ಕಾರ್ಯದರ್ಶಿ(ರೇಷ್ಮೆ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕಾರ್ಮಿಕ ಸಚಿವಾಲಯ

ವಿಷಯ : ಯೋಜನಾ ಕಾರ್ಯಕ್ರಮದಡಿಯಲ್ಲಿ ಮಂಜೂರಾಗಿರುವ ಹುದ್ದೆಗಳನ್ನು ಯೋಜನೇತರ ಹುದ್ದೆಗಳನ್ನಾಗಿ ಪರಿವರ್ತಿಸುವ ಬಗ್ಗೆ.

ಓದಲಾಗಿದೆ : ಉದ್ಯೋಗ ಮತ್ತು ತರಬೇತಿ ಇಲಾಖೆರವರ ಪತ್ರ ಸಂಖ್ಯೆ:ಉತನಿ/ಉದ್ಯೋಗ/ಆಡಳಿತ–1/ವಿವ–44/2008–09 ದಿನಾಂಕ:16.1.2009 ಮತ್ತು 1.7.2009.

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರಗಳಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ಉದ್ಯೋಗ ವಿಭಾಗದಲ್ಲಿ 2009–10ನೇ ಸಾಲಿನ ಯೋಜನೆ ಅಡಿಯಲ್ಲಿ ಮುಂದುವರೆಸಲಾದ ಈ ಕೆಳಕಂಡ ಹುದ್ದೆಗಳನ್ನು ಯೋಜನೇತರ ಹುದ್ದೆಗಳೆಂದು ಪರಿವರ್ತಿಸಲು ಕೋರಿರುತ್ತಾರೆ.

ಕ್ರ ಸಂ	ಉದ್ಯೋಗ ವಿನಿಮಯ ಕೇಂದ್ರ	ಸಹಾಯಕ ಉದ್ಯೋಗಾಧಿಕಾರಿ	ದ್ವಿತೀಯ ದರ್ಜೆ ಸಹಾಯಕ	ವಾಹನ ಚಾಲಕ	ಒಟ್ಟು
1	ಸಂಚಾರಿ ನೋಂದಣಿ ಘಟಕ ಬೀದರ್, (ಜಿಲ್ಲಾ ಉದ್ಯೋಗ ವಿನಿಯ ಕೇಂದ್ರ ಬೀದರ್)	1	1	–	2
2	ಸಂಚಾರಿ ನೋಂದಣಿ ಘಟಕ ಬಿಜಾಪುರ, (ಜಿಲ್ಲಾ ಉದ್ಯೋಗ ವಿನಿಯ ಕೇಂದ್ರ ಬಿಜಾಪುರ)	1	1	–	2
3	ಸಂಚಾರಿ ನೋಂದಣಿ ಘಟಕ ಗುಲ್ಬರ್ಗಾ, (ಜಿಲ್ಲಾ ಉದ್ಯೋಗ ವಿನಿಯ ಕೇಂದ್ರ ಗುಲ್ಬರ್ಗಾ)	1	1	–	2
4	ನಿರ್ದೇಶನಾಲಯ ಬೆಂಗಳೂರು	–	–	1	1
.	**ಒಟ್ಟು**	**3**	**3**	**1**	**7**

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 5 ಇಟಿಎಕ್ಸ್ 2009, ಬೆಂಗಳೂರು, ದಿನಾಂಕ:22ನೇ ಅಕ್ಟೋಬರ್ 2009

ಪ್ರಸ್ತಾವನೆಯಲ್ಲಿ ತಿಳಿಸಿರುವ 1983 ರಿಂದ 2000 ಸಾಲಿನ ಅವಧಿಯಲ್ಲಿನ ಯೋಜನೆಯಡಿಯ ಹುದ್ದೆಗಳನ್ನು 2010–11ನೇ ಸಾಲಿಗೆ ಯೋಜನೇತರಡಿ ಒಳಪಡಿಸುವುದಕ್ಕೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 494 ವೆಚ್ಚ–9/2009 ದಿನಾಂಕ:3.10.2009ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2463

ಎ.ಎಸ್. ವಿಶ್ವೇಶ್ವರಯ್ಯ
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ. (ಉದ್ಯೋಗ ಮತ್ತು ತರಬೇತಿ)

ಇಂಧನ ಸಚಿವಾಲಯ

ವಿಷಯ : ಮೆ:ಎಸ್ ಆರ್ ಎಂ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಸೋಮಾವತಿ ಹೊಳೆಗೆ ಅಡ್ಡಲಾಗಿ ಹಂಚಿಕೆಯಾಗಿರುವ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ :ಇಂಇ 52 ಎನ್‌ಸಿಇ 2004 ದಿನಾಂಕ:13.2.2004.
2. ಸರ್ಕಾರಿ ಆದೇಶ ಸಂಖ್ಯೆ :ಇಂಇ 52 ಎನ್‌ಸಿಇ 2004 ದಿನಾಂಕ: 4.11.2004.
3. ಸರ್ಕಾರಿ ಆದೇಶ ಸಂಖ್ಯೆ :ಇಎನ್ 128 ಎನ್‌ಸಿಇ 2008 ದಿನಾಂಕ:3.5.2008.
4. ಸರ್ಕಾರಿ ಆದೇಶ ಸಂಖ್ಯೆ :ಇಎನ್ 193 ಎನ್‌ಸಿಇ 2009 ದಿನಾಂಕ: 25.4.2009.
5. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿಎಲ್/06/ಸೋಮಾವತಿ/2009/2373 ದಿನಾಂಕ :29.7.2009.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮೆ:ಎಸ್‌ಆರ್‌ಎಂ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಸೋಮಾವತಿ ಹೊಳೆಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಸದರಿ ಯೋಜನೆಯ ಸಾಮರ್ಥ್ಯವನ್ನು 2.00 ಮೆಗಾ ವ್ಯಾಟ್ ನಿಂದ 6.00 ಮೆಗಾ ವ್ಯಾಟ್‌ಗೆ ಹೆಚ್ಚಿಸಿ ಯೋಜನೆಯ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ ಸದರಿ ಯೋಜನೆಯನ್ನು ಅನುಷ್ಠಾನ ಮಾಡಲು ಕಾಲಾವಧಿಯನ್ನು ಸದರಿ ಆದೇಶ ಹೊರಡಿಸಿದ ದಿನಾಂಕದಿಂದ 31.12.2008 ರವರೆಗೆ ವಿಸ್ತರಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಆದೇಶದಲ್ಲಿ ಸದರಿ ಯೋಜನೆಯನ್ನು ಅನುಷ್ಠಾನ ಮಾಡಲು ಕಾಲಾವಧಿಯನ್ನು ದಿನಾಂಕ:30.6.2009ರ ವರೆಗೆ ವಿಸ್ತರಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಪತ್ರದಲ್ಲಿ ಮೆ:ಎಸ್‌ಆರ್‌ಎಂ ಪವರ್ ಪ್ರೈವೇಟ್ ಲಿಮಿಟೆಡ್‌ಗೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಸೋಮಾವತಿ ನದಿಗೆ ಅಡ್ಡಲಾಗಿ ಹಂಚಿಕೆಯಾಗಿದ್ದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಧಿಯನ್ನು ಒಂದು ವರ್ಷದವರೆಗೆ ವಿಸ್ತರಿಸಲು ಪರಿಗಣಿಬಹುದಾಗಿದೆಯೆಂದು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ ಹಾಗೂ ಈ ಸಂಬಂಧ ಶುಲ್ಕ ರೂ. 6.00 ಲಕ್ಷಗಳನ್ನು ಪಾವತಿಸಿರುತ್ತಾರೆಂದು ವರದಿ ಮಾಡಿದ್ದಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಎನ್ 440 ಎನ್‌ಸಿಇ 2009, ಬೆಂಗಳೂರು, ದಿನಾಂಕ:23ನೇ ಸೆಪ್ಟೆಂಬರ್, 2009

ಮೆ:ಎಸ್‌ಆರ್‌ಎಂ ಪವರ್ ಪ್ರೈವೇಟ್ ಲಿಮಿಟೆಡ್‌ಗೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಸೋಮಾವತಿ ಹೊಳಗೆ ಅಡ್ಡಲಾಗಿ ಹಂಚಿಕೆಯಾಗಿರುವ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಕಾಲಾವಧಿಯನ್ನು ದಿನಾಂಕ:1.7.2009ರಿಂದ ಒಂದು ವರ್ಷದವರೆಗೆ ವಿಸ್ತರಿಸಲಾಗಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2266

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ.

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರ ಕಛೇರಿಗೆ ಎರಡು 'ಡಿ' ದರ್ಜೆಯ ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅವರ ಟಿಪ್ಪಣಿ ಸಂಖ್ಯೆ:ಕಅಪ್ರಾ/ಕಾ/34/08–09 ದಿನಾಂಕ:28.7.2009

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ:25.5.2009ರ ಪತ್ರದಲ್ಲಿ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇವರು ಕಾರ್ಯದರ್ಶಿವರ ಕಛೇರಿಗೆ ಎರಡು 'ಡಿ' ದರ್ಜೆ ನೌಕರರ ಹುದ್ದೆಯು ಮಂಜೂರಾಗಿದ್ದು, ಪ್ರಸ್ತುತ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಒಬ್ಬ ನೌಕರರು ದೀರ್ಘಕಾಲದಿಂದ ಅನಧಿಕೃತ ಗೈರುಹಾಜರಾಗುತ್ತಿದ್ದು, ಕಛೇರಿ ಕೆಲಸಕ್ಕೆ ತುಂಬಾ ತೊಂದರೆಯಾಗಿರುತ್ತದೆ. ಅಲ್ಲದೇ ಸಚಿವಾಲಯದಲ್ಲಿ 'ಡಿ' ದರ್ಜೆಯ ನೌಕರರ ಕೊರತೆ ಇರುವುದರಿಂದ ಹಾಗೂ ಅನ್ಯ ಇಲಾಖೆಯಿಂದ ನಿಯೋಜನೆ ಮೇಲೆ ಈ ಹುದ್ದೆಗೆ ಯಾರೂ ಬರಲು ಆಸಕ್ತಿ ತೋರುತ್ತಿಲ್ಲವಾದ್ದರಿಂದ ಈ ಹುದ್ದೆಯು ಖಾಲಿ ಇರುತ್ತದೆ. ಆದ್ದರಿಂದ ಕಛೇರಿಗೆ 'ಡಿ' ದರ್ಜೆಯ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 55 ಕೆಎಲ್ 2009, ಬೆಂಗಳೂರು, ದಿನಾಂಕ:27ನೇ ಅಕ್ಟೋಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಮಂಜೂರಾಗಿರುವ ಹುದ್ದೆಗಳಲ್ಲಿ ಒಂದು 'ಡಿ' ದರ್ಜೆಯ ಹುದ್ದೆಯು ಖಾಲಿ ಇರುವುದಾಗಿ ತಿಳಿಸಿರುವುದರಿಂದ ಆ ಒಂದು ಹುದ್ದೆಯನ್ನು ಮಾತ್ರ ಗುತ್ತಿಗೆ ಆಧಾರದ ಮೇಲೆ ನಿಯಮಾನುಸಾರ ನೇಮಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ 913 ವೆಚ್ಚ–7/2009 ದಿನಾಂಕ:13.10.2009ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2466

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ. (ಆಡಳಿತ ಕನ್ನಡ)

BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಂಪುಟ ೧೪೪	ಬೆಂಗಳೂರು, ಗುರುವಾರ, ನವೆಂಬರ್ ೨೬, ೨೦೦೯ (ಮಾರ್ಗಶಿರ ೫, ಶಕ ವರ್ಷ ೧೯೩೧)	ಸಂಚಿಕೆ ೪೭

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು.

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 210 ಡಿಸಿಇ 2008(11), ಬೆಂಗಳೂರು, ದಿನಾಂಕ: 08ನೇ ಅಕ್ಟೋಬರ್, 2009

ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಅರ್ಜಿಗಳನ್ನು ಆಹ್ವಾನಿಸಿ ುಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದುದು ಸರಿಯಷ್ಟೆ. ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆ ಪ್ರಕ್ರಿಯೆಯನ್ನು ರೈಸಿ ತದನಂತರ ಮತ್ತು ಆಯೋಗವು ಸಲ್ಲಿಸಿದ ಆಯ್ಕೆ ಪಟ್ಟಿಯಂತೆ ಈ ಕೆಳಕಂಡ ಅಭ್ಯರ್ಥಿಗಳನ್ನು ಕಾಲೇಜು ಶಿಕ್ಷಣ ಖೆಯಲ್ಲಿ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ 02 ವರ್ಷಗಳ ಪರಿವೀಕ್ಷಣಾ ಅವಧಿಯ ಮೇರೆಗೆ ವೇತನ ಿ ರೂ.8000–275–13500 ರಲ್ಲಿ ಈ ಮೂಲಕ ನೇಮಕಾತಿ ಮಾಡಲಾಗಿದೆ.

ವಾಣಿಜ್ಯ ಶಾಸ್ತ್ರ

ಂ	KPSC ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	ಸ್ನಾತಕೋತ್ತರ ಪದವಿಯ ಜೊತೆಗೆ ಪಡೆದುಕೊಂಡಿರುವ ವಿದ್ಯಾರ್ಹತೆ			
			NET	SLET	Ph.D.	M.Phil
	466	ನಾರಾಯಣಸ್ವಾಮಿ ಕೆ.ಎನ್. #28, 1ನೇ ಮುಖ್ಯರಸ್ತೆ, 10ನೇ ಕ್ರಾಸ್, ನೊಬಲ್ ಹೈಸ್ಕೂಲ್ ಹತ್ತಿರ, ಕೊಟ್ಟಿಗೆಪಾಳ್ಯ, ಬೆಂಗಳೂರು–560091.				M.Phil –Mad Kam DIS July 07
		ಇತಿಹಾಸ				
	86	ಅನಂತ D/o ಬುದ್ದಪ್ಪ ಗೌಡಗೆರಿ ಸಾಯಿ, ನಿವಾಸ, ಮನೆ ನಂ–1–972/2, ಮೀನಾ ಸದನ್ ಬಿಲ್ಡಿಂಗ್ ಹಿಂಭಾಗ, ಮು:ತರ್ಫಿಲೆ, ಗುಲ್ಬರ್ಗಾ–585102	NET		Ph.D.	
	126	ಚಂದ್ರಶೇಖರ ತಾಬೋಜಿ, ಮು:ಚಂದನಮಟ್ಟಿ, ಪೋ: ಮೃತ್ಯುಂಜಯ ನಗರ, ಧಾರವಾಡ–580006				M.Phil KAR UNI

	177	ಗಂಗಮ್ಮ ಎಂ. C/o ಎಫ್ ಎಸ್. ಲೋಬೋ, ಜಿ.ಪಿ.ಬಿ. ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಇಲಾಖೆ, ಧಾರವಾಡ–580005				M.Phil KAR UNI (ಸಿಂಧುತ್ವ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಸಲ್ಲಿಸಿರುವರು. ಮೂಲ ಪ್ರತಿಯನ್ನು ಸಲ್ಲಿಸಿದ ನಂತರ ಸ್ಥಳನಿಯುಕ್ತಿ ಆದೇಶ ನೀಡುವುದು)

ಮೇಲ್ಕಂಡ ನೇಮಕಾತಿಯು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ಈ ಅಧಿಸೂಚನೆಯಲ್ಲಿರುವ ಅಭ್ಯರ್ಥಿಗಳಿಗೆ ಕಾಲೇಜು ಶಿಕ್ಷಣ ಆಯುಕ್ತರು ಸ್ಥಳನಿಯುಕ್ತಿ ಆದೇಶ ನೀಡುವ ಸಂಬ ಕರ್ನಾಟಕ ಲೋಕ ಸೇವಾ ಆಯೋಗ ಆಯ್ಕೆ ಮಾಡಿರುವ ಜ್ಯೇಷ್ಠತೆಯಂತೆಯೇ ಪರಿಗಣಿಸಿ ಕೌನ್ಸಿಲಿ ಮಾಡುವುದು ಈ ಸಂಬಂಧ ಆಯುಕ್ತರ ಕಾರ್ಯಾಲಯವು ಕೌನ್ಸಿಲಿಂಗ್ ದಿನಾಂಕವನ್ನು ತಿಳಿಸುತ್ತದೆ.
2. ನೇಮಕಾತಿಯು ತಾತ್ಕಾಲಿಕವಾಗಿದ್ದು ಆಗ್ಗಿಂದಾಗ್ಗೆ ಈ ಸಂಬಂಧ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
3. ಜನ್ಮ ದಿನಾಂಕ, ವಿದ್ಯಾರ್ಹತೆ (ಅಂಕಪಟ್ಟಿ) ನಡತೆ, ಮೀಸಲಾತಿಗೆ ಸಂಬಂಧಿಸಿದ ಮತ್ತಿತರ ಮೂಲ ದಾಖಲಾತಿಗಳ ಅಭ್ಯರ್ಥಿಗಳು ಪ್ರಥಮವಾಗಿ ಆಯುಕ್ತರ ಮುಂದೆ ಹಾಜರುಪಡಿಸಿ ಪರಿಶೀಲನೆಯ ನಂತರ ಈ ದಾಖಲಾತಿಗಳ ಹಾಜರಾಗುವ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು.
4. ಕರ್ನಾಟಕ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ (1974)ರ ಅಡಿ ನಿಗದಿಪಡಿಸಿರುವ ಕನ ಭಾಷಾ ಪರೀಕ್ಷೆಯನ್ನು ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣರಾಗತಕ್ಕದ್ದು.
5. ಪಿ.ಹೆಚ್.ಡಿ / ಎನ್.ಇ.ಟಿ / ಎಸ್.ಎಲ್.ಇ.ಟಿ ಪರೀಕ್ಷೆ ತೇರ್ಗಡೆ ಹೊಂದಿದ್ದವರು ಅಕೌಂಟ್ಸ್ ಹೈಯರ್ ಮ ಜನರಲ್ ಲಾ, ಭಾಗ–1 ಮತ್ತು ಭಾಗ–2 ಇದನ್ನು ಪರಿವೀಕ್ಷಣಾ ಅವಧಿಯಲ್ಲಿ ತೇರ್ಗಡೆಯಾಗತಕ್ಕದ್ದು. ಇಲ್ಲವಾದ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಾಗುವುದಿಲ್ಲ.
6. ಪಿಹೆಚ್.ಡಿ/ ಎನ್.ಇ.ಟಿ / ಎಸ್.ಎಲ್.ಇ.ಟಿ ಪದವಿ ಇಲ್ಲದವರು ಅಂದರೆ ಕೇವಲ ಎಂ.ಫಿಲ್ ಪಾ ಮಾಡಿರುವವರು (ದೂರ ಶಿಕ್ಷಣ ಮುಖೇನ ಅಥವಾ ಸಾಂಪ್ರದಾಯಿಕ ಶಿಕ್ಷಣದ ಮುಖೇನ) ಪರಿವೀಕ್ಷ ಅವಧಿಯಲ್ಲಿ ಎನ್.ಇ.ಟಿ/ಎಸ್.ಎಲ್.ಇ.ಟಿ, / ಪಿ.ಹೆಚ್.ಡಿ.ಯಲ್ಲಿ ಮೇಲ್ಕಾಣಿಸಿದ ಇಲಾಖಾ ಪರೀಕ್ಷೆಗಳ ಜೊ ಕಡ್ಡಾಯವಾಗಿ ಉತ್ತೀರ್ಣರಾಗತಕ್ಕದ್ದು. ಇಲ್ಲವಾದಲ್ಲಿ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣ ಅರ್ಹರಾಗುವುದಿಲ್ಲ.
7. ಉಪನ್ಯಾಸಕ ಹುದ್ದೆಗೆ ಅವಶ್ಯಕತೆ ಇರುವ ಓರಿಯೆಂಟೇಷನ್ ಮತ್ತು ರಿಫ್ರೆಷರ್ ಕೋರ್ಸ್ ತರಬೇತಿಯ ಪೂರೈಸತಕ್ಕದ್ದು.
8. ಅಭ್ಯರ್ಥಿಗಳ ಜೇಷ್ಠತೆಯು ಕರ್ನಾಟಕ ಲೋಕ ಸೇವಾ ಆಯೋಗದ ಆಯ್ಕೆ ಪಟ್ಟಿಯಲ್ಲಿ ಪ್ರಸ್ತುತ ಇದ್ದಂತೆಯ ಇರತಕ್ಕದ್ದು ಹಾಗೂ ತದನಂತರ ಈ ಸಂಬಂಧ ಸರ್ಕಾರ ಹೊರಡಿಸುವ ಅಧಿಸೂಚನೆಯನ್ವಯ ಇರತಕ್ಕದ್ದು.
9. ಅಭ್ಯರ್ಥಿಗಳ ನೇಮಕಾತಿಯು ಮಹಿಳಾ ಮೀಸಲಾತಿ ಕುರಿತಂತೆ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿನ ರಿ ಅರ್ಜಿ (ಸಿವಿಲ್) ಸಂಖ್ಯೆ:232/99ರ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರುತ್ತದೆ.
10. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಈ ಕುರಿತು ಬಾಕಿ ಇರುವ ಅರ್ಜಿ ಸಂಖ್ಯೆ: 4463/2008, 527 5322, 5268, 5338/2008 ಮತ್ತು 43/2009ರ ಮೇಲೆ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿ ಬದ್ಧರಾಗಿರತಕ್ಕದ್ದು. ಹಾಗೂ ಈ ತೀರ್ಪುಗಳ ಕುರಿತಾದ ಉಚ್ಚ ನ್ಯಾಯಾಲಯದ ಮೇಲ್ಮನವಿ ತೀರ್ಪಿ ಬದ್ಧರಾಗಿರತಕ್ಕದ್ದು.
11. ಪರಿವೀಕ್ಷಣಾ ಅವಧಿಯಲ್ಲಿ ಯಾವುದೇ ವರ್ಗಾವಣೆ ಪರಿಗಣಿಸಲಾಗುವುದಿಲ್ಲ.
12. ಈ ಅಧಿಸೂಚನೆಯಲ್ಲಿ ಕಾಣಿಸಿರುವ ಅಭ್ಯರ್ಥಿಗಳ ಸಂಬಳ, ಭತ್ಯೆ ಇತ್ಯಾದಿ ಇವುಗಳು ಸ್ಥಳನಿಯುಕ್ತಿ ಆದೇ ಹೊರಡಿಸಿ ಅದರಂತೆ ಆಯಾ ಸ್ಥಳಗಳಲ್ಲಿ ಹಾಜರಾದ ದಿನಾಂಕದಿಂದ ಲಭ್ಯವಾಗುತ್ತದೆ.

ಅಭ್ಯರ್ಥಿಗಳು ಅಂದರೆ ಪಿ.ಹೆಚ್‌ಡಿ/ಎನ್.ಇ.ಟಿ/ಎಸ್.ಎಲ್.ಇ.ಟಿ ಪದವಿ ಹೊಂದಿರುವವರು ಕನ್ನಡ ಭಾಷೆ, ಅಕೌಂ ಹೈಯರ್ ಹಾಗೂ ಜನರಲ್ ಲಾ ಭಾಗ–1 ಮತ್ತು ಭಾಗ–2 ಇವುಗಳಲ್ಲಿ ತೇರ್ಗಡೆ ಹೊಂದಿದ ನಂತರವೆ ಪರಿವೀಕ್ಷಣಾ ಅವ ತೃಪ್ತಿಕರವಾಗಿ ಪೂರೈಸಿದ್ದಾರೆ ಎಂದು ಘೋಷಿಸಲು ಅರ್ಹರಿರುತ್ತಾರೆ; ಅಂತೆಯೇ ಕೇವಲ ಎಂ.ಫಿಲ್ ಪದವಿ ಪಡೆದವರು ಇಲಾಖಾ ಪರೀಕ್ಷೆಗಳ ಜೊತೆಗೆ ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ತೇರ್ಗಡೆಯಾದಲ್ಲಿ ಮಾತ್ರ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಿರುತ್ತಾರೆ. ಈ ದಿಶೆಯಲ್ಲಿ ಲಗತ್ತಿಸಿರುವ ನಮೂನೆಯಲ್ಲಿ ಒಂದು ಮುಚ್ಚಳಿಕೆಯನ್ನು ಕೌನ್ಸಿಲಿಂ

ಯದಲ್ಲಿ ಇವರು ತಪ್ಪದೇ 100 ರೂಪಾಯಿ ಛಾಪಾ ಕಾಗದದಲ್ಲಿ ಶಪಥಗ್ರಹಣ ಮಾಡಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ದಾಗಲು ಸ್ಥಳ ನಿಯೋಜನೆಗೆ ಅರ್ಹರಲ್ಲ ಮತ್ತು ಈ ನೇಮಕಾತಿ ಆದೇಶ ರದ್ದಾಗಿದೆಯೆಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)

LETTER OF UNDERTAKING

I, Sri/Smt/Kum.. son of/ ughter of wife of residing at.. ...., do hereby understand and undertake to mply with the following terms and conditions relating to my appointment as Lecturer ....pursuant to the recommendation made by the Karnataka Public rvice Commission:-

(1) The scale of pay for which I have been appointed has been Rs.8,000 – 275 – 13,500 and the designation is Lecturer in.....................

(2) I have to pass the prescribed Kannada language examination and the departmental examinations, viz., Accounts Higher, General Part – I and Part – II, besides the orientation course and refresher course for the post of lecturer.

(3) I have to acquire PhD/NET/SLET and only thereafter I am entitled for declaration of period of probation as satisfactory i.e. after the completion of two years and after passing the above said examinations composed with satisfactory performance.

(4) As I have not acquired NET/SLET/Ph.D. through course work but only M.Phil, I do understand that for declaration of period of probation, apart from passing Kannada language examination, Accounts Higher, General Law Part-I and Part-II besides the orientation course and refresher course I have to acquire NET/SLET without fail. Failure to acquire NET/SLET will render me ineligible for satisfactory declaration of period of probation and claim further increment either in the scale of Rs.8,000 – 13,500 or in any revised scale or claim any revised designation.

(5) I undertake to relinquish my claim to the post of lecturer in..................due to any adverse court verdict treating M.Phil degree obtained through distance or traditional education mode as invalid.

Signature of the candidate

itnesses:

1.

2.

.ಆರ್. 1458

ಅಧಿಸೂಚನೆ

ಸಂಖ್ಯೆ: ಇಡಿ 210 ಡಿಸಿಇ 2008(12), ಬೆಂಗಳೂರು, ದಿನಾಂಕ: 15ನೇ ಅಕ್ಟೋಬರ್, 2009

ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಅರ್ಜಿಗಳನ್ನು ಆಹ್ವಾನಿಸಿ ಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದುದು ಸರಿಯಷ್ಟೆ. ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆ ಪ್ರಕ್ರಿಯೆಯನ್ನು ರ್ವೈಸಿ ತದನಂತರ ಮತ್ತು ಆಯೋಗವು ಸಲ್ಲಿಸಿದ ಆಯ್ಕೆ ಪಟ್ಟಿಯಂತೆ ಈ ಕೆಳಕಂಡ ಅಭ್ಯರ್ಥಿಗಳನ್ನು ಕಾಲೇಜು ಶಿಕ್ಷಣ ಾಖೆಯಲ್ಲಿ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ 02 ವರ್ಷಗಳ ಪರಿವೀಕ್ಷಣಾ ಅವಧಿಯ ಮೇರೆಗೆ ವೇತನ ಣಿ ರೂ.8000–275–13500 ರಲ್ಲಿ ಈ ಮೂಲಕ ನೇಮಕಾತಿ ಮಾಡಲಾಗಿದೆ.

ರಾಜ್ಯಶಾಸ್ತ್ರ

ಕ್ರ.ಸಂ	KPSC ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	ಸ್ನಾತಕೋತ್ತರ ಪದವಿಯ ಜೊತೆಗೆ ಪಡೆದುಕೊಂಡಿರು ವಿದ್ಯಾರ್ಹತೆ			
			NET	SLET	Ph.D.	M.Phil
1	33	ಪ್ರಲ್ಹಾದ S/o ವೀರಪ್ಪ ಚೇಂಗಟೆ, ಮು:ಪೋ: ಇಸ್ಲಾಂಪುರ, ಬಸವಕಲ್ಯಾಣ ತಾ. ಬೀದರ್-585331				M.Phil –Gul. Uni

ಮೇಲ್ಕಂಡ ನೇಮಕಾತಿಯು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ಈ ಅಧಿಸೂಚನೆಯಲ್ಲಿರುವ ಅಭ್ಯರ್ಥಿಗಳಿಗೆ ಕಾಲೇಜು ಶಿಕ್ಷಣ ಆಯುಕ್ತರು ಸ್ಥಳನಿಯುಕ್ತಿ ಆದೇಶ ನೀಡುವ ಸಂಬ ಕರ್ನಾಟಕ ಲೋಕ ಸೇವಾ ಆಯೋಗ ಆಯ್ಕೆ ಮಾಡಿರುವ ಜ್ಯೇಷ್ಠತೆಯಂತೆಯೇ ಪರಿಗಣಿಸಿ ಕೌನ್ಸಿಲಿ ಮಾಡುವುದು ಈ ಸಂಬಂಧ ಆಯುಕ್ತರ ಕಾರ್ಯಾಲಯವು ಕೌನ್ಸಿಲಿಂಗ್ ದಿನಾಂಕವನ್ನು ತಿಳಿಸುತ್ತದೆ.
2. ನೇಮಕಾತಿಯು ತಾತ್ಕಾಲಿಕವಾಗಿದ್ದು ಆಗ್ಗಿಂದಾಗ್ಗೆ ಈ ಸಂಬಂಧ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
3. ಜನ್ಮ ದಿನಾಂಕ, ವಿದ್ಯಾರ್ಹತೆ (ಅಂಕಪಟ್ಟಿ) ನಡತೆ, ಮೀಸಲಾತಿಗೆ ಸಂಬಂಧಿಸಿದ ಮತ್ತಿತರ ಮೂಲ ದಾಖಲಾತಿಗ ಅಭ್ಯರ್ಥಿಗಳು ಪ್ರಥಮವಾಗಿ ಆಯುಕ್ತರ ಮುಂದೆ ಹಾಜರುಪಡಿಸಿ ಪರಿಶೀಲನೆಯ ನಂತರ ಈ ದಾಖಲಾತಿಗ ಹಾಜರಾಗುವ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು.
4. ಕರ್ನಾಟಕ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ (1974)ರ ಅಡಿ ನಿಗದಿಪಡಿಸಿರುವ ಕ ಭಾಷಾ ಪರೀಕ್ಷೆಯನ್ನು ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣರಾಗತಕ್ಕದ್ದು.
5. ಪಿಹೆಚ್.ಡಿ / ಎನ್.ಇ.ಟಿ / ಎಸ್.ಎಲ್.ಇ.ಟಿ ಪರೀಕ್ಷೆ ತೇರ್ಗಡೆ ಹೊಂದಿದ್ದವರು ಅಕೌಂಟ್ಸ್ ಹೈಯರ್ ವ ಜನರಲ್ ಲಾ, ಭಾಗ-1 ಮತ್ತು ಭಾಗ-2 ಇದನ್ನು ಪರಿವೀಕ್ಷಣಾ ಅವಧಿಯಲ್ಲಿ ತೇರ್ಗಡೆಯಾಗತಕ್ಕದ್ದು. ಇಲ್ಲವಾ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಾಗುವುದಿಲ್ಲ.
6. ಪಿಹೆಚ್.ಡಿ/ ಎನ್.ಇ.ಟಿ / ಎಸ್.ಎಲ್.ಇ.ಟಿ ಪದವಿ ಇಲ್ಲದವರು ಅಂದರೆ ಕೇವಲ ಎಂ.ಫಿಲ್ ಪ ಮಾಡಿರುವವರು (ದೂರ ಶಿಕ್ಷಣ ಮುಖೇನ ಅಥವಾ ಸಾಂಪ್ರದಾಯಿಕ ಶಿಕ್ಷಣದ ಮುಖೇನ) ಪರಿವೀಕ್ಷ ಅವಧಿಯಲ್ಲಿ ಎನ್.ಇ.ಟಿ/ಎಸ್.ಎಲ್.ಇ.ಟಿ, / ಪಿ.ಹೆಚ್.ಡಿ.ಯಲ್ಲಿ ಮೇಲ್ಕಾಣಿಸಿದ ಇಲಾಖಾ ಪರೀಕ್ಷೆಗಳ ಜೊ ಕಡ್ಡಾಯವಾಗಿ ಉತ್ತೀರ್ಣರಾಗತಕ್ಕದ್ದು. ಇಲ್ಲವಾದಲ್ಲಿ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷ ಅರ್ಹರಾಗುವುದಿಲ್ಲ.
7. ಉಪನ್ಯಾಸಕ ಹುದ್ದೆಗೆ ಅವಶ್ಯಕತೆ ಇರುವ ಓರಿಯೆಂಟೇಷನ್ ಮತ್ತು ರಿಫ್ರೆಷರ್ ಕೋರ್ಸ್ ತರಬೇತಿಯ ಪೂರೈಸತಕ್ಕದ್ದು.
8. ಅಭ್ಯರ್ಥಿಗಳ ಜೇಷ್ಠತೆಯು ಕರ್ನಾಟಕ ಲೋಕ ಸೇವಾ ಆಯೋಗದ ಆಯ್ಕೆ ಪಟ್ಟಿಯಲ್ಲಿ ಪ್ರಸ್ತುತ ಇದ್ದಂತೆ ಇರತಕ್ಕದ್ದು ಹಾಗೂ ತದನಂತರ ಈ ಸಂಬಂಧ ಸರ್ಕಾರ ಹೊರಡಿಸುವ ಅಧಿಸೂಚನೆಯನ್ವಯ ಇರತಕ್ಕದ್ದು.
9. ಅಭ್ಯರ್ಥಿಗಳ ನೇಮಕಾತಿಯು ಮಹಿಳಾ ಮೀಸಲಾತಿ ಕುರಿತಂತೆ ಭಾರತದ ಸರ್ವೋಚ್ಛ ನ್ಯಾಯಾಲಯದಲ್ಲಿನ ರ ಅರ್ಜಿ (ಸಿವಿಲ್) ಸಂಖ್ಯೆ:232/99ರ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರುತ್ತದೆ.
10. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಈ ಕುರಿತು ಬಾಕಿ ಇರುವ ಅರ್ಜಿ ಸಂಖ್ಯೆ: 5278, 5322, 52 5338/2008 ಮತ್ತು 43/2009ರ ಮೇಲೆ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಬದ್ಧರಾಗಿರತಕ್ಕ ಹಾಗೂ ಈ ತೀರ್ಪುಗಳ ಕುರಿತಾದ ಉಚ್ಚ ನ್ಯಾಯಾಲಯದ ಮೇಲ್ಮನವಿ ತೀರ್ಪಿಗೆ ಬದ್ಧರಾಗಿರತಕ್ಕದ್ದು.
11. ಪರಿವೀಕ್ಷಣಾ ಅವಧಿಯಲ್ಲಿ ಯಾವುದೇ ವರ್ಗಾವಣೆ ಪರಿಗಣಿಸಲಾಗುವುದಿಲ್ಲ.
12. ಈ ಅಧಿಸೂಚನೆಯಲ್ಲಿ ಕಾಣಿಸಿರುವ ಅಭ್ಯರ್ಥಿಗಳ ಸಂಬಳ, ಭತ್ಯೆ ಇತ್ಯಾದಿ ಇವುಗಳು ಸ್ಥಳನಿಯುಕ್ತಿ ಆದ ಹೊರಡಿಸಿ ಅದರಂತೆ ಆಯಾ ಸ್ಥಳಗಳಲ್ಲಿ ಹಾಜರಾದ ದಿನಾಂಕದಿಂದ ಲಭ್ಯವಾಗುತ್ತದೆ.

ಅಭ್ಯರ್ಥಿಗಳು ಅಂದರೆ ಪಿ.ಹೆಚ್‌ಡಿ/ಎನ್.ಇ.ಟಿ/ಎಸ್.ಎಲ್.ಇ.ಟಿ ಪದವಿ ಹೊಂದಿರುವವರು ಕನ್ನಡ ಭಾಷೆ, ಅಕೌಂ ಹೈಯರ್ ಹಾಗೂ ಜನರಲ್ ಲಾ ಭಾಗ-1 ಮತ್ತು ಭಾಗ-2 ಇವುಗಳಲ್ಲಿ ತೇರ್ಗಡೆ ಹೊಂದಿದ ನಂತರವೆ ಪರಿವೀಕ್ಷಣಾ ಅ ತೃಪ್ತಿಕರವಾಗಿ ಪೂರೈಸಿದ್ದಾರೆ ಎಂದು ಘೋಷಿಸಲು ಅರ್ಹರಿರುತ್ತಾರೆ; ಅಂತೆಯೇ ಕೇವಲ ಎಂ.ಫಿಲ್ ಪದವಿ ಪಡೆದವರು

ಇಲಾಖಾ ಪರೀಕ್ಷೆಗಳ ಜೊತೆಗೆ ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ತೇರ್ಗಡೆಯಾದಲ್ಲಿ ಮಾತ್ರ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಿರುತ್ತಾರೆ. ಈ ದಿಶೆಯಲ್ಲಿ ಲಗತ್ತಿಸಿರುವ ನಮೂನೆಯಲ್ಲಿ ಒಂದು ಮುಚ್ಚಳಿಕೆಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಇವರು ತಪ್ಪದೇ 100 ರೂಪಾಯಿ ಛಾಪಾ ಕಾಗದದಲ್ಲಿ ಶಪಥಗ್ರಹಣ ಮಾಡಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಅವರುಗಳು ಸ್ಥಳ ನಿಯೋಜನೆಗೆ ಅರ್ಹರಲ್ಲ ಮತ್ತು ಈ ನೇಮಕಾತಿ ಆದೇಶ ರದ್ದಾಗಿದೆಯೆಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)

LETTER OF UNDERTAKING

I, Sri/Smt/Kum.. son of/ daughter of wife of residing at.. ...., do hereby understand and undertake to comply with the following terms and conditions relating to my appointment as Lecturer in.................................pursuant to the recommendation made by the Karnataka Public Service Commission:-

(1) The scale of pay for which I have been appointed has been Rs.8,000 – 275 – 13,500 and the designation is Lecturer in......................

(2) I have to pass the prescribed Kannada language examination and the departmental examinations, viz., Accounts Higher, General Part – I and Part – II, besides the orientation course and refresher course for the post of lecturer.

(3) I have to acquire PhD/NET/SLET and only thereafter I am entitled for declaration of period of probation as satisfactory i.e. after the completion of two years and after passing the above said examinations composed with satisfactory performance.

(4) As I have not acquired NET/SLET/Ph.D. through course work but only M.Phil, I do understand that for declaration of period of probation, apart from passing Kannada language examination, Accounts Higher, General Law Part-I and Part-II besides the orientation course and refresher course I have to acquire NET/SLET without fail. Failure to acquire NET/SLET will render me ineligible for satisfactory declaration of period of probation and claim further increment either in the scale of Rs.8,000 – 13,500 or in any revised scale or claim any revised designation.

(5) I undertake to relinquish my claim to the post of lecturer in..................due to any adverse court verdict treating M.Phil degree obtained through distance or traditional education mode as invalid.

Signature of the candidate

Witnesses:

1.

2.

ಪಿ.ಆರ್. 1459

ಅಧಿಸೂಚನೆ

ಸಂಖ್ಯೆ: ಇಡಿ 210 ಡಿಸಿಇ 2008(13), ಬೆಂಗಳೂರು, ದಿನಾಂಕ: 16ನೇ ಅಕ್ಟೋಬರ್, 2009

ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಅರ್ಜಿಗಳನ್ನು ಆಹ್ವಾನಿಸಿ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದುದು ಸರಿಯಷ್ಟೆ. ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆ ಪ್ರಕ್ರಿಯೆಯನ್ನು ಪೂರೈಸಿ ತದನಂತರ ಮತ್ತು ಆಯೋಗವು ಸಲ್ಲಿಸಿದ ಆಯ್ಕೆ ಪಟ್ಟಿಯಂತೆ ಈ ಕೆಳಕಂಡ ಅಭ್ಯರ್ಥಿಗಳನ್ನು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ 02 ವರ್ಷಗಳ ಪರಿವೀಕ್ಷಣಾ ಅವಧಿಯ ಮೇರೆಗೆ ವೇತನ ಶ್ರೇಣಿ ರೂ.8000–275–13500 ರಲ್ಲಿ ಈ ಮೂಲಕ ನೇಮಕಾತಿ ಮಾಡಲಾಗಿದೆ.

ವಾಣಿಜ್ಯಶಾಸ್ತ್ರ

ಕ್ರ.ಸಂ	KPSC ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	ಸ್ನಾತಕೋತ್ತರ ಪದವಿಯ ಜೊತೆಗೆ ಪಡೆದುಕೊಂಡಿರುವ ವಿದ್ಯಾರ್ಹತೆ			
			NET	SLET	Ph.D.	M.Phil
1	117	ಕೃಷ್ಣ ಕಟ್ಟಿ, ಗಳತಗಾ ಪೋಸ್ಟ್, ಚಿಕ್ಕೋಡಿ ತಾ: ಬೆಳಗಾಂ-591219		SLET		

ಮೇಲ್ಕಂಡ ನೇಮಕಾತಿಯು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ಈ ಅಧಿಸೂಚನೆಯಲ್ಲಿರುವ ಅಭ್ಯರ್ಥಿಗಳಿಗೆ ಕಾಲೇಜು ಶಿಕ್ಷಣ ಆಯುಕ್ತರು ಸ್ಥಳನಿಯುಕ್ತಿ ಆದೇಶ ನೀಡುವ ಸಂಬಂಧ ಕರ್ನಾಟಕ ಲೋಕ ಸೇವಾ ಆಯೋಗ ಆಯ್ಕೆ ಮಾಡಿರುವ ಜ್ಯೇಷ್ಠತೆಯಂತೆಯೇ ಪರಿಗಣಿಸಿ ಕೌನ್ಸಿಲಿಂಗ್ ಮಾಡುವುದು ಈ ಸಂಬಂಧ ಆಯುಕ್ತರ ಕಾರ್ಯಾಲಯವು ಕೌನ್ಸಿಲಿಂಗ್ ದಿನಾಂಕವನ್ನು ತಿಳಿಸುತ್ತದೆ.
2. ನೇಮಕಾತಿಯು ತಾತ್ಕಾಲಿಕವಾಗಿದ್ದು ಆಗ್ಗಿಂದಾಗ್ಗೆ ಈ ಸಂಬಂಧ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
3. ಜನ್ಮ ದಿನಾಂಕ, ವಿದ್ಯಾರ್ಹತೆ (ಅಂಕಪಟ್ಟಿ) ನಡತೆ, ಮೀಸಲಾತಿಗೆ ಸಂಬಂಧಿಸಿದ ಮತ್ತಿತರ ಮೂಲ ದಾಖಲಾತಿಗಳನ್ನು ಅಭ್ಯರ್ಥಿಗಳು ಪ್ರಥಮವಾಗಿ ಆಯುಕ್ತರ ಮುಂದೆ ಹಾಜರುಪಡಿಸಿ ಪರಿಶೀಲನೆಯ ನಂತರ ಈ ದಾಖಲಾತಿಗಳನ್ನು ಹಾಜರಾಗುವ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು.
4. ಕರ್ನಾಟಕ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ (1974)ರ ಅಡಿ ನಿಗದಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆಯನ್ನು ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣರಾಗತಕ್ಕದ್ದು.
5. ಪಿಹೆಚ್.ಡಿ / ಎನ್.ಇ.ಟಿ / ಎಸ್.ಎಲ್.ಇ.ಟಿ ಪರೀಕ್ಷೆ ತೇರ್ಗಡೆ ಹೊಂದಿದ್ದವರು ಅಕೌಂಟ್ಸ್ ಹೈಯರ್ ಮತ್ತು ಜನರಲ್ ಲಾ, ಭಾಗ-1 ಮತ್ತು ಭಾಗ-2 ಇದನ್ನು ಪರಿವೀಕ್ಷಣಾ ಅವಧಿಯಲ್ಲಿ ತೇರ್ಗಡೆಯಾಗತಕ್ಕದ್ದು. ಇಲ್ಲವಾದಲ್ಲಿ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಾಗುವುದಿಲ್ಲ.
6. ಪಿಹೆಚ್.ಡಿ/ ಎನ್.ಇ.ಟಿ / ಎಸ್.ಎಲ್.ಇ.ಟಿ ಪದವಿ ಇಲ್ಲದವರು ಅಂದರೆ ಕೇವಲ ಎಂ.ಫಿಲ್ ಪಾಸು ಮಾಡಿರುವವರು (ದೂರ ಶಿಕ್ಷಣ ಮುಖೇನ ಅಥವಾ ಸಾಂಪ್ರದಾಯಿಕ ಶಿಕ್ಷಣದ ಮುಖೇನ) ಪರಿವೀಕ್ಷಣಾ ಅವಧಿಯಲ್ಲಿ ಎನ್.ಇ.ಟಿ/ಎಸ್.ಎಲ್.ಇ.ಟಿ. / ಪಿ.ಹೆಚ್.ಡಿ.ಯಲ್ಲಿ ಮೇಲ್ಕಾಣಿಸಿದ ಇಲಾಖಾ ಪರೀಕ್ಷೆಗಳ ಜೊತೆಗೆ ಕಡ್ಡಾಯವಾಗಿ ಉತ್ತೀರ್ಣರಾಗತಕ್ಕದ್ದು. ಇಲ್ಲವಾದಲ್ಲಿ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಾಗುವುದಿಲ್ಲ.
7. ಉಪನ್ಯಾಸಕ ಹುದ್ದೆಗೆ ಅವಶ್ಯಕತೆ ಇರುವ ಓರಿಯೆಂಟೇಷನ್ ಮತ್ತು ರಿಫ್ರೆಷರ್ ಕೋರ್ಸ್ ತರಬೇತಿಯನ್ನು ಪೂರೈಸತಕ್ಕದ್ದು.
8. ಅಭ್ಯರ್ಥಿಗಳ ಜೇಷ್ಠತೆಯು ಕರ್ನಾಟಕ ಲೋಕ ಸೇವಾ ಆಯೋಗದ ಆಯ್ಕೆ ಪಟ್ಟಿಯಲ್ಲಿ ಪ್ರಸ್ತುತ ಇದ್ದಂತೆಯೇ ಇರತಕ್ಕದ್ದು ಹಾಗೂ ತದನಂತರ ಈ ಸಂಬಂಧ ಸರ್ಕಾರ ಹೊರಡಿಸುವ ಅಧಿಸೂಚನೆಯನ್ವಯ ಇರತಕ್ಕದ್ದು.
9. ಅಭ್ಯರ್ಥಿಗಳ ನೇಮಕಾತಿಯು ಮಹಿಳಾ ಮೀಸಲಾತಿ ಕುರಿತಂತೆ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿನ ರಿಟ್ ಅರ್ಜಿ (ಸಿವಿಲ್) ಸಂಖ್ಯೆ:232/99ರ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರುತ್ತದೆ.
10. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಈ ಕುರಿತು ಬಾಕಿ ಇರುವ ಅರ್ಜಿ ಸಂಖ್ಯೆ: 5502/2008 ಮತ್ತು 2365/2009 ಮತ್ತು 43/2009ರ ಮೇಲೆ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಬದ್ದರಾಗಿರತಕ್ಕದ್ದು. ಹಾಗೂ ಈ ತೀರ್ಪುಗಳ ಕುರಿತಾದ ಉಚ್ಚ ನ್ಯಾಯಾಲಯದ ಮೇಲ್ಮನವಿ ತೀರ್ಪಿಗೆ ಬದ್ಧರಾಗಿರತಕ್ಕದ್ದು.
11. ಪರಿವೀಕ್ಷಣಾ ಅವಧಿಯಲ್ಲಿ ಯಾವುದೇ ವರ್ಗಾವಣೆ ಪರಿಗಣಿಸಲಾಗುವುದಿಲ್ಲ.
12. ಈ ಅಧಿಸೂಚನೆಯಲ್ಲಿ ಕಾಣಿಸಿರುವ ಅಭ್ಯರ್ಥಿಗಳ ಸಂಬಳ, ಭತ್ಯೆ ಇತ್ಯಾದಿ ಇವುಗಳು ಸ್ಥಳನಿಯುಕ್ತಿ ಆದೇಶ ಹೊರಡಿಸಿ ಅದರಂತೆ ಆಯಾ ಸ್ಥಳಗಳಲ್ಲಿ ಹಾಜರಾದ ದಿನಾಂಕದಿಂದ ಲಭ್ಯವಾಗುತ್ತದೆ.

ಅಭ್ಯರ್ಥಿಗಳು ಅಂದರೆ ಪಿ.ಹೆಚ್‌ಡಿ/ಎನ್.ಇ.ಟಿ/ಎಸ್.ಎಲ್.ಇ.ಟಿ ಪದವಿ ಹೊಂದಿರುವವರು ಕನ್ನಡ ಭಾಷೆ, ಅಕೌಂಟ್ಸ್ ಹೈಯರ್ ಹಾಗೂ ಜನರಲ್ ಲಾ ಭಾಗ-1 ಮತ್ತು ಭಾಗ-2 ಇವುಗಳಲ್ಲಿ ತೇರ್ಗಡೆ ಹೊಂದಿದ ನಂತರವೆ ಪರಿವೀಕ್ಷಣಾ ಅವಧಿ ತೃಪ್ತಿಕರವಾಗಿ ಪೂರೈಸಿದ್ದಾರೆ ಎಂದು ಘೋಷಿಸಲು ಅರ್ಹರಿರುತ್ತಾರೆ; ಅಂತೆಯೇ ಕೇವಲ ಎಂ.ಫಿಲ್ ಪದವಿ ಪಡೆದವರು ಈ ಇಲಾಖಾ ಪರೀಕ್ಷೆಗಳ ಜೊತೆಗೆ ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ತೇರ್ಗಡೆಯಾದಲ್ಲಿ ಮಾತ್ರ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಿರುತ್ತಾರೆ. ಈ ದಿಶೆಯಲ್ಲಿ ಲಗತ್ತಿಸಿರುವ ನಮೂನೆಯಲ್ಲಿ ಒಂದು ಮುಚ್ಚಳಿಕೆಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಇವರು ತಪ್ಪದೇ 100 ರೂಪಾಯಿ ಛಾಪಾ ಕಾಗದದಲ್ಲಿ ಶಪಥಗ್ರಹಣ ಮಾಡಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಅವರುಗಳು ಸ್ಥಳ ನಿಯೋಜನೆಗೆ ಅರ್ಹರಲ್ಲ ಮತ್ತು ಈ ನೇಮಕಾತಿ ಆದೇಶ ರದ್ದಾಗಿದೆಯೆಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)

LETTER OF UNDERTAKING

I, Sri/Smt/Kum.. son of/ daughter of wife of residing at.. ...., do hereby understand and undertake to comply with the following terms and conditions relating to my appointment as Lecturer in..................................pursuant to the recommendation made by the Karnataka Public Service Commission:-

(1) The scale of pay for which I have been appointed has been Rs.8,000 – 275 – 13,500 and the designation is Lecturer in.....................

(2) I have to pass the prescribed Kannada language examination and the departmental examinations, viz., Accounts Higher, General Part – I and Part – II, besides the orientation course and refresher course for the post of lecturer.

(3) I have to acquire PhD/NET/SLET and only thereafter I am entitled for declaration of period of probation as satisfactory i.e. after the completion of two years and after passing the above said examinations composed with satisfactory performance.

ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ವಾಹನ ಸಂ:KL-11E-853 ಟಾಟಾ 407 ಲಾರಿಯ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ನೀಡುವಂತೆ ಪ್ರಾದೇಶಿಕ ಸಾರಿಗೆ ಅದಿಕಾರಿಗಳು, ಕೋಝಿಕೋಡ್,ಕೇರಳ ರಾಜ್ಯ ಇವರಿಗೆ ದಿ:25-3-2009ರಂದು ಈ ಪ್ರಾದಿಕಾರದಿಂದ ಹಾಗೂ ಅಬಕಾರಿ ಉಪ ನಿರೀಕ್ಷಕರು, ಸುಳ್ಯ ವಲಯ, ಸುಳ್ಯ ಇವರಿಂದ ಎರಡು ಬಾರಿ ಪತ್ರ ಮುಖೇನಾ ಕೋರಿಕೊಂಡರೂ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿ ಸದ್ರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಸ್ವೀಕೃತವಾಗಿರುವುದಿಲ್ಲ. ಸದ್ರಿ ವಾಹನದ ಮೌಲ್ಯ ಮಾಪನ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ಪುತ್ತೂರು ಇವರಿಂದ ಪಡೆದು ಅಬಕಾರಿ ನಿರೀಕ್ಷಕರು,ಸುಳ್ಯ ವಲಯ ಇವರು ಪ್ರಾದಿಕಾರಕ್ಕೆ ಸಲ್ಲಿಸಿದ್ದು, ಸದ್ರಿ ಮೌಲ್ಯ ಮಾಪನ ವರದಿಯ ಪ್ರಕಾರ ವಾಹನವು ಟಾಟಾ ಕಂಪೆನಿಯ ತಯಾರಿಕಾ ವಾಹನವಾಗಿದ್ದು,ವಾಹನದ ಚಾಸೀಸ್ ಸಂ:0814864, ಇಂಜಿನ್ ಸಂ: ಅಸ್ಪಷ್ಟವಾಗಿರುತ್ತದೆ ಮತ್ತು ವಾಹನದ ಸ್ಥಿತಿಗತಿಗನುಸಾರವಾಗಿ ಮೌಲ್ಯ ಮಾಪನ ರೂ.1,80,000/- ಎಂದು ದೃಡೀಕರಿಸಿ ಪತ್ರ ನೀಡಿರುತ್ತಾರೆ.

ವಾಹನದ ಮಾಲೀಕತ್ವವನ್ನು ತಿಳಿಯಲು ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯು ಏಕೈಕ ದಾಖಲೆಯಾಗಿದ್ದು, ಸದ್ರಿ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅದಿಕಾರಿಗಳು ನೀಡದೇ ಇರುವುದರಿಂದ ವಾಹನದ ಮಾಲೀಕತ್ವದ ಬಗ್ಗೆ ಮಾಹಿತಿಯನ್ನು ಪಡೆಯಲು ಈ ಪ್ರಾಧಿಕಾರದಲ್ಲಿ ಸಾಧ್ಯವಾಗಿರುವುದಿಲ್ಲ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ದಿ:04-8-2008ರಂದು ವಶಪಡಿಸಿ ಕೊಂಡು ಈಗಾಗಲೇ 1 ವರ್ಷ ಕಳೆದರೂ, ಪ್ರಕರಣದಲ್ಲಿ ದಸ್ತಗಿರಿಯಾದ ಆರೋಪಿಗಳಾಗಲೀ, ವಾಹನದ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಪ್ರಕರಣ ದಾಖಲಿಸಿಕೊಂಡ ಸುಳ್ಯ ಪೊಲೀಸ್ ಠಾಣೆಯಲ್ಲಾಗಲೀ, ಪ್ರಕರಣದ ತನಿಖೆ ಕೈಗೊಂಡ ಸುಳ್ಯ ಅಬಕಾರಿ ವಲಯ ಕಛೇರಿಯಲ್ಲಾಗಲೀ ಅಥವಾ ಈ ಪ್ರಾದಿಕಾರದಲ್ಲಾಗಲೀ ಹಾಜರಾಗಿ ವಾಹನದ ಬಿಡುಗಡೆಗಾಗಿ ಯಾರೂ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸದರಿ ವಾಹನದಲ್ಲಿ ಜನೋಪಯೋಗಿ ವಸ್ತುವಾದ ಹಣ್ಣುಹಂಪಲು ಸಾಗಾಟ ಮಾಡುವ ನೆಪದಲ್ಲಿ ಅದರ ಮರೆಯಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಮದ್ಯಸಾರವನ್ನು ತುಂಬಿಸಿ ಅಕ್ರಮ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಸದರಿ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಪ್ರಾದಿಕಾರವು ಮನಗಂಡು ಮುಟ್ಟುಗೋಲು ನಡವಳಿಯನ್ನು ಪ್ರಾರಂಭಿಸಲಾಗಿರುತ್ತದೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳ ಉತ್ತರ ಪಡೆಯಲಾಗಿರುತ್ತದೆ.

) ಮೊದಲನೇ ವಿವಾದಾಂಶ: ದಿ: 5-8-2008 ರಂದು KL-11-E-853 ಎಂಬ ಸಂಖ್ಯಾ ಫಲಕ ಹೊಂದಿರುವ ಟಾಟಾ 407 ಲಾರಿಯಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀಮತಿ.ಗೀತಾ. ಪಿ.,ಅಬಕಾರಿ ಉಪ ನಿರೀಕ್ಷಕರು, ಸುಳ್ಯ ವಲಯ ಇವರು ದಿ:19-8-2009ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ವಿಚಾರಣೆ ನೀಡುತ್ತಾ, ನಾನು ಕಳೆದ ನಾಲ್ಕು ವರ್ಷಗಳಿಂದ ಸುಳ್ಯ ಅಬಕಾರಿ ಉಪ ನಿರೀಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ:2-9-2008 ರಂದು ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ ಜಿಲ್ಲೆ ಇವರ ದಿ:27-8-2008ರ

ಆದೇಶದಂತೆ ಸುಳ್ಯ ಪೋಲೀಸ್ ಠಾಣಾ ಕ್ರೈಂ ಸಂ:185/2008 ದಿ:5-8-2008ರ ಮೊಕದ್ದಮೆಗೆ ಸಂಬಂಧಿಸಿ ದಾಖಲೆ ಮತ್ತು ಸೊತ್ತುಗಳಾದ ಟಾಟಾ 407 ಲಾರಿ ಸಂ: KL-11-E-853 ಮತ್ತು 35 ಲೀ ಗಾತ್ರದ 67 ಪ್ಲಾಸ್ಟಿ ಕ್ಯಾನುಗಳಲ್ಲಿ 2345 ಲೀ ಮದ್ಯಸಾರವನ್ನು ಪಡೆದುಕೊಂಡಿರುತ್ತೇನೆ. ಸದ್ರಿ ಪ್ರಕರಣದ ಮುದ್ದೆ ಮಾಲುಗಳನ ಹಸ್ತಾಂತರ ಪಡೆದುಕೊಂಡ ಬಗ್ಗೆ ದಿ:24-9-2008ರಂದು ಅಧಿಕೃತ ಅಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತೇನೆ. ಸ ಜಪ್ತು ಪಡಿಸಿಕೊಂಡ ಮದ್ಯಸಾರದ ಮಾದರಿಗಳನ್ನು ಪೋಲೀಸ್ ಅಧಿಕಾರಿಗಳೇ ರಾಸಾಯನಿಕ ವಿಶ್ಲೇಷಣೆ ಒಳಪಡಿಸಿದ್ದು, ವಿಶ್ಲೇಷಣಾ ವರದಿಯ ಪ್ರತಿಯನ್ನು ಪೋಲೀಸ್ ಅಧಿಕಾರಿಗಳಿಂದ ಪಡೆದುಕೊಂಡಿರುತ್ತೇ ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನದ "ಬಿ" ವಹಿ ವರದಿಗಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಾಸರಗೋಡು ಜಿಲ್ಲೆ ಇವರಿಗೆ ಬರೆಯಲಾಗಿದ್ದು,ಸದ್ರಿಯವರಿಂದ ಬಿ ವರದಿ ಸ್ವೀಕೃತವಾಗದೇ ಇರುವುದರಿ ಪ್ರಕರಣದಲ್ಲಿ ಜಪ್ತಾದ ವಾಹನ ಸಮೇತ ಎಲ್ಲಾ ಮುದ್ದೆ ಮಾಲುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಪ್ರಸ್ತುತ ಸರ್ಕಾರದ ಅಧಿಸೂಚನೆಯಂತೆ ಮುಟ್ಟುಗೋಲು ಹಾಕಿಕೊಂಡ ಮದ್ಯಸಾರವನ್ನು ನಾಶಪಡಿ ಬೇಕಾಗಿರುವುದರಿಂದ, ಮುಟ್ಟುಗೋಲು ಹಾಕಿ ಕೊಂಡ ಸದ್ರಿ ಮದ್ಯಸಾರವನ್ನು ನಾಶಪಡಿಸಲು ಆದೇಶ ನೀಡುವಂ ದಿ:5-2-2009ರಂದು ಅಧಿಕೃತ ಅಧಿಕಾರಿಗಳ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತೇನೆ. ಅದರ ಪ್ರಕಾರ ಪ್ರಾಧಿಕಾರ ದಿ:8-7-2009ರ ಅದೇಶದಲ್ಲಿ ಜಪ್ತು ಪಡಿಸಿಕೊಳ್ಳಲಾದ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲ ಹಾಕಿಕೊಂಡು ನಾಶಪಡಿಸಲು ಆದೇಶಿಸಲಾಗಿರುತ್ತದೆ. ಸದ್ರಿ ಮುಟ್ಟುಗೋಲು ಹಾಕಿಕೊಂಡ ಮದ್ಯಸಾರವನ ದಿ:20-7-2009ರಂದು ಮಹಜರು ಜರುಗಿಸಿ ಅಬಕಾರಿ ಉಪ ಅಧೀಕ್ಷಕರು,ಪುತ್ತೂರು ಉಪ ವಿಭಾಗ,ಪುತ್ತೂರ ಇವರ ಸಮಕ್ಷಮದಲ್ಲಿ ನಾಶಪಡಿಸ ಲಾಗಿರುತ್ತದೆ. ವಾಹನದ"ಬಿ"ವರದಿಯನ್ನು ನೀಡುವಂತೆ ಸಂಬಂಧಿಸಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಲ್ಲಿ ಎರಡು ಬಾರಿ ಪತ್ರ ಮುಖೇನಾ ವಿನಂತಿಸಿಕೊಂಡರೂ ಸದ್ರಿ ಸಾರಿ ಪ್ರಾಧಿಕಾರಿಗಳಿಂದ ವರದಿ ಬಂದಿರುವುದಿಲ್ಲ .ಕಾರಣ ಸದ್ರಿ ವಾಹನವನ್ನು ಜಪ್ತುಪಡಿಸಿಕೊಂಡು 11 ತಿಂಗಳುಗಳ ಕಳೆದಿರುವುದರಿಂದ ಸದ್ರಿ ವಾಹನದ ಸ್ಥಿತಿಗತಿ ,ವಾತಾವರಣದ ವೈಪರೀ ತ್ಯದಿಂದ ಕ್ಷೀಣ ಗೊಳ್ಳುವ ಸಾಧ್ಯ ಇದ್ದು,ಇದರಿಂದ ಸರ್ಕಾರಕ್ಕೆ ಅರ್ಥಿಕ ನಷ್ಟವುಂಟಾಗುವ ಸಂಭವವಿರುವುದರಿಂದ ಸದ್ರಿ ವಾಹನವನ್ನು ಸಹ ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಳ್ಳುವಂತೆ ದಿ:14-7-2009ರಂದು ಮಾನ್ಯ ಅಧಿಕೃತ ಅಧಿಕಾರಿಗಳಿಗೆ ವರ ಸಲ್ಲಿಸಿರುತ್ತೇನೆ. ಪೋಲೀಸ್ ವೃತ್ತ ನಿರೀಕ್ಷಕರು,ಸುಳ್ಯ ಪೋಲೀಸ್ ಠಾಣೆ ಇವರ ಕ್ರೈಂ ಸಂ:185/200 ದಿ:5-8-2008ಇದರ ಪ್ರತಿಯನ್ನು ಪ್ರಾಧಿಕಾರದಲ್ಲಿ ಈಗ ನೋಡಿ ಅದನ್ನು ನಿಶಾನೆ ಪಿ-1 ಎಂದು, ರಾಸಾಯನಿ ವಿಶ್ಲೇಷಣಾ ವರದಿಯ ಪ್ರತಿಯನ್ನು ನಿಶಾನೆ ಪಿ-2 ಎಂದೂ, ಸೊತ್ತು ಮುಟ್ಟುಗೋಲು ಸಂಬಂಧ ಪ್ರಾಧಿಕಾರಕ ಸಲ್ಲಿಸಿದ್ದ ತನಿಖಾ ವರದಿ ದಿ:5-2-2009ರ ಪ್ರಸ್ತಾವನೆಯನ್ನು ನಿಶಾನೆ ಪಿ-3 ಎಂದೂ ಅದರ ಮೇಲಿನ ತನ ಸಹಿಯನ್ನು ನಿಶಾನೆ ಪಿ-3 ಎ ಎಂದೂ, ದಿ:14-7-2009ರಂದು ಸಲ್ಲಿಸಿದ್ದ ಪ್ರಸ್ತಾವನೆಯನ್ನು ನಿಶಾನೆಪಿ-4 ಎಂದೂ ಅದರ ಮೇಲಿನ ತನ್ನ ಸಹಿಯನ್ನು ನಿಶಾನೆ ಪಿ-4 ಎ ಎಂದೂ ವಿಚಾರಣೆ ವೇಳೆಯಲ್ಲಿ ಗುರುತಿಸಿರುತ್ತೇನೆ ಎಂದು ಸಾ ನೀಡಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದೇ ಇರುವ ಪ್ರಯುಕ್ತ ಪಾಟ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ತನಿಖಾಧಿಕಾರಿಯವರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರು ದಾಖಲಾತಿಗಳಿಂದ ದಿ:5-8-2008 ರಂದು ಜಪ್ತುಪಡಿಸಿಕೊಂಡಿರುವ ಟಾಟಾ 407 ಲಾರಿ ಸಂಖ್ಯೆ: KL-11-E-853 ಇದರಲ ಹಣ್ಣು ಹಂಪಲು ಸಾಗಾಟದ ನೆಪದಲ್ಲಿ ಸದ್ರಿ ಸೊತ್ತುಗಳ ಮರೆಯಲ್ಲಿ 67 ಮದ್ಯಸಾರ ತುಂಬಿಸಿದ ಕ್ಯಾನುಗಳನ ಅಡಗಿಸಿ ಅಕ್ರಮವಾಗಿ 2345.000 ಲೀಟರ್ ಮದ್ಯಸಾರವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೇ ಸಾಗಾಣಿ ಮಾಡಿರುವುದರಿಂದ ವಾಹನದ ಮಾಲೀಕರು ಅಥವಾ ತತ್ಸಂಬಂಧ ವ್ಯಕ್ತಿಗಳು ತಮ್ಮ ತಿಳುವಳಿಕೆಯಿಂದಲೇ ಈ ಅಪರಾಧವೆಸಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಾಹನದ ಬಿಡುಗಡೆಗಾ ವಾಹನಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು, ಅಥವಾ ಪ್ರಕರಣದಲ್ಲಿ ತಮ್ಮ ನಿರಾಪರಾಧಿತ್ವವನ ಸಾಬೀತುಪಡಿಸಲು ಯಾವುದೇ ದಾಖಲಾತಿಗಳನ್ನು ಪ್ರಾಧಿಕಾರದ ಮುಂದೆ ಒದಗಿಸಲು ವಿಫಲರಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯತೆವಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯ ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳ

ರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸ್ವತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಪೊಲೀಸ್ ವೃತ್ತ ನಿರೀಕ್ಷಕರು, ಸುಳ್ಯ ಇವರು ಸುಳ್ಯ ಪೊಲೀಸ್ ಠಾಣಾ ತಕ್ಷೀರು ಸಂಖ್ಯೆ: 185/2008 ದಿ:5-8-2008 ರಂದು ದಾಖಲಿಸಿದ ಪ್ರಕರಣದಲ್ಲಿ ಆರೋಪಿಗಳು ಜನೋಪಯೋಗಿ ಹಣ್ಣುಹಂಪಲು ಸೊತ್ತುಗಳೊಂದಿಗೆ ಅಕ್ರಮವಾಗಿ 67 ಮದ್ಯಸಾರ ತುಂಬಿದ ಕ್ಯಾನುಗಳಲ್ಲಿ 2345.000 ಲೀಟರ್ ಮದ್ಯಸಾರ ಸಾಗಾಣಿಕೆ ಮಾಡುವುದನ್ನು ಪತ್ತೆಹಚ್ಚಿ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯಸಾರವೆಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಟಾಟಾ 407 ಲಾರಿ ಸಂಖ್ಯೆ: KL-11-E-853 ನ್ನು ವಶಪಡಿಸಿಕೊಂಡು ಸುಮಾರು ಒಂದು ವರ್ಷ ಕಳೆದರೂ ಈ ಪ್ರಾಧಿಕಾರದ ಮುಂದೆ ಅಥವಾ ತಕ್ಷೀರು ದಾಖಲಿಸಿದ ಸುಳ್ಯ ಪೊಲೀಸ್ ಠಾಣೆ ಮತ್ತು ಸುಳ್ಯ ವಲಯ ಕಚೇರಿಯಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರು ಅಥವಾ ಆರೋಪಿಗಳು ವಾಹನದ ಮಾಲೀಕತ್ವ ನಿರೂಪಿಸಿ ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ಅಬಕಾರಿ ನಿರೀಕ್ಷಕರು, ಸುಳ್ಯ ವಲಯ ಇವರ ತನಿಖಾ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿಯ ಬಗ್ಗೆ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಹಲವಾರು ಬಾರಿ ಪತ್ರ ವ್ಯವಹಾರ ನಡೆಸಿದ್ದರೂ ಸದ್ರಿಯವರಿಂದ ಯಾವುದೇ ವರದಿ ಬಾರದೇ ಇರುವುದರಿಂದ, ವಾಹನದ ಮಾಲೀಕರ ಬಗ್ಗೆ ವಿವರಗಳನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ಹಾಗೂ ವಾಹನದಲ್ಲಿ ಹಣ್ಣುಹಂಪಲು ಸಾಗಾಟ ಮಾಡುವ ನೆಪದಲ್ಲಿ ಸದ್ರಿ ಸೊತ್ತುಗಳ ಮರೆಯಲ್ಲಿ ಅಕ್ರಮವಾಗಿ ಮದ್ಯಸಾರ ತುಂಬಿದ 67 ಕ್ಯಾನುಗಳನ್ನು ಇರಿಸಿ 2345.000 ಲೀಟರ್ ಸಾಗಾಣಿಕೆ ಮಾಡಿರುವುದು ಪ್ರಕರಣದ ದಾಖಲಾತಿಗಳಿಂದ ಸಾಬೀತಾಗಿರುತ್ತದೆ. ಅಲ್ಲದೇ ವಾಹನದ ಮಾಲೀಕರು ಅಕ್ರಮ ಮದ್ಯಸಾರ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಹಾಗೂ ತಲೆಮರೆಸಿಕೊಂಡು ಖೈದಿಯಾಗಿರುವ ... ವ್ಯಕ್ತಿಗಳು ...

ಸ್ಟಗಿರಿಯಾದ ಆರೋಪಿಗಳು ಖುದ್ದಾಗಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಆದುದರಿಂದ ವಾಹನ ಮಾಲೀಕರೇ ಸ್ವತ: ತನ್ನ ಲಾರಿಯಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಮದ್ಯಸಾರ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಲಾರಿಯು ಈಗಾಗಲೇ 1 ವರ್ಷ ಕಳೆದರೂ ಆದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಅಕ್ರಮ ಮದ್ಯಸಾರ ಸಾಗಾಟಕ್ಕೆ ಬಳಸಿದ KL-11-E-853 ಟಾಟಾ 407 ಲಾರಿ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಸಿ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/72/ಡಿಟಿಸಿಆರ್/2008-09, ದಿನಾಂಕ:21ನೇ ಆಗಸ್ಟ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕಲಂ 43 (ಬಿ) ಅಡಿ ಕ್ರಮ ಜರುಗಿಸಿ, ಪೊಲೀಸ್ ವೃತ್ತ ನಿರೀಕ್ಷಕರು, ಸುಳ್ಯ ಪೋಲೀಸ್ ಠಾಣೆ ಇವರ ಕ್ರೈಂ ಸಂ: 185/2008 ದಿ:5-8-2008 ರಲ್ಲಿ ಜಪ್ತುಪಡಿಸಿಕೊಂಡಿರುವ ಟಾಟಾ 407 ಲಾರಿ ಸಂ: KL-11-E-853 ನ್ನು ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:21-08-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀಮತಿ.ಗೀತಾ, ಅಬಕಾರಿ ಉಪ ನಿರೀಕ್ಷಕರು, ಸುಳ್ಯ ವಲಯ,ಸುಳ್ಯ.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಪೊಲೀಸ್ ಕ್ರೈಂ ಸಂ:185/2008 ದಿ:5-8-2008ರ ಪ್ರತಿ

ನಿಶಾನೆ ಪಿ-2 : ರಾಸಾಯನಿಕ ವಿಶ್ಲೇಷಕರ ವರದಿ

ನಿಶಾನೆ ಪಿ-3 : ದಿ:5-2-2009ರ ಪ್ರಸ್ತಾವನಾ ವರದಿ

ನಿಶಾನೆ ಪಿ-3 ಎ : ಅದರ ಮೇಲಿನ ಸಹಿ.

ನಿಶಾನೆ ಪಿ-4 : ದಿ:14-7-2009ರ ಪ್ರಸ್ತಾವನಾ ವರದಿ.

ನಿಶಾನೆ ಪಿ-4 ಎ : ಅದರ ಮೇಲಿನ ಸಹಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿಗಳು ಹಾಗೂ

ಪಿ.ಆರ್.905 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ
ಸಂಖ್ಯೆ: ಎಸ್‌ಡಿಕೆ/183/ಡಿಟಿಸಿಆರ್/2006-07 ದಿನಾಂಕ:28ನೇ ಆಗಸ್ಟ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು,
ಪುತ್ತೂರು ಪೊಲೀಸ್ ಠಾಣೆ,
ಪುತ್ತೂರು.

ಆರೋಪಿಗಳು:

1) ಹ್ಯಾರಿಸ್, ಬಿನ್ ಅಬೂಬಕ್ಕರ್, ಗೋಳ್ತಮಜಲು ಮನೆ, ಗೋಳ್ತಮಜಲು ಗ್ರಾಮ, ಬಂಟ್ವಾಳ.
2) ಹ್ಯಾರಿಸ್, ಬಿನ್ ಕೆ.ಇಬ್ರಾಹಿಂ, ವಾಸ :ಕಲ್ಲಡ್ಕ, ಸರ್ಕಾರಿ ಪ್ರೌಢ ಶಾಲೆ ಹತ್ತಿರ, ಬಂಟ್ವಾಳ ತಾಲ್ಲೂಕು.
3) ಸಿದ್ದಾರ್ಥ, ಬಿನ್:ಅಚ್ಯುತನ್, ಡೈಕಟೀಲ್, ಹಂದಿಕಾಡು, ತ್ರಿಶೂಲ್ ಜಿಲ್ಲೆ, ಕೇರಳ.
4) ಸತೀಶ್, ಬಿನ್:ರಾಮೇಗೌಡ, ಜವೇಗಲ್, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.
5) ಜಯರಾಜ್, ಬಿನ್ ಶ್ರೀನಿವಾಸ, ಕೆರೆಕಟ್ಟೆ, ಶೃಂಗೇರಿ ತಾಲ್ಲೂಕು.

ವಾಹನ ಮಾಲೀಕರು:

ಶ್ರೀ ಅಬ್ಬಾಸ್, ಬಿನ್: ಖಾಸಿಮ್,ವಾಸ:ಇಸ್ಲಮಾಬಾದ್ ಹೌಸ್, ಚಾರ್ಮಾಡಿ ಗ್ರಾಮ, ಬೆಳ್ತಂಗಡಿ ತಾಲ್ಲೂಕು.
(ಜೀಪ್ ಸಂ:ಕೆಎ-19ಎ-5742)

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:09-11-2006 ರಂದು ಪುತ್ತೂರು ನಗರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು ಇವರಿಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಪುತ್ತೂರಿನಿಂದ ಕೇರಳ ರಾಜ್ಯದ ಕಾಸರಗೋಡು ಕಡೆಗೆ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಮಾರುತಿ ಕಾರಿನಲ್ಲಿ ಸಾಗಿಸುತ್ತಿರುವುದಾಗಿ ತಿಳಿದ ಮೇರೆಗೆ ತಮ್ಮ

ಜೀಪಿನಲ್ಲಿ ಹೊರಟು, ಬೋಳುವಾರು ಹಳೆಯ ಆರ್.ಟಿ.ಒ ಕಚೇರಿ ಜಂಕ್ಷನ್‌ನಲ್ಲಿ ರಸ್ತೆಗಾವಲು ಸುತ್ತಿದ್ದಾಗ ರಾತ್ರಿ ಸುಮಾರು 9-00 ಗಂಟೆ ಸಮಯದಲ್ಲಿ ಹಾರಾಡಿ ಕಡೆಯಿಂದ ಕಬಕ ಕಡೆಗೆ ಬರುತ್ತಿದ್ದ ರುತಿ ೮೦೦ ಕಾರನ್ನು ಸಂಶಯದ ಮೇರೆಗೆ ನಿಲ್ಲಿಸಲು ಸೂಚನೆ ನೀಡಿದಾಗ, ಕಾರಿನ ಚಾಲಕನು ಕಾರನ್ನು ವಕ್ಕೆ ಚಲಾಯಿಸಿಕೊಂಡು, ನಂತರ ಬೆನ್ನಟ್ಟಿ, ಪುತ್ತೂರು ಕರ್ಮಲ್ ಕಡೆಗೆ ಹೋಗುವ ರಸ್ತೆಯ ಬಳಿ ಕಾರನ್ನು ಓವರ್ ಟೇಕ್ ಮಾಡಿ, ಕಾರಿನಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ಬೆನ್ನಟ್ಟಿ ಹಿಡಿದು, ವಿಚಾರಿಸಿದಾಗ ರು ಸಮರ್ಪಕವಾದ ಉತ್ತರವನ್ನು ನೀಡಿರುವುದಿಲ್ಲ. ಸದ್ರಿ ಸ್ಥಳಕ್ಕೆ ಪಂಚರನ್ನು ಕರೆಯಿಸಿ,ಪಂಚರ ಕ್ಷಮ ಕಾರಿನ ಹಿಂದಿನ ಸೀಟನ್ನು ಪರಿಶೀಲಿಸಿದಾಗ 11 ಪ್ಲಾಸ್ಟಿಕ್ ಗೋಣಿ ಚೀಲಗಳಿರುವುದು ಕಂಡು ತು . ಪಂಚರ ಸಮಕ್ಷಮ ಸದ್ರಿ ಪ್ಲಾಸ್ಟಿಕ್ ಗೋಣಿ ಚೀಲವನ್ನು ಕಾರಿನ ಒಳಗಿನಿಂದ ಹೊರತೆಗೆದು, ಶೀಲಿಸಿದಾಗ ಎಲ್ಲಾ ಗೋಣಿ ಚೀಲಗಳಲ್ಲಿ ಸಾರಾಯಿ ಸ್ಯಾಚೆಟ್‌ಗಳಿರುವುದು ಕಂಡು ಬಂತು. ತಲಾ 500 ಕೆ ಒಟ್ಟು 100 ಎಂ.ಎಲ್‌ನ 5500 ಸಾರಾಯಿ ಸ್ಯಾಚೆಟ್‌ಗಳು ಇರುವುದು ಕಂಡು ಬಂತು. ಸಾರಾಯಿ ಚೆಟ್‌ಗಳನ್ನು ಸಾಗಾಟ ಮಾಡಲು ರಹದಾರಿ ಪತ್ರಗಳು ಇದೆಯೇ ಎಂದು ವಿಚಾರಿಸಿದಾಗ ಸದ್ರಿಯವರ ಕೆ ಹ್ಯಾರಿಸ್, ಬಿನ್:ಅಬೂಬಕ್ಕರ್, ಗೋಳ್ತಮಜಲು ಮನೆ, ಗೋಳ್ತಮಜಲು ಗ್ರಾಮ,ಬಂಟ್ವಾಳ ಇವರು ರಿನ ಚಾಲಕನಾಗಿದ್ದು, ಇನ್ನೊಬ್ಬನ ಹೆಸರು ಹ್ಯಾರಿಸ್,ಬಿನ್:ಕೆ.ಇಬ್ರಾಹಿಂ,ವಾಸ :ಕಲ್ಲಡ್ಕ,ಸರ್ಕಾರಿ ಪ್ರೌಢ ಲೆ ಹತ್ತಿರ,ಬಂಟ್ವಾಳ ತಾಲೂಕು ಎಂದು ಹೇಳಿದನು. ಸಾರಾಯಿ ಸ್ಯಾಚೆಟ್‌ಗಳನ್ನು ಪುತ್ತೂರು ಅಬಕಾರಿ ತ್ತಿಗೆದಾರ ಕೆಲಸದವನಾದ ಸತೀಶ್,ಜಯರಾಜ ಮತ್ತು ಸಿದ್ದಾರ್ಥ ಎಂಬವರು ಜೀಪ್ ಸಂ:ಕೆ.ಎ-19ಎ-42 ರಲ್ಲಿ ಎ.ಪಿ.ಎಂ.ಸಿ ರಸ್ತೆಯ ರೈಲ್ವೆ ಕ್ರಾಸ್ ಬಳಿ ತಂದು ಕೊಟ್ಟಿದ್ದನ್ನು ಪಡಕೊಂಡಿದ್ದು, ಇದನ್ನು ರಳ ರಾಜ್ಯದ ಕಾಸರಗೋಡಿಗೆ ಕಾರಿನಲ್ಲಿ ಮಾರಾಟಕ್ಕೆ ಸಾಗಿಸುತ್ತಿರುವುದಾಗಿ ತಿಳಿಸಿದನು. ಸದ್ರಿ ಮಯದಲ್ಲಿ ಸಾರಾಯಿ ಸಾಗಾಣಿಕೆ ಮಾಡಲು ಯಾವುದೇ ರಹದಾರಿ ಪತ್ರ ಹಾಗೂ ಪರವಾನಗಿಯನ್ನು ಜರುಪಡಿಸದಿರುವ ಕಾರಣಕ್ಕೆ ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 32(1),34,43(ಎ) ರ ಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ ಗೋಣಿಚೀಲದಲ್ಲಿದ್ದ ಒಟ್ಟು 5500 ಸಾರಾಯಿ ್ಯಚೆಟ್‌ಗಳನ್ನು ಹಾಗೂ ಸಾಗಾಟಕ್ಕೆ ಬಳಸಿದ ಮಾರುತಿ 800 ಕಾರು ಸಂ:ಕೆ.ಎ-05ಎಂ-3705ನ್ನು ಮಹಜರು ಖೇನ ಪಂಚರ ಸಮಕ್ಷಮ ಅಮಾನತ್ತುಪಡಿಸಲಾಯಿತು. ಆರೋಪಿಗಳಿಬ್ಬರನ್ನು ಸ್ಥಳದಲ್ಲೇ ದಸ್ತಗಿರಿ ಾಡಿ,ಮುಂದಿನ ಕ್ರಮ ಕೈಗೊಳ್ಳಲಾಯಿತು. ಸಾರಾಯಿಯಿಂದ ಸ್ಯಾಂಪಲ್‌ಗಾಗಿ ತೆಗೆದು ಅದಕ್ಕೆ ಬಿಳಿ ಟ್ಟೆಯನ್ನು ಸುತ್ತಿ,ಪಂಚರ ಸಮಕ್ಷಮ ಎಸ್.ಹೆಚ್.ಒ ಅರಗು ಸೀಲು ಹಾಕಿ,ಪಂಚರ ಸಹಿ ಇರುವ ಟಿಯನ್ನು ಅಂಟಿಸಲಾಯಿತು. ನಂತರ ತನಿಖೆಯನ್ನು ಮುಂದುವರಿಸಿ,ಕಾರಿನಲ್ಲಿದ್ದ ಸಾರಾಯಿ ಸ್ಯಾಚೆಟ್‌ಗಳ ಾಲೀಕತ್ವದ ಬಗ್ಗೆ ವಿಚಾರಿಸಿದಾಗ ಸಾರಾಯಿಯನ್ನು ಪುತ್ತೂರು ತಾಲೂಕಿನ ಸಾರಾಯಿ ಗುತ್ತಿಗೆದಾರರ ಸದವರಾದ ಸತೀಶ್, ಜಯರಾಜ್ ಮತ್ತು ಸಿದ್ದಾರ್ಥ ಇವರುಗಳು ಎ.ಪಿ.ಎಂ.ಸಿ ರಸ್ತೆಯ ರೈಲ್ವೆ ಬಳಿ ಪು ಸಂ: ಕೆ.ಎ-19ಎ-5742ರಲ್ಲಿ ತಂದುಕೊಟ್ಟಿದ್ದು, ಈ ಬಗ್ಗೆ ಯಾವುದೇ ಅಧಿಕೃತ ದಾಖಲಾತಿಗಳನ್ನು ಜರುಪಡಿಸಿರುವುದಿಲ್ಲ. ಪುತ್ತೂರು ಸಾರಾಯಿ ಗುತ್ತಿಗೆದಾರರ ಕಚೇರಿಯ ಎದುರುಗಡೆ ನಿಲ್ಲಿಸಲಾದ ಪನ್ನು ವಶಪಡಿಸಿಕೊಂಡು, ಮಹಜರನ್ನು ಸ್ಥಳದಲ್ಲೇ ತಯಾರಿಸಿ, ಆರೋಪಿಗಳ ವಿರುದ್ಧ ತಕ್ಷೀರು :147/2006 ದಿ:09-11-2006 ರಂತೆ ಮೊಕದ್ದಮೆ ದಾಖಲಿಸಿ, ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ್ರಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ಸದ್ರಿ ಸೊತ್ತುಗಳನ್ನು ಹಾಗೂ ದಾಖಲಾತಿಗಳನ್ನು ಮುಂದಿನ ತನಿಖೆಯ ಗ್ಗೆ ಅಬಕಾರಿ ಉಪ ನಿರೀಕ್ಷಕರು(ನಂ.1)ಜಾರಿ ಮತ್ತು ತನಿಖೆ,ಪುತ್ತೂರು ಇವರಿಗೆ ಈ ಪ್ರಾಧಿಕಾರದ ಆದೇಶ :ಎಂಎನ್‌ಜಿ/ಇಎಬಿ/18/2006-07 ದಿ:01-12-2006 ರಂತೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನಗಳನ್ನು ಾಗೂ ಸಾರಾಯಿ ಸ್ಯಾಚೆಟ್‌ಗಳನ್ನು ಪೊಲೀಸ್ ಉಪ ನಿರೀಕ್ಷಕರು,ಪುತ್ತೂರು ಪೊಲೀಸ್ ಠಾಣೆ,ಪುತ್ತೂರು ವರು ದಿ:18-12-2006 ರಂದು ಅಬಕಾರಿ ಉಪ ನಿರೀಕ್ಷಕರು(ನಂ.1) ಜಾರಿ ಮತ್ತು ತನಿಖೆ,ಪುತ್ತೂರು ವರಿಗೆ ಹಸ್ತಾಂತರಿಸಿರುತ್ತಾರೆ.

ಜೀಪು ಸಂ:ಕೆ.ಎ-19ಎ-5742ರ ಆರ್.ಸಿ ಮಾಲೀಕರಾದ ಶ್ರೀ ಅಬ್ಬಾಸ್, ಬಿನ್:ಖಾಸಿಮ್, ಚಾರ್ಮಾಡಿ ಲೇಜ್, ಬೆಳ್ತಂಗಡಿ ತಾಲೂಕು ಇವರು ತಮ್ಮ ವಕೀಲರ ಮುಖಾಂತರ ದಿ:30-12-2006 ರಂದು ಈ ್ರಧಿಕಾರಕ್ಕೆ ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು,ಇ.ಎ.ಬಿ, ದ.ಕ ಜಿಲ್ಲೆ, ಂಗಳೂರು ಇವರ ನ್ಯಾಯಾಲಯದ ಕರ್ನಾಟಕ ಅಬಕಾರಿ ಕಾಯಿದೆ 43(ಬಿ)ಅಡಿಯಲ್ಲಿ ನೀಡಲಾಗಿರುವ ೋಟೀಸು ಸಂ:ಇಎಬಿ/ಡಿಟಿಸಿಆರ್/183/2006-07 ದಿ:03-01-2007 ರಲ್ಲಿ ಸದ್ರಿ ಮಧ್ಯಂತರ ಬಿಡುಗಡೆಗಾಗಿ

ಸಲ್ಲಿಸಿದ ಅರ್ಜಿಯ ಬಗ್ಗೆ ವಿಚಾರಣೆಯನ್ನು ನಿಗದಿಪಡಿಸಿ, ಸದ್ರಿ ದಿನಾಂಕದಂದು ಮೂ ದಾಖಲಾತಿಗಳೊಂದಿಗೆ ಹಾಜರಾಗಲು ಸೂಚಿಸಲಾಗಿರುತ್ತದೆ.ವಾಹನ ನಿರೀಕ್ಷಕರು, ಪುತ್ತೂರು ಇವ ವಾಹನದ ಮೌಲ್ಯ ರೂ.78,000/-ಗಳಾಗಬಹುದೆಂದು ದಿ:29-01-2007ರಂದು ದೃಢೀಕರಣ ಪ ನೀಡಿರುವುದರಿಂದ ಹಾಗೂ ವಾಹನದ ಮಾಲೀಕರು ವಾಹನದ ಮೂಲ ದಾಖಲಾತಿಗಳನ ಸಲ್ಲಿಸಿರುವುದರಿಂದ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು,ಇ.ಐ.ಬಿ,ದ ಜಿಲ್ಲೆ,ಮಂಗಳೂರು ಇವರ ಮಧ್ಯಂತರ ಆದೇಶ ಸಂಖ್ಯೆ ದಿ:22-02-2007 ರಲ್ಲಿ ತಕ್ಷೀರಿನ ವಶಪಡಿಸಿಕೊಂಡ ಮಹೀಂದ್ರ ಜೀಪು ಸಂ:ಕೆ.ಎ-19ಎ-5742 ನ್ನು ರೂ.1,00,000/- ಬ್ಯಾಂಕ್ ಗ್ಯಾರೆಂಟಿಯನ ಒದಗಿಸಿದಲ್ಲಿ ಹಾಗೂ ಇತರೆ ಷರತ್ತುಗಳನ್ವಯ ಅರ್ಜಿದಾರರ ಸುಪರ್ದಿಗೆ ತಾತ್ಕಾಲಿಕ ನೆಲೆಯ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ. ಸದ್ರಿ ಆದೇಶದಂತೆ ಅರ್ಜಿದಾರರು ಈ ಪ್ರಾಧಿಕಾರಕ್ಕೆ ರೂ.1,00,000 ಬ್ಯಾಂಕ್ ಗ್ಯಾರೆಂಟಿಯನ್ನು ಬ್ಯಾಂಕ್ ಆಫ್ ಮಹಾರಾಷ್ಟ್ರ,ಬಸವನಗುಡಿ ಶಾಖೆ,ಬೆಂಗಳೂರು ಇಲ್ಲಿಂದ ಪಡೆದ ಈ ಪ್ರಾದಿಕಾರಕ್ಕೆ ಒಪ್ಪಿಸಿರುವುದರಿಂದ ಸದ್ರಿ ವಾಹನವನ್ನು ಅಬಕಾರಿ ಉಪ ನಿರೀಕ್ಷಕರು(ನಂ.2)ಜಾರಿ ಮತ ತನಿಖೆ,ಪುತ್ತೂರು ಇವರು ದಿ:16-06-2007 ರಂದು ಸ್ವೀಕೃತಿ ರಶೀದಿಯೊಂದಿಗೆ ಮಾಲೀಕರ ಪರ ಮಧ್ಯಂತ ಸುಪರ್ದಿಗೆ ಬಿಡುಗಡೆಗೊಳಿಸಲಾಗಿರುತ್ತದೆ.

ಪ್ರಕರಣದ ತನಿಖೆಯನ್ನು ಮುಂದುವರಿಸಿದ ಅಬಕಾರಿ ಉಪ ನಿರೀಕ್ಷಕರು(ನಂ.1)ಜಾರಿ ಮತ ತನಿಖೆ,ಪುತ್ತೂರು ಇವರ ತನಿಖಾ ವರದಿ ಸಂ:21/2006-07 ದಿ:08-01-2007 ರ ವರದಿಯಲ್ಲಿ ತಕ್ಷೀರಿನ ವಶಪಡಿಸಿಕೊಂಡ ವಾಹನಗಳ ಬಿ ಅಬ್‌ಸ್ಟ್ರಾಕ್ಟ್ ವರದಿಯನ್ನು ಸಾರಿಗೆ ಅಧಿಕಾರಿ,ಜಯನಗರ, ಬೆಂಗಳೂರ ಇವರಿಂದ ಪಡೆಯಲಾಗಿದ್ದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂ:ಕೆ.ಎ-05ಎಂ-370 ರ ಬಿ ಅಬ್‌ಸ್ಟ್ರಾಕ್ಟ್ ವರದಿಯಲ್ಲಿ ಆ ಸಂಖ್ಯೆಯ ವಾಹನ ಬಜಾಜ್ ಆಟೋ ರಿಕ್ಷಾವಾಗಿದ್ದು, ತಕ್ಷೀರಿನಲ ವಶಪಡಿಸಿಕೊಂಡ ವಾಹನಕ್ಕೆ ಬಳಸಿದ ಸಂಖ್ಯೆ ಆಟೋರಿಕ್ಷಾದ ನೊಂದಣಿ ಸಂಖ್ಯೆಯಾಗಿದ್ದು, ತಕ್ಷೀರಿನಲ ನಮೂದಿಸಿದ ಚಾಸಿಸ್ ನಂಬರಿಗೂ ಹಾಗೂ ಇಂಜಿನ್ ನಂಬರಿಗೂ ಒಂದಕ್ಕೊಂದು ತಾಳೆಯಾಗದ ಇರುವುದರಿಂದ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂ:ಕೆಎ-05 ಎಂ-3705 ನಕಲ ನಂಬರ್ ಆಗಿರುತ್ತದೆ ಎಂದು ದೃಢೀಕರಿಸಿ, ವರದಿಯನ್ನು ನೀಡಿರುತ್ತಾರೆ. ಹಾಗೂ ತಕ್ಷೀರಿನಲ್ಲ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳಿಂದ ತೆಗೆದ ಸ್ಯಾಂಪಲ್‌ಗಳನ್ನು ರಾಸಾಯನಿಕ ಪರೀಕ್ಷೆ ಕಳುಹಿಸಲಾಗಿದ್ದು, ಕರ್ನಾಟಕ ಸರ್ಕಾರ ,ಸಹಾಯಕ ರಾಸಾಯನಿಕ ವಿಶ್ಲೇಷಕರು,ಮಂಗಳೂರು ಇವರ ಪತ್ರ ಸಂ:ಇ-451-11 ದಿ:29-12-2006 ರ ವರದಿಯಲ್ಲಿ ಸಾರಾಯಿಯ ಮದ್ಯಸಾರದ ಪ್ರಮಾಣ 37% ಇರುವುದಾಗ ದೃಢೀಕರಣ ಪತ್ರ ನೀಡಿರುತ್ತಾರೆ. ಮಾರುತಿ ಕಾರನ್ನು ಹಾಗೂ ಸಾರಾಯಿ ಸ್ಯಾಚೆಟ್‌ಗಳನ್ನು ಸರ್ಕಾರಕ ಮುಟ್ಟುಗೋಲು ಹಾಕಿಕೊಂಡು, ಸಾರಾಯಿಯನ್ನು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ, ಅಂದಿನ ಅಧಿಕೃತ ಅಧಿಕಾರಿಗಳ ಹಾಗೂ ಅಬಕಾರಿ ಅಧೀಕ್ಷಕರು,ಇ.ಐ.ಬಿ,ದ.ಕ ಜಿಲ್ಲೆ,ಮಂಗಳೂರು ಇವರ ಮುಟ್ಟುಗೋಲು ಆದೇ ಸಂ:ಇ.ಐ.ಬಿ/ಡಿಟಿಸಿಆರ್/183/2006-07 ದಿ:13-02-2007 ರ ಆದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂ 100ಎಂ.ಎಲ್‌ನ 5500 ಸಾರಾಯಿ ಸ್ಯಾಚೆಟ್‌ಗಳನ್ನು (ಮಾದರಿಗಳನ್ನು ಹೊರತುಪಡಿಸಿ) ಕರ್ನಾಟಕ ಅಬಕಾ ಕಾಯಿದೆ 1965 ರ ಕಲಂ 43ಎ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲ ಹಾಕಿಕೊಂಡ ಸಾರಾಯಿಯನ್ನು ಅಬಕಾರಿ ಉಪ ಅಧೀಕ್ಷಕರು,ಪುತ್ತೂರು ಉಪ ವಿಭಾಗ,ಪುತ್ತೂರು ಇವ ಸಮಕ್ಷಮ ನಾಶಪಡಿಸಲು ಆದೇಶಿಸಿದ್ದು, ಸದ್ರಿ ಆದೇಶದಂತೆ ಅಬಕಾರಿ ಉಪ ಅಧೀಕ್ಷಕರು,ಪುತ್ತೂರ ಉಪ ವಿಭಾಗ,ಪುತ್ತೂರು ಇವರು ತಮ್ಮ ಸಿಬ್ಬಂದಿಯವರೊಂದಿಗೆ ಕೂಡಿಕೊಂಡು, ದಿ:26-02-2007 ರಂದ ಸಾರಾಯಿ ಸ್ಯಾಚೆಟ್‌ಗಳನ್ನು ನಾಶಪಡಿಸಿ,ಮಹಜರು ಜರುಗಿಸಿ,ವರದಿಯನ್ನು ಸಲ್ಲಿಸಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳ ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ: 09-11-2006 ರಂದು ಮಾರುತಿ 800 ಕಾರು ಸಂಖ್ಯೆ: ಕೆಎ-05-ಎಂ-3705 ಮತ್ತು ಮಹೀಂದ್ರ ಜೀಪು ಸಂ: ಕೆಎ-19-ಎ-5742 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆಯಾಗಿರುವುದ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರ

ಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಮುಖ್ಯ ಮಹಜರು ಸಾಕ್ಷಿಯಾದ ಶ್ರೀ ಎಸ್.ಮುಕುಂದ ನಾಯ್ಕ್,ಪೊಲೀಸ್ ನಿರೀಕ್ಷಕರು,ಕರಾವಳಿ ಪೊಲೀಸ್ ಕಾವಲು ಪಡೆ,ಮಂಗಳೂರು ವಿಭಾಗ ಇವರು ದಿ:26-08-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:28-06-2006ರಿಂದ 07-04-2008ರವರೆಗೆ ಪುತ್ತೂರು ನಗರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿ:09-11-2006ರಂದು ಠಾಣಾ ಪ್ರಭಾರದಲ್ಲಿದ್ದು, ದೊರೆತ ಖಚಿತ ವರ್ತಮಾನದ ಮೇರೆಗೆ ತಮ್ಮ ಸಿಬ್ಬಂದಿಯವರೊಂದಿಗೆ ಇಲಾಖಾ ಜೀಪಿನಲ್ಲಿ ಬೋಳವಾರು ಹಳೆಯ ಆರ್.ಟಿ.ಒ ಜಂಕ್ಷನ್ ಬಳಿ ರಸ್ತೆಗಾವಲು ನಡೆಸುತ್ತಿದ್ದಾಗ ರಾತ್ರಿ ಸುಮಾರು 9-00ಗಂಟೆ ಸಮಯದಲ್ಲಿ ಕಾರಾಡಿ ಕಡೆಯಿಂದ ಕಬಕ ಕಡೆಗೆ ಒಂದು ಮಾರುತಿ 800 ಕಾರನ್ನು ಸಂಶಯದ ಮೇರೆಗೆ ನಿಲ್ಲಿಸಲು ಸೂಚನೆ ನೀಡಿದಾಗ ಸದ್ರಿ ಕಾರನ್ನು ಚಾಲಕ ಮುಂದಕ್ಕೆ ಚಲಾಯಿಸಿಕೊಂಡು, ತಮ್ಮ ಇಲಾಖಾ ಜೀಪಿನಲ್ಲಿ ಬೆನ್ನಟ್ಟಿ, ಏರ್ಮಾಳ್ ಕಡೆಗೆ ಹೋಗುವ ರಸ್ತೆಯ ಬಳಿ ಮಾರುತಿ ಕಾರನ್ನು ಓವರ್ ಟೇಕ್ ಮಾಡಿ, ಜೀಪನ್ನು ರಸ್ತೆಗೆ ಅಡ್ಡಿ ಇಟ್ಟು ನಿಲ್ಲಿಸಿದೆವು. ಆಗ ಸದ್ರಿ ಕಾರಿನಲ್ಲಿದ್ದ ಇಬ್ಬರು ವ್ಯಕ್ತಿಗಳು ಕಾರಿನಿಂದ ಇಳಿದು, ಓಡಲು ಪ್ರಾರಂಭಿಸಿ, ಸಿಬ್ಬಂದಿಯವರ ಸಹಾಯದಿಂದ ಬೆನ್ನಟ್ಟಿ, ಪಂಚರ ಸಮಕ್ಷಮ ಮಾರುತಿ ಕಾರನ್ನು ಪರಿಶೀಲಿಸಿದಾಗ ಅದರಲ್ಲಿ ತಲಾ 500 ರಂತೆ ಒಟ್ಟು 11 ಪ್ಲಾಸ್ಟಿಕ್ ಗೋಣಿ ಚೀಲಗಳು ಪತ್ತೆಯಾದವು. ಚಾಲಕನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಒಬ್ಬ ಹ್ಯಾರಿಸ್ ಬಿನ್:ಅಬೂಬಕ್ಕರ್, ಮತ್ತೊಬ್ಬ ಹ್ಯಾರಿಸ್ ಬಿನ್:ಇಬ್ರಾಹಿಂ ಎಂದು ತಿಳಿಸಿದನು. ಸದ್ರಿ ಸಾರಾಯಿ ಸ್ಯಾಚೆಟ್‌ಗಳಿಂದ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ಸಾರಾಯಿ ಸ್ಯಾಚೆಟ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು, ಅದಕ್ಕೆ ಬಟ್ಟೆದಾರ ಕಟ್ಟಿ, ಎಸ್.ಹೆಚ್.ಒ ಅರಗು ಸೀಲು ಹಾಕಿ,ಪಂಚರ ಹಾಗೂ ತನ್ನ ಸಹಿಯನ್ನು ಚೀಟಿಗೆ ಅಂಟಿಸಿರುತ್ತಾರೆ. ಸದರಿ ಸಾರಾಯಿಯನ್ನು ಎಲ್ಲಿಂದ ತರಲಾಗಿದೆ ಎಂದು ವಿಚಾರಿಸಿದಾಗ ಪುತ್ತೂರು ತಾಲೂಕು ಸಾರಾಯಿ ಗುತ್ತಿಗೆದಾರರ ಕೆಲಸದವರಾದ ಸತೀಶ್, ಸಿದ್ದಾರ್ಥ, ಜಯರಾಜ್ ಇವರು ಎ.ಪಿ.ಎಂ.ಸಿ ರಸ್ತೆ, ರೈಲ್ವೆ ಗೇಟ್ ಬಳಿ, ಜೀಪ್ ಸಂ:ಕೆಎ-19ಎ-5742 ರಲ್ಲಿ ಕೊಟ್ಟಿದ್ದು, ಇದನ್ನು ಖರೀದಿಸಿ , ಕೇರಳ ಕಾಸರಗೋಡಿಗೆ ಸಾರಾಟ ಮಾಡಲೆಂದು, ಸಾಗಾಟ ಮಾಡಿರುವುದು ಎಂದು ಆರೋಪಿಗಳು ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಕಾರು ಮತ್ತು ಸಾರಾಯಿ ಸ್ಯಾಚೆಟ್‌ಗಳನ್ನು ಸ್ವಾಧೀನಪಡಿಸಿಕೊಂಡು, ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ಪುತ್ತೂರು ನಗರ ಪೊಲೀಸ್ ಠಾಣೆ ಇವರ ಅಪರಾಧ ಸಂ:147/2006ರಂತೆ ಪ್ರಕರಣವನ್ನು ದಾಖಲಿಸಿ, ಮಾನ್ಯ ನ್ಯಾಯಾಲಯಕ್ಕೂ ವರದಿ ಕಳುಹಿಸಿಕೊಟ್ಟಿರುತ್ತಾರೆ. ಸ್ಥಳದಲ್ಲೇ ತಯಾರಿಸಿದ ಮಹಜರನ್ನು ನಿಶಾನೆ ಪಿ-1 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಆರ್.ಸಿ.ಮಾಲೀಕರು ಹಾಜರಿರುವುದಿಲ್ಲ. ಹಾಗೂ ಅವರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ನಡೆಸಲು ಮುಂದಾಗದೆ ಇರುವ ಕಾರಣ ಮುಖ್ಯವಿಚಾರಣೆಯೊಂದಿಗೆ ಪಾಟೀ ಸವಾಲು ಇಲ್ಲವೆಂದು ೀರ್ಮಾನಿಸಲಾಯಿತು.

ಾ.ಸಾ:2

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ ಯಾಕೂಬ್ ಖಾನ್,ಅಬಕಾರಿ ಉಪ ರೀಕ್ಷಕರು,ಪುತ್ತೂರು ವಲಯ ಇವರು ದಿ:26-08-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಮುಖ್ಯ ಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು 2005 ರಿಂದ ಇಲ್ಲಿಯವರೆಗೆ ಪುತ್ತೂರು ವಲಯ ಕಚೇರಿಯಲ್ಲಿ ಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಪ್ರಾಧಿಕಾರದ ಆದೇಶದ ಅನುಸಾರ ತಕ್ಷೀರಿಗೆ ಬಂಧಿಸಿದ ದಾಖಲಾತಿಗಳನ್ನು ಹಾಗೂ ವಾಹನಗಳನ್ನು ಮತ್ತು ಸಾರಾಯಿ ಸ್ಯಾಚೆಟ್‌ಗಳನ್ನು ಮುಂದಿನ ಕ್ತ ಕ್ರಮಕ್ಕಾಗಿ ಹಸ್ತಾಂತರಿಸಿದ್ದು, ಹಸ್ತಾಂತರ ಸಮಯದಲ್ಲಿ ಮಹಜರನ್ನು ತಯಾರಿಸಿ, ಸ್ವೀಕೃತಿಯನ್ನು ಡಲಾಗಿರುತ್ತದೆ. ಮಾದರಿ ಮೊಹರು ಹಾಗೂ ಕೋರಿಕೆ ಪತ್ರದೊಂದಿಗೆ ತಮ್ಮ ಅಬಕಾರಿ ರಕ್ಷಕರ

ಮುಖಾಂತರ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿರುತ್ತದೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂ:ಕೆಎ-05ಎಂ-3705 ರ ಮಾಲೀಕತ್ವದ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿದ್ದು, ಸದರಿ ಪತ್ರದಂತೆ ಅವರು ಬಿ.ಅಬ್‌ಸ್ಟ್ರಾಕ್ಟ್ ವರದಿಯನ್ನು ದಿ:21-12-2006 ರಂದು ನೀಡಿರುತ್ತಾರೆ. ರಾಸಾಯನಿಕ ತಜ್ಞರ ವರದಿಯನ್ನು ದಿ:20-12-2006 ರಂದು ಪಡೆದಿರುತ್ತೇನೆ. ಈ ಪ್ರಾದಿಕಾರದ ಆದೇಶದ ಅನುಸಾರ ಮಹೀಂದ್ರ ಜೀಪು ಸಂ:ಕೆ.ಎ-19ಎ-5742ನ್ನು ರೂ.1,00,000/- ಬ್ಯಾಂಕ್ ಗ್ಯಾರೆಂಟಿ ಆಧಾರದ ಮೇಲೆ ಮಧ್ಯಂತರ ಬಿಡುಗಡೆ ಮಾಡಲು ಆದೇಶಿಸಿರುವುದರಿಂದ ಸದ್ರಿ ಆದೇಶದಂತೆ ವಾಹನವನ್ನು ಅರ್ಜಿದಾರರ ಸುಪರ್ದಿಗೆ ದಿ:18-6-2007 ರಂದು ಹಸ್ತಾಂತರ ಮಾಡಿರುತ್ತೇನೆ. ದಿ:08-01-2007ರಂದು ಅಧಿಕೃತ ಅಧಿಕಾರಿಯವರಿಗೆ ಸಲ್ಲಿಸಿದ ತನಿಖಾ ವರದಿಯನ್ನು ನಿಶಾನೆ ಪಿ-2 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-2 ಎ ಎಂದು ಗುರುತಿಸಲಾಯಿತು. ಕೆ.ಎ05-ಎ-3705 ಮಾರುತಿ 800 ಕಾರಿನ ಬಿ.ಅಬ್‌ಸ್ಟ್ರಾಕ್ಟ್ ವರದಿಯನ್ನು ನಿಶಾನೆ ಪಿ-3 ಎಂದು ರಾಸಾಯನಿಕ ತಜ್ಞರ ವರದಿಯನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಆರ್.ಸಿ.ಮಾಲೀಕರು ಹಾಜರಿರುವುದಿಲ್ಲ. ಹಾಗೂ ಅವರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ನಡೆಸಲು ಮುಂದಾಗದೆ ಇರುವ ಕಾರಣ ಮುಖ್ಯವಿಚಾರಣೆಯೊಂದಿಗೆ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:09-11-2006 ರಂದು ಜಪ್ತುಪಡಿಸಿಕೊಂಡಿರುವ ಮಾರುತಿ 800 ಕಾರು ನಕಲಿ ನೊಂದಣಿ ಸಂಖ್ಯೆ: ಕೆಎ-05ಎಂ-3705 ರಲ್ಲಿ ಅಕ್ರಮವಾಗಿ 100 ಎಂ.ಎಲ್ ನ 5500 ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಮಾರುತಿ 800 ಕಾರು ಸಂ: ಕೆಎ-05ಎಂ-3705 ರ ಮಾಲೀಕತ್ವದ ಬಗ್ಗೆ ತಕ್ಷೀರು ದಾಖಲಿಸಿ ಸುಮಾರು ಎರಡೂವರೆ ವರ್ಷ ಕಳೆದರೂ ವಾಹನ ಮಾಲೀಕರ ಪರ ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಹಾಗೂ ಇನ್ನೊಂದು ವಾಹನ ಮಹೀಂದ್ರ ಜೀಪ್ ಸಂ: ಕೆಎ-19-ಎ-5742 ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ ನಂತರ ಈ ಪ್ರಾಧಿಕಾರದ ಮುಂದೆ ಸಾಕ್ಷಿ ವಿಚಾರಣೆಗಾಗಿ ಹಾಜಾಗದೇ ಇರುವ ಕಾರಣ ಆರ್.ಸಿ ಮಾಲೀಕರಾದ ಶ್ರೀ ಅಬ್ಬಾಸ್ ಇವರು ತನ್ನ ನಿರಪರಾಧವನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಆದಕಾರಣ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಈ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು,ಪುತ್ತೂರು ಪೊಲೀಸ್ ಠಾಣೆ,ಪುತ್ತೂರು ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ ಪುತ್ತೂರು ಸಾರಾಯಿ ಗುತ್ತಿಗೆದಾರರ ನೌಕರರಿಂದ ಎ.ಪಿ.ಎಂ.ಸಿ ರಸ್ತೆಯ ರೈಲ್ವೆ ಬಳಿ ವಾಹನ ಸಂ:ಕೆಎ-19-ಎ-5742 ರಲ್ಲಿ ಆರೋಪಿಗಳಿಗೆ ತಂದು ಕೊಟ್ಟಿದ್ದು,ನಂತರ ಆರೋಪಿಗಳು ಮಾರುತಿ 800 ಕಾರು ಸಂ: ಕೆಎ-05ಎಂ-3705 ರಲ್ಲಿ ಅಕ್ರಮವಾಗಿ ಕೇರಳ ರಾಜ್ಯಕ್ಕೆ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡುವಾಗ ವಾಹನಗಳನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಸಾರಾಯಿ ಎಂದು ದೃಢಪಟ್ಟಿದ್ದು, ಸದರಿ ವಾಹನಗಳನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂ: ಕೆಎ-05ಎಂ-3705 ರ ಸಂಖ್ಯೆಯ ಬಿ ಅಬ್‌ಸ್ಟ್ರಾಕ್ಟ್ ವರದಿಯ ಪ್ರಕಾರ ಸದ್ರಿ ನೊಂದಣಿ ಸಂಖ್ಯೆಯು ಬಜಾಜ್ ಆಟೋರಿಕ್ಷಾವಾಗಿದ್ದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರಿನ ಚಾಸಿಸ್ ನಂಬರ್ ಹಾಗೂ ಇಂಜಿನ್ ನಂಬರಿಗೂ,ಬಿ.ಎಕ್ಸ್‌ಟ್ರಾಕ್ಟ್ ವರದಿಯ ನಂಬರ್‌ಗಳಿಗೆ ಒಂದಕ್ಕೊಂದು ತಾಳೆಯಾಗಿರುವುದಿಲ್ಲ. ಆದುದರಿಂದ ಆರೋಪಿಗಳು ಮಾರುತಿ

800 ಕಾರು ಸಂ:ಕೆಎ-05ಎಂ-3705 ರಲ್ಲಿ ಅಕ್ರಮವಾಗಿ ನಕಲಿ ನಂಬರನ್ನು ಅಳವಡಿಸಿ, ಕೇರಳ ರಾಜ್ಯಕ್ಕೆ ಸಾರಾಯಿ ಸಾಗಾಟ ಮಾಡಿರುವುದು ಸಾಬೀತಾಗಿರುತ್ತದೆ. ಸದ್ರಿ ವಾಹನವನ್ನು ವಶಪಡಿಸಿಕೊಂಡು ಈಗಾಗಲೇ ಎರಡೂವರೆ ವರ್ಷ ಕಳೆದರೂ ಆರೋಪಿಯಾಗಲೀ ಅಥವಾ ವಾಹನ ಮಾಲೀಕರಾಗಲೀ ಹಾಗೂ ಅವರ ಪರ ವಕೀಲರಾಗಲೀ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಪುತ್ತೂರು ಪೊಲೀಸ್ ಠಾಣೆ.ಪುತ್ತೂರು ವಲಯ ಹಾಗೂ ಈ ಪ್ರಾಧಿಕಾರದ ಮುಂದೆ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ಯಾರೂ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ.

ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ವಾಹನ ಮಹೀಂದ್ರ ಜೀಪ್ ಸಂ:ಕೆಎ-19ಎ-5742 ರಲ್ಲಿ ಸಾಗಾಟ ಮಾಡಿ, ಸದ್ರಿ ಮೇಲಿನ ವಾಹನಕ್ಕೆ ಹಸ್ತಾಂತರಿಸಿರುವುದು ಹಾಗೂ ಈ ಬಗ್ಗೆ ವಾಹನದ ಆರ್.ಸಿ ಮಾಲೀಕರು ಈ ಪ್ರಾಧಿಕಾರದ ಮುಂದೆ ತಾತ್ಕಾಲಿಕ ಬಿಡುಗಡೆಗೆ ಅರ್ಜಿ ಸಲ್ಲಿಸಿದ್ದು, ಸದ್ರಿ ಅರ್ಜಿಯನ್ನು ಪುರಸ್ಕರಿಸಿ, ಈ ಪ್ರಾಧಿಕಾರದ ಆದೇಶ ದಿ:22-2-2007ರ ಆದೇಶದಂತೆ ರೂ.1,00,000/- ಬ್ಯಾಂಕ್ ಗ್ಯಾರೆಂಟಿ ಆಧಾರದ ಮೇಲೆ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗಿರುತ್ತದೆ. ಆದರೆ, ಇದುವರೆಗೂ ಸರ್ಕಾರದ ಅಭಿಯೋಜನ ಪರ ಸಾಕ್ಷಿದಾರರಿಗೆ ಹಾಗೂ ವಾಹನದ ಮಾಲೀಕರಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿದ್ದು, ವಾಹನದ ಮಾಲೀಕರು ಈ ಪ್ರಾಧಿಕಾರದ ಮುಂದೆ ಹಾಜಾರಾಗಿರುವುದಿಲ್ಲ. ಹಾಗೂ ಮದ್ಯಂತರ ಆದೇಶದ ಷರತ್ತುಗಳನ್ನು ಪಾಲಿಸಿರುವುದಿಲ್ಲ. ಹಾಗೂ ವಾಹನದ ಮಾಲೀಕರ ಪರ ವಕೀಲರು ಹಾಜರಿದ್ದು, ಅಭಿಯೋಜನೆ ವಿಚಾರಣೆಯನ್ನು ಮುಂದುವರಿಸಲು ಅವರು ಉತ್ಸುಕರಾಗಿರುವುದಿಲ್ಲವೆಂದು ಲಿಖಿತವಾಗಿ ಈ ಪ್ರಾಧಿಕಾರದಲ್ಲಿ ದಿ:26-8-2009ರಂದು ಅರ್ಜಿ ಒಪ್ಪಿಸಿರುತ್ತಾರೆ ಮತ್ತು ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತಮ್ಮಿಂದ ಯಾವುದೇ ಅಭ್ಯಂತರವಿಲ್ಲವೆಂದು ಹಾಗೂ ವಾದ ವಿವಾದವಿಲ್ಲವೆಂದು ಈ ಪ್ರಾಧಿಕಾರದ ಮುಂದೆ ಲಿಖಿತ ಮನವಿ ಸಲ್ಲಿಸಿರುತ್ತಾರೆ.

ಅರ್ಜಿದಾರರ ಪರ ವಕೀಲರು, ಪ್ರಕರಣದ ಮುಖ್ಯ ಮಹಜರು ಸಾಕ್ಷಿದಾರರು ಹಾಗೂ ತಕ್ಷೀರಿಗೆ ಸಂಬಂಧಿಸಿದ ತನಿಖಾಧಿಕಾರಿಗಳ ಹೇಳಿಕೆಗಳನ್ನು ಪರಿಗಣಿಸಿ, ಪ್ರಕರಣ ಪತ್ತೆಯಾದ ಸ್ಥಳ ಮಹಜರು,ತನಿಖಾ ವರದಿ ಹಾಗೂ ಪ್ರಕರಣದ ಪುರಾವೆಗಳಿಂದ ಈ ಪ್ರಕರಣದಲ್ಲಿ ಜಪ್ತುಗೊಳಿಸಿರುವ ಎರಡು ವಾಹನಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಮಹೀಂದ್ರ ಜೀಪ್ ಸಂ:ಕೆಎ-19ಎ-5742 ಮತ್ತು ನಕಲಿ ನೊಂದಣಿ ಸಂಖ್ಯೆಯ ಮಾರುತಿ 800 ಕಾರು ಸಂ: ಕೆಎ-05ಎಂ-3705 ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/183/ಡಿಟಿಸಿಆರ್/2006-07 ದಿ: 28ನೇ ಆಗಸ್ಟ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ)ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು,ಪುತ್ತೂರು ಪೊಲೀಸ್ ಠಾಣೆ,ಪುತ್ತೂರು ಇವರ ತಕ್ಷೀರು ಸಂ: 147/2006 ದಿ:09-11-2006 ರಲ್ಲಿ ಅಕ್ರಮವಾಗಿ ಸಾರಾಯಿ ಸಾಗಾಟಕ್ಕೆ ಬಳಸಿದ ಮಹೀಂದ್ರ ಜೀಪ್ ಸಂ:ಕೆಎ-19ಎ-5742 ಮತ್ತು ಮಾರುತಿ 800 ಕಾರು ನಕಲಿ ನೊಂದಣಿ ಸಂ: ಕೆಎ-05ಎಂ-3705 ಗಳನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದ ಮದ್ಯಂತರ ಆದೇಶ ದಿ:22-2-2007ರಂದು ವಾಹನ ಬಿಡುಗಡೆಗೊಳಿಸಿ ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಮಹೀಂದ್ರ ಜೀಪ್ ಸಂ:ಕೆಎ-19ಎ-5742 ನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ನಿರೀಕ್ಷಕರು,ಪುತ್ತೂರು ವಲಯ,ಪುತ್ತೂರು ಇವರಲ್ಲಿ ಒಪ್ಪಿಸಲು ಆದೇಶಿಸಿದೆ. ತಪ್ಪಿದಲ್ಲಿ ಪ್ರತ್ಯೇಯಾಗಿ ನೀಡಿರುವ ಬ್ಯಾಂಕ್ ಗ್ಯಾರಂಟಿ ಮೊತ್ತ ರೂ.1,00,000/- ವನ್ನು ಸರಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ದಿ:28-08-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀ ಎಸ್.ಮುಕುಂದ ನಾಯ್ಕ್, ಪೋಲೀಸ್ ನಿರೀಕ್ಷಕರು, ಕರಾವಳಿ ಪೋಲೀಸ್ ಕಾವಲು ಪಡೆ,ಮಂಗಳೂರು ವಿಭಾಗ.

ಪ್ರಾ.ಸಾ-2: ಶ್ರೀ ಯಾಕೂಬ್ ಖಾನ್, ಅಬಕಾರಿ ಉಪ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಮಹಜರು.

ನಿಶಾನೆ ಪಿ-1ಎ : ಮಹಜರಿನಲ್ಲಿ ಮಹಜರು ಸಾಕ್ಷಿದಾರರ ಸಹಿ

ನಿಶಾನೆ ಪಿ-2 : ತನಿಖಾ ವರದಿ

ನಿಶಾನೆ ಪಿ-2ಎ : ತನಿಖಾ ವರದಿಯಲ್ಲಿರುವ ತನಿಖಾಧಿಕಾರಿಯವರ ಸಹಿ.

ನಿಶಾನೆ ಪಿ-3 : ಮಾರುತಿ 800 ಕಾರು ಸಂ:ಕೆಎ-05ಎಂ-3705 ರ ಬಿ ಅಬ್‌ಸ್ಟ್ರ್ಯಾಕ್ಟ್ ವರದಿ.

ನಿಶಾನೆ ಪಿ-4 : ರಾಸಾಯನಿಕ ವಿಶ್ಲೇಷಣಾ ವರದಿ

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.949

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ
ಸಂಖ್ಯೆ: ಎಸ್‌ಡಿಕೆ/282/ಡಿಟಿಸಿಆರ್/2008-09 ದಿನಾಂಕ:22ನೇ ಆಗಸ್ಟ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿರ್ಯಾದುದಾರರು:
ಅಬಕಾರಿ ನಿರೀಕ್ಷಕರು,
ಪುತ್ತೂರು ವಲಯ, ಪುತ್ತೂರು.

ಆರೋಪಿಗಳು:
ಪರಾರಿಯಾಗಿರುತ್ತಾರೆ.

ವಾಹನ ಮಾಲೀಕರು:
ಶ್ರೀ.ಸದಾನಂದ ನಾಯ್ಕ್, ಬಿನ್:ಎಸ್.ಕೆ.ನಾಯ್ಕ್, ಫ್ಲ್ಯಾಟ್ ನಂ:4,
ಸನ್ ಸೈನ್ ಅಪಾರ್ಟ್ ಮೆಂಟ್, ಬಂಟ್ಸ್ ಹಾಸ್ಟೆಲ್ ರೋಡ್,
ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:9-3-2009 ರಂದು ಬೆಳಿಗ್ಗೆ 3-00 ಗಂಟೆ ಸಮಯದಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ರೆಂಜ್ಯಾ ಸುಳ್ಯಪದವು ರಸ್ತೆಯ ನಿಡ್ಪೋಳಿ ರಸ್ತೆಯಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗ, ರೆಂಜ್ಯಾದಿಂದ ಸುಳ್ಯಪದವು ಕಡೆಗೆ ಒಂದು ಮಾರುತಿ 800 ಕಾರು ಸಂಖ್ಯೆ: ಕೆಎ-19-ಪಿ-7959 ವೇಗವಾಗಿ ಬರುತ್ತಿರುವುದನ್ನು ಕಂಡು ಸದರಿ ಕಾರನ್ನು ನಿಲ್ಲಿಸದೆ ವೇಗವಾಗಿ ಮುಂದಕ್ಕೆ ಚಲಾಯಿಸಿಕೊಂಡು ಹೋದಾಗ, ತಮ್ಮ ಇಲಾಖಾ ವಾಹನದಲ್ಲಿ ಬೆನ್ನಟ್ಟಿ ನಿಡ್ಪೋಳಿ ಹಾಲು ಉತ್ಪಾದಕರ ಸಂಘದ ಒಂದು ಕಿ.ಮೀ. ಮುಂದೆ ರಸ್ತೆಯ ಎಡಭಾಗದಲ್ಲಿ ಕಾರನ್ನು ನಿಲ್ಲಿಸಿ ಕತ್ತಲೆಯಲ್ಲಿ ಓಡಿ ಪರಾರಿಯಾಗಿರುತ್ತಾನೆ. ಅನುಮಾನಗೊಂಡು ಸದರಿ ಕಾರನ್ನು ಪರಿಶೀಲಿಸುವ ಸಲುವಾಗಿ ತೀರ್ಮಾನಿಸಿ, ಈ ಬಗ್ಗೆ ವಾಹನ ಶೋಧನೆ ಮಾಡಲು ಮಾನ್ಯ ನ್ಯಾಯಾಲಯದಿಂದ ಶೋಧನೆ ವಾರಂಟ್ ಪಡೆಯಲು ಕಾಲಾವಕಾಶವಿಲ್ಲದ ಕಾರಣ ಹಾಗೂ ಸ್ಥಳದ ಸುತ್ತಮುತ್ತ ಯಾವುದೇ ಸ್ವತಂತ್ರ ಸಾಕ್ಷಿಗಳು ದೊರಕದೇ ಇರುವುದರಿಂದ, ಇಲಾಖಾ ಸಿಬ್ಬಂದಿಯವರ ಸಮಕ್ಷಮ ಒಂದು ಶೋಧನಾ ಮೆಮೊವನ್ನು ತಯಾರಿಸಿ ಶೋಧನಾ ಕ್ರಮವನ್ನು ಜರುಗಿಸಲಾಯಿತು. ಕಾರಿನ ಬಾಗಿಲು ತೆರೆದು ನೋಡಿದಾಗ ಅದರ ಹಿಂದಿನ ಸೀಟಿನ

ಕೆಳಗೆ ಹಾಗೂ ಸೀಟಿನ ಮೇಲೆ ಒಟ್ಟು ನಕಲಿ ಮದ್ಯ ತುಂಬಿದ 13 ರಟ್ಟಿನ ಪೆಟ್ಟಿಗೆಗಳಿರುವುದು ಕಂಡು ಬಂತು. ಒಂದೊಂದು ರಟ್ಟಿನ ಪೆಟ್ಟಿಗೆಯಲ್ಲಿ 180 ಎಂ.ಎಲ್‌ನ 48 ಸೀಸೆಗಳಂತೆ ಒಟ್ಟು 7 ಪೆಟ್ಟಿಗೆಗಳಲ್ಲಿ ವಿಂಡ್ಸರ್ ವಿಸ್ಕಿ ಮತ್ತು 180 ಎಂ.ಎಲ್ ನ 48 ಸೀಸೆಗಳಂತೆ ಒಟ್ಟು 6 ಪೆಟ್ಟಿಗೆಗಳಲ್ಲಿ ಒರಿಜಿನಲ್ ಚಾಯ್ಸ್ ವಿಸ್ಕಿ ಇದ್ದು, ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ,ಬೆಂಗಳೂರುರವರಿಂದ ಸಹಿ ಮಾಡಲಾದ ಯಾವುದೇ ಭದ್ರತಾ ಚೀಟಿಗಳನ್ನು ಅಂಟಿಸದೇ ಇದ್ದ ಕಾರಣ ಅದು ನಕಲಿ ಮದ್ಯವೆಂದು ಖಚಿತವಾಯಿತು. ಕಾರಿನ ಮುಂಭಾಗದ ಡ್ಯಾಶ್ ಬೋರ್ಡಿನಲ್ಲಿ ಪರಿಶೀಲಿಸಲಾಗಿ, ನೋಕಿಯಾ ಮೊಬೈಲ್ ಸೆಟ್ ಇದ್ದು, ವಾಹನದಲ್ಲಿ ಮದ್ಯ ಸಾಗಾಟ ಮಾಡಲು ಯಾವುದೇ ರಹದಾರಿ ಅಥವಾ ಪರವಾನಗಿ ಮತ್ತು ಲೈಸೆನ್ಸ್ ಇದ್ದಿರುವುದಿಲ್ಲ. ನಂತರ ಪಂಚರ ಸಮಕ್ಷಮ ಸದ್ರಿ ಮದ್ಯದಿಂದ 180 ಮಿಲಿಯ ಒಟ್ಟು 13 ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಸದ್ರಿ ಬಾಟಲಿಗಳಿಗೆ ಬಟ್ಟೆದಾರ ಕಟ್ಟಿ ಇಲಾಖಾ ಸೀಲಿನಿಂದ ಸೀಲು ಮಾಡಿ, ಮಾದರಿಗಾಗಿ ತೆಗೆಯಲಾಯಿತು. ಸದರಿ ವಾಹನದಲ್ಲಿ ಯಾವುದೇ ರಹದಾರಿ ಅಥವಾ ಬಿಲ್ಲುಗಳು ದೊರಕದ ಕಾರಣ, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 15 ರ ಪ್ರಕಾರ ಅಪರಾಧವಾಗಿದ್ದು, ಕಲಂ 32,34 ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದರಿ ಮದ್ಯ ಹಾಗೂ ಸಾಗಾಟಕ್ಕೆ ಬಳಸಿದ ಮಾರುತಿ 800 ಕಾರು ಸಂಖ್ಯೆ:ಕೆಎ-19ಪಿ-7959 ಹಾಗೂ ನೋಕಿಯಾ ಮೊಬೈಲ್ ಫೋನನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಓಡಿ ಹೋದ ಆರೋಪಿಗಳ ವಿರುದ್ಧ ತಕ್ಷೀರು ಸಂ:12/2008-09 ದಿ:09-03-2009 ರಂತೆ ಮೊಕದ್ದಮೆಯನ್ನು ದಾಖಲಿಸಿ ಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತನಿಖಾ ವರದಿ ಸಂಖ್ಯೆ:ಸಿಆರ್‌ಎಂ/49/2008-09 ದಿ:25-7-2009 ರ ವರದಿಯಲ್ಲಿ ವಶಪಡಿಸಿಕೊಂಡ ನಕಲಿ ಮದ್ಯದ ಸೀಸೆಗಳಿಂದ ತೆಗೆದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ವರದಿ ಸಂಖ್ಯೆ:ಇ-98-13 ದಿ:4-5-2009 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.36 ಇದ್ದು, ಮದ್ಯವು ಮಾನವನ ಸೇವನೆಗೆ ಯೋಗ್ಯವಲ್ಲವೆಂದು ದೃಢೀಕರಣ ಪತ್ರ ನೀಡಿರುತ್ತಾರೆ.ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂಖ್ಯೆ: ಕೆಎ-19-ಪಿ-7959 ರ ಮಾಲೀಕತ್ವದ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಲ್ಲಿ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪಡೆಯಲು ಸಂಪರ್ಕಿಸಿ, ಅವರು ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ನೀಡಿದ್ದು, ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯ ಪ್ರಕಾರ ಸದರಿ ವಾಹನದ ನೋಂದಣಿ ಮಾಲೀಕ ಶ್ರೀ ಸದಾನಂದ ನಾಯ್ಕ್,ಬಿನ್:ಎಸ್.ಕೆ ನಾಯ್ಕ್,ಪ್ಲಾಟ್ ನಂ.4,ಸನ್‌ಶೈನ್ ಅಪಾರ್ಟ್‌ಮೆಂಟ್ಸ್,ಬಂಟ್ಸ್‌ಹಾಸ್ಟೆಲ್ ರೋಡ್, ಮಂಗಳೂರು ಆಗಿರುತ್ತಾರೆ. ಹಾಗೂ ಚಾಸೀಸ್ ನಂಬರು KA-19N-1073 ಮತ್ತು ಇಂಜಿನ್ ನಂ: FSBIN1519627 ಆಗಿರುತ್ತದೆ.ಹಾಗೂ ವಾಹನದ ಈಗಿನ ಮೌಲ್ಯ ರೂ.80,000 ಗಳಾಗಬಹುದೆಂದು,ಮೋಟಾರು ವಾಹನನಿರೀಕ್ಷಕರು, ಪುತ್ತೂರು ಇವರ ಮೌಲ್ಯಮಾಪನ ಪತ್ರ ಸಂಖ್ಯೆ ದಿ:15-06-2009ರಂದು ದೃಢೀಕರಣ ಪತ್ರ ನೀಡಿರುತ್ತಾರೆ. ಅಬಕಾರಿ ನಿರೀಕ್ಷಕರ ತನಿಖಾ ವರದಿಯಲ್ಲಿ ವಾಹನದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೊಂದಣಿ ಮಾಲೀಕರಾದ ಶ್ರೀ ಸದಾನಂದ ನಾಯ್ಕ್ ಇವರಿಗೆ ಕಾರಣ ಕೇಳಿ ನೋಟೀಸನ್ನು ಸದ್ರಿ ವಿಳಾಸಕ್ಕೆ ನೀಡಲಾಗಿದ್ದು,ನೊಟೀಸ್ ಜಾರಿಯಾಗದೇ ಹಿಂದೆ ಬಂದಿರುತ್ತದೆ.ನಂತರ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯ ಪ್ರಕಾರ ಕೆನರಾ ಬ್ಯಾಂಕ್, ವೆಲೆನ್ಸಿಯಾ,ಮಂಗಳೂರು ಇವರನ್ನು ಸಂಪರ್ಕಿಸಿ, ಸದ್ರಿಯವರು ಕೆನರಾ ಬ್ಯಾಂಕ್‌ನ ಉದ್ಯೋಗಸ್ಥರಾಗಿದ್ದು, ಸದ್ರಿಯವರು ದಿ:01-04-2007 ರಂದು ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ.ತದನಂತರ ಸದರಿ ವಿಳಾಸಕ್ಕೆ ಖುದ್ದಾಗಿ ಭೇಟಿ ನೀಡಿ ಸದ್ರಿಯವರ ಪತ್ನಿಗೆ ತಮ್ಮ ಪತಿಯವರ ಹೆಸರಿನಲ್ಲಿರುವ ವಾಹನವು ಮೊಕದ್ದಮೆಯಲ್ಲಿ ವಶಪಡಿಸಿ ಕೊಂಡಿರುವ ಬಗ್ಗೆ ತಿಳಿಸಲಾಗಿದ್ದು, ಅವರು ತನ್ನ ಪತಿಯ ಮರಣ ಪ್ರಮಾಣ ಪತ್ರವನ್ನು ನೋಟರಿಯಿಂದ ದೃಢೀಕರಿಸಿ, ಒಪ್ಪಿಸಿರುತ್ತಾರೆ.ಆದರೆ ಸದ್ರಿ ವಾಹನವು ದಿವಂಗತರಾದ ಶ್ರೀ ಸದಾನಂದ ನಾಯ್ಕ್ ಇವರಿಂದ ತನ್ನ ಪತ್ನಿಗೆ ವರ್ಗಾವಣೆಯಾದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.ಹಾಗೂ ವಾಹನದ ಬಗ್ಗೆ ಯಾವುದೇ ಉತ್ಸುಕರಾಗಿಲ್ಲದೇ ಹಾಗೂ ವಾಹನದ ಬಿಡುಗಡೆಗಾಗಿ ಇದುವರೆಗೂ ಅವರ ಪರ ವಕೀಲರ ಮುಖಾಂತರ ತಮ್ಮ ಕಚೇರಿಗೆ ಇದುವರೆಗೂ ಅರ್ಜಿ ಸಲ್ಲಿಸಿರುವುದಿಲ್ಲ.ಆದುದರಿಂದ ಸದ್ರಿ ವಾಹನವನ್ನು ವಶಪಡಿಸಿಕೊಂಡು ಈಗಾಗಲೇ 6 ತಿಂಗಳು ಕಳೆದರೂ ತಮ್ಮ ಕಚೇರಿಯಲ್ಲಿ ಆರೋಪಿಯಾಗಲಿ ಅಥವಾ ವಾಹನದ ಮಾಲೀಕರ ಪರ ಬೇರೆ ಯಾರೂ ವ್ಯಕ್ತಿಯು ಹಾಗೂ ಅವರ ಪರ ವಕೀಲರು ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನದ ಹಾಗೂ ಸೊತ್ತುಗಳ ಬಿಡುಗಡೆಗಾಗಿ ಯಾರೂ ಅಧಿಕೃತ ದಾಖಲಾತಿಗಳೊಂದಿಗೆ ಇದುವರೆಗೂ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಈ ಕೆಳಕಂಡ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ನಕಲಿ ಮದ್ಯವನ್ನು

ನಾಶಪಡಿಸಲು, ವಾಹನ ಮತ್ತು ಮೊಬೈಲ್‌ನ್ನು ವಿಲೇವಾರಿಗೊಳಿಸಲು ಸೂಕ್ತ ಆದೇಶ ನೀಡಬೇಕೆಂದು ತಮ್ಮ ತನಿಖಾ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳು;

1) ಮಾರುತಿ 800 ಕಾರು ಸಂಖ್ಯೆ: ಕೆಎ–19–ಪಿ–7959
2) ವಿಂಡ್ಸರ್ ವಿಸ್ಕಿ 180 ಎಂ.ಎಲ್‌ನ 336 ಸೀಸೆಗಳು– 60.480 ಲೀಟರ್
3) ಒರಿಜಿನಲ್ ಚಾಯ್ಸ್ ವಿಸ್ಕಿ 180ಎಂ.ಎಲ್‌ನ 288 ಸೀಸೆಗಳು–51.840ಲೀ.
4) ನೋಕಿಯೊ ಮೊಬೈಲ್ ಫೋನ್:1

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ: 9-3-2009 ರಂದು ಮಾರುತಿ 800 ಕಾರು ಸಂಖ್ಯೆ: ಕೆಎ–19–ಪಿ–7959 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ನಕಲಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ನಕಲಿ ಮದ್ಯ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ ಶಿವಪ್ರಸಾದ್, ಅಬಕಾರಿ ನಿರೀಕ್ಷಕರು,ಪುತ್ತೂರು ವಲಯ,ಪುತ್ತೂರು ಇವರು ದಿ:12-08-09 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ಸೆಪ್ಟೆಂಬರ್ 2005 ರಿಂದ ಇಲ್ಲಿಯವರೆಗೆ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅಬಕಾರಿ ಉಪ ಅಧೀಕ್ಷಕರ ಆದೇಶದಂತೆ ತಮ್ಮ ಸಿಬ್ಬಂದಿಯವರೊಂದಿಗೆ ದಿ:09-03-2009 ರಂದು ಬೆಳಿಗ್ಗೆ 3-00 ಗಂಟೆ ಸಮಯದಲ್ಲಿ ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ರೆಂಜ್ಯಾ ಸುಳ್ಯಪದವು ರಸ್ತೆಯ ನಿಡ್ಪೋಳಿ ರಸ್ತೆಯಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗ, ರೆಂಜ್ಯಾದಿಂದ ಸುಳ್ಯಪದವು ಕಡೆಗೆ ಒಂದು ಮಾರುತಿ 800 ಕಾರು ಸಂಖ್ಯೆ: ಕೆಎ–19–ಪಿ–7959 ವೇಗವಾಗಿ ಬರುತ್ತಿರುವುದನ್ನು ಕಂಡು ಸದರಿ ಕಾರನ್ನು ನಿಲ್ಲಿಸದೆ ವೇಗವಾಗಿ ಮುಂದಕ್ಕೆ ಚಲಾಯಿಸಿಕೊಂಡು ಹೋದಾಗ, ತಮ್ಮ ಇಲಾಖಾ ವಾಹನದಲ್ಲಿ ಬೆನ್ನಟ್ಟಿ ನಿಡ್ಪೋಳಿ ಹಾಲು ಉತ್ಪಾದಕರ ಸಂಘದ ಒಂದು ಕಿ.ಮೀ. ಮುಂದೆ ರಸ್ತೆಯ ಎಡಭಾಗದಲ್ಲಿ ಕಾರನ್ನು ನಿಲ್ಲಿಸಿ ಕತ್ತಲೆಯಲ್ಲಿ ಓಡಿ ಪರಾರಿಯಾಗಿರುತ್ತಾನೆ. ಅನುಮಾನಗೊಂಡು ಸದರಿ ಕಾರನ್ನು ಪರಿಶೀಲಿಸುವ ಸಲುವಾಗಿ ತೀರ್ಮಾನಿಸಿ, ಈ ಬಗ್ಗೆ ವಾಹನ ಶೋಧನೆ ಮಾಡಲು ಮಾನ್ಯ ನ್ಯಾಯಾಲಯದಿಂದ ಶೋಧನೆ ವಾರಂಟ್ ಪಡೆಯಲು ಕಾಲಾವಕಾಶಯಿಲ್ಲದ ಕಾರಣ ಹಾಗೂ ಸ್ಥಳದ ಸುತ್ತಮುತ್ತ ಯಾವುದೇ ಸ್ವತಂತ್ರ ಸಾಕ್ಷಿಗಳು ದೊರೆಯದೆ ಇರುವುದರಿಂದ, ಇಲಾಖಾ ಸಿಬ್ಬಂದಿಯವರ ಸಮಕ್ಷಮ ಒಂದು ಶೋಧನಾ ಮೆಮೊವನ್ನು ತಯಾರಿಸಿ ಶೋಧನಾ ಕ್ರಮವನ್ನು ಜರುಗಿಸಲಾಯಿತು. ಕಾರಿನ ಬಾಗಿಲು ತೆರೆದು ನೋಡಿದಾಗ ಅದರ ಹಿಂದಿನ ಸೀಟಿನ ಕೆಳಗೆ ಹಾಗೂ ಸೀಟಿನ ಮೇಲೆ ಒಟ್ಟು 13 ನಕಲಿ ಮದ್ಯ ತುಂಬಿದ ರಟ್ಟಿನ ಪೆಟ್ಟಿಗೆಗಳಿರುವುದು ಕಂಡು ಬಂತು. ಒಂದೊಂದು ಪೆಟ್ಟಿಗೆಯಲ್ಲಿ 180 ಎಂ.ಎಲ್ ನ 48 ಸೀಸೆಗಳಂತೆ ಒಟ್ಟು 7 ಪೆಟ್ಟಿಗೆಗಳಲ್ಲಿ ವಿಂಡ್ಸರ್ ವಿಸ್ಕಿ ಮತ್ತು 180 ಎಂ.ಎಲ್ ನ 48 ಸೀಸೆಗಳಂತೆ ಒಟ್ಟು 6 ಪೆಟ್ಟಿಗೆಗಳಲ್ಲಿ ಒರಿಜಿನಲ್ ಚಾಯ್ಸ್ ವಿಸ್ಕಿ ಇದ್ದು, ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ,ಬೆಂಗಳೂರು ರವರಿಂದ ಸಹಿ ಮಾಡಲಾದ ಯಾವುದೇ ಭದ್ರತಾ ಚೀಟಿಗಳನ್ನು ಅಂಟಿಸದೇ ಇದ್ದ ಕಾರಣ ಅದು ನಕಲಿ ಮದ್ಯವೆಂದು ಖಚಿತವಾಯಿತು. ಕಾರಿನ ಮುಂಭಾಗದ ಡ್ಯಾಶ್ ಬೋರ್ಡಿನಲ್ಲಿ ಪರಿಶೀಲಿಸಲಾಗಿ, ನೊಕಿಯಾ ಮೊಬೈಲ್ ಸೆಟ್ ಇದ್ದು, ವಾಹನದಲ್ಲಿ ಮದ್ಯ ಸಾಗಾಟ ಮಾಡಲು ಯಾವುದೇ ರಹದಾರಿ ಅಥವಾ ಪರವಾನಗಿ ಮತ್ತು ಲೈಸೆನ್ಸ್ ಇದ್ದಿರುವುದಿಲ್ಲ. ನಂತರ ಪಂಚರ ಸಮಕ್ಷಮ ಸದ್ರಿ ಮದ್ಯದಿಂದ ಒಟ್ಟು 13 ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಸದ್ರಿ ಬಾಟಲಿಗಳಿಗೆ ಬಟ್ಟೆ ದಾರ ಕಟ್ಟಿ ಇಲಾಖಾ ಸೀಲಿನಿಂದ ಸೀಲು ಮಾಡಿ, ಮಾದರಿಗಾಗಿ ತೆಗೆಯಲಾಯಿತು. ಸದರಿ ವಾಹನದಲ್ಲಿ ಯಾವುದೇ ರಹದಾರಿ ಅಥವಾ

ಬಿಲ್ಲುಗಳು ದೊರಕದ ಕಾರಣ, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 15 ರ ಪ್ರಕಾರ ಅಪರಾಧವಾಗಿದ್ದು, ಕಲಂ 32,34 ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದರಿ ಮದ್ಯ ಹಾಗೂ ಸಾಗಾಟಕ್ಕೆ ಬಳಸಿದ ಮಾರುತಿ 800 ಕಾರು ಸಂಖ್ಯೆ:ಕೆಎ-19ಪಿ-7959 ಹಾಗೂ ನೊಕಿಯಾ ಮೊಬೈಲ್ ಫೋನನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಮುಂಜಾನೆ 3-00 ಗಂಟೆಯಿಂದ 4-00ಗಂಟೆಯುವರೆಗೆ ಸ್ಥಳದಲ್ಲಿಯೇ ತಯಾರಿಸಲಾಯಿತು. ಸದ್ರಿ ಮಹಜರನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಅದನ್ನು ನಿಶಾನೆ ಪಿ-1 ಎಂದು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು.ನಂತರ ಸೊತ್ತುಗಳ ಸಮೇತ ಕಚೇರಿಗೆ ಬಂದು, ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿಕೊಂಡು,ಅದನ್ನು ನಿಶಾನೆ ಪಿ-2 ಎಂದು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-2ಎ ಎಂದು ಗುರುತಿಸಲಾಯಿತು. ನಂತರ ಪ್ರಕರಣದ ತನಿಖೆಯನ್ನು ಕೈಗೊಂಡು ಜಪ್ತುಪಡಿಸಿದ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ದಿ:09-03-2009ರಂದು ತಮ್ಮ ಅಬಕಾರಿ ರಕ್ಷಕರಾದ ಶ್ರೀ ಪುರುಷೋತ್ತಮರವರ ಮೂಲಕ ಕಳುಹಿಸಿಕೊಡಲಾಗಿದ್ದು, ಅವರಿಂದ ದಿ:23-05-2009ರಂದು ಪಡೆಯಲಾಗಿದೆ. ಅದನ್ನು ನಿಶಾನೆ ಪಿ-3 ಎಂದು ಗುರುತಿಸಲಾಗಿದೆ. ವಾಹನದ ನೊಂದಣಿ ಮಾಲೀಕರ ಮಾಹಿತಿ ಪಡೆಯುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ,ಮಂಗಳೂರು ಇವರಿಗೆ ದಿ:10-03-2009ರಂದು ಪತ್ರ ಬರೆಯಲಾಗಿದ್ದು, ಬಿ ಅಬ್‌ಸ್ಟ್ರಾಕ್ಟ್ ವರದಿಯ ಪ್ರಕಾರ ಶ್ರೀ ಸದಾನಂದ ನಾಯ್ಕ್, ಬಿನ್:ಎಸ್.ಕೆ ನಾಯ್ಕ್, ಪ್ಲ್ಯಾಟ್ ನಂ.4,ಸನ್‌ಶೈನ್ ಅಪಾರ್ಟ್‌ಮೆಂಟ್ಸ್, ಬಂಟ್ಸ್‌ಹಾಸ್ಟೆಲ್ ರೋಡ್, ಮಂಗಳೂರು ಇವರಿಗೆ ಸೇರಿದ್ದಾಗಿದ್ದು, ಸದ್ರಿ ವರದಿಯಲ್ಲಿ ನಮೂದಿಸಿರುವ ನೊಂದಣಿ ಮಾಲೀಕರಿಗೆ ದಿ:24-3-2009ರಂದು ತಮ್ಮ ಕಚೇರಿಯಿಂದ ನೊಟೀಸು ನೀಡಲಾಗಿದ್ದು, ಸದ್ರಿ ನೊಟೀಸು ಸದ್ರಿ ವಿಳಾಸದಲ್ಲಿ ವಾಸ್ತವವಿಲ್ಲ ಎಂದು ಹಿಂದಕ್ಕೆ ಬಂದಿರುತ್ತದೆ. ಬಿ.ಅಬ್‌ಸ್ಟ್ರಾಕ್ಟ್ ವರದಿಯನ್ನು ಈ ಪ್ರಾದಿಕಾರಕ್ಕೆ ಸಲ್ಲಿಸಿದ್ದು, ಸದ್ರಿ ವರದಿಯನ್ನು ನಿಶಾನೆ ಪಿ-4 ಎಂದು ಗುರುತಿಸಲಾಗಿದೆ. ಈ ಬಗ್ಗೆ ತನಿಖೆಯನ್ನು ಮುಂದುವರಿಸುತ್ತಾ ಬಿ.ಅಬ್‌ಸ್ಟ್ರಾಕ್ಟ್ ವರದಿಯಲ್ಲಿ ಹೆಚ್.ಪಿ.ಎ ದಾರರಾದ ಕೆನರಾ ಬ್ಯಾಂಕ್,ವೆಲೆನ್ಸಿಯಾ,ಮಂಗಳೂರು ಶಾಖೆ ಇವರನ್ನು ಸಂಪರ್ಕಿಸಿ, ಇವರ ಪ್ರಕಾರ ವಾಹನದ ನೊಂದಣಿ ಮಾಲೀಕ ಶ್ರೀ ಸದಾನಂದ ನಾಯ್ಕ್ ಇವರು ದಿ:01-04-2007 ರಂದು ನಿಧನರಾಗಿರುತ್ತಾರೆ ಎಂಬ ಮಾಹಿತಿಯನ್ನು ಸಲ್ಲಿಸಿರುತ್ತಾರೆ.ಸದ್ರಿ ಮಾಹಿತಿಯನ್ನು ದೃಢಪಡಿಸುವ ಸಲುವಾಗಿ ಮತ್ತೊಮ್ಮೆ ಸದ್ರಿಯವರ ಮನೆಗೆ ಖುದ್ದಾಗಿ ಭೇಟಿ ನೀಡಿ, ಸದ್ರಿಯವರ ಧರ್ಮಪತ್ನಿಯವರಲ್ಲಿ ವಿಚಾರಿಸಿದಾಗ ವಿಷಯ ಸತ್ಯವಾಗಿರುತ್ತದೆ. ಅವರ ಪತಿಯು ದೈವಾಧೀನರಾಗಿರುವ ಬಗ್ಗೆ ಮರಣ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಅದನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು,ಅದನ್ನು ನಿಶಾನೆ ಪಿ-5 ಎಂದು ಗುರುತಿಸಲಾಗಿದೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ತಮ್ಮ ವಾಹನವು ಅಬಕಾರಿ ಮೊಕದ್ದಮೆಯಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂಬ ವಿಷಯವನ್ನು ತಿಳಿಸಲಾಗಿದ್ದು, ಆದರೆ ಅವರು ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. ಹಾಗೂ ವಾಹನದ ಬಗ್ಗೆ ಹೇಳಿಕೆಗಳನ್ನು ನೀಡಲು ಸೂಚಿಸಿದಾಗ ಅವರು ಹೇಳಿಕೆಗಳನ್ನು ನೀಡಲು ನಿರಾಕರಿಸಿರುತ್ತಾರೆ. ಹಾಗೂ ಸದ್ರಿಯವರಿಗೆ ಕಚೇರಿಗೆ ಬಂದು ನೀಡುವಂತೆ ಮೌಖಿಕವಾಗಿ ಸೂಚಿಸಿದರೂ ಸದ್ರಿಯವರು ಇದುವರೆಗೂ ಹೇಳಿಕೆಯನ್ನು ನೀಡಿರುವುದಿಲ್ಲ. ಇಷ್ಟರತನಕ ವಾಹನದ ಮಾಲೀಕರಾಗಲೀ, ಆರೋಪಿಗಳಾಗಲೀ ಅವರ ಪರ ವಕೀಲರಾಗಲೀ ಅಥವಾ ವಾಹನದ ಬಿಡುಗಡೆಗಾಗಿ ಯಾರೊಬ್ಬರೂ ಸಹಾ ಈ ಪ್ರಾದಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ವಾಹನದಲ್ಲಿ ಅಕ್ರಮ ನಕಲಿ ಮದ್ಯ ಸಾಗಾಟವಾಗಿರುವುದರಿಂದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅಂತಿಮ ತನಿಖಾ ವರದಿಯನ್ನು ಈ ಪ್ರಾಧಿಕಾರಕ್ಕೆ ದಿ:16-06-2009ರಂದು ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ನಿಶಾನೆ ಪಿ-6 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-6 ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:09-03-2009 ರಂದು ಜಪ್ತುಪಡಿಸಿಕೊಂಡಿರುವ ಮಾರುತಿ 800 ಕಾರು ಸಂಖ್ಯೆ: ಕೆಎ-19-ಪಿ-7959 ರಲ್ಲಿ ಅಕ್ರಮವಾಗಿ 111-960 ಲೀಟರ್ ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರ ಪರ ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ

ವಾಹನಕ್ಕೆ ಸಂಬಂಧಿಸಿ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಆಗತ್ಯತೆವಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಅಬಕಾರಿ ನಿರೀಕ್ಷಕರು,ಪುತ್ತೂರು ವಲಯ, ಪುತ್ತೂರು ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ ನಕಲಿ ಮದ್ಯ ಸಾಗಾಣಿಕೆ ಮಾಡುವಾಗ ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ನಕಲಿ ಮದ್ಯ ಎಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ 800 ಕಾರು ಸಂಖ್ಯೆ: ಕೆಎ-19-ಪಿ-7959 ನ್ನು ವಶಪಡಿಸಿಕೊಂಡು ಸುಮಾರು 6 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಪುತ್ತೂರು ವಲಯ ಕಚೇರಿಯಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರ ಪರ ಹಾಗೂ ಪರಾರಿಯಾದ ಆರೋಪಿಗಳು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ತನಿಖಾಧಿಕಾರಿಯವರು ಖುದ್ದಾಗಿ ವಾಹನದ ಬಿ ಅಬ್‌ಸ್ಟ್ರಾಕ್ಟ್ ವರದಿಯ ಪ್ರಕಾರ ವಾಹನದ ನೊಂದಣಿ ಮಾಲೀಕರ ಮನೆಗೆ ಸಂಪರ್ಕಿಸಿ, ವಾಹನದ ನೊಂದಣಿ ಮಾಲೀಕರಾದ ಶ್ರೀ ಸದಾನಂದ ನಾಯ್ಕ್ ಇವರು ನಿಧನ ಹೊಂದಿರುತ್ತಾರೆ ಎಂದು ಅವರ ಪತ್ನಿಯವರು ತಿಳಿಸಿದ್ದು, ಈ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಒಪ್ಪಿಸಿರುತ್ತಾರೆ. ತಮ್ಮ ವಾಹನವನ್ನು ಅಬಕಾರಿ ಮೊಕದ್ದಮೆಗೆ ಸಂಬಂಧಿಸಿ ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರೂ ಈ ಬಗ್ಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. ವಾಹನದ ಬಿಡುಗಡೆಗಾಗಿ ಅವರು ಮತ್ತು ಅವರ ಪರ ವಕೀಲರಾಗಲೀ ತಕ್ಷೀರು ದಾಖಲಿಸಿ ಸುಮಾರು 6 ತಿಂಗಳು ಕಳೆದರೂ ಪುತ್ತೂರು ವಲಯ ಕಚೇರಿಯಲ್ಲಿ ಹಾಗೂ ಈ ಪ್ರಾಧಿಕಾರದಲ್ಲಿ ವಾಹನದ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ.ಅವರು ಯಾವುದೇ ಪ್ರತಿಕ್ರಿಯೆಯನ್ನು ನೀಡದಿರುವುದರಿಂದ ವಾಹನದ ಬಗ್ಗೆ ಯಾವುದೇ ಉತ್ಸುಕರಾಗಿರುವುದಿಲ್ಲವೆಂದು ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ರಾಸಾಯನಿಕ ತಜ್ಞರ ವರದಿಯಂತೆ ಹಾಗೂ ಫಿರ್ಯಾದುದಾರರು ಸಲ್ಲಿಸಿದ ಮಹಜರಿನಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯದ ಸೀಸೆಗಳ ಮೇಲೆ ಯಾವುದೇ ಸರ್ಕಾರ ಮುದ್ರಿಸಿದ ಲೇಬಲ್‌ಗಳು ಅಂಟಿಸಿರುವುದಿಲ್ಲ ಹಾಗೂ ತಜ್ಞರ ವರದಿಯಂತೆ ಮದ್ಯದ ಮದ್ಯಸಾರ ಪ್ರಮಾಣ ಶೇ.36 ಇದ್ದು, ಇದು ಮಾನವನ ಸೇವನೆಗೆ ಯೋಗ್ಯವಲ್ಲವೆಂದು ದಿ:04-05-2009ರಂದು ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ಆದುದರಿಂದ ಸದ್ರಿ ಮಾರುತಿ 800 ಕಾರು ಸಂಖ್ಯೆ: ಕೆಎ-19-ಪಿ-7959 ರಲ್ಲಿ ಅಕ್ರಮವಾಗಿ ನಕಲಿ ಮದ್ಯವನ್ನು ಹೊಂದಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಸದ್ರಿ ವಾಹನದ ಬಿಡುಗಡೆಗಾಗಿ ಇದುವರೆಗೂ ಆರೋಪಿಯಾಗಲೀ, ವಾಹನದ ಮಾಲೀಕರ ಪರವಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ಪ್ರಾಧಿಕಾರದ ಮುಂದೆ ವಾಹನವನ್ನು ಬಿಡುಗಡೆಗೊಳಿಸಲು ಅರ್ಜಿ ಸಲ್ಲಿಸಿರುವುದಿಲ್ಲ. ವಾಹನದಲ್ಲಿ ಅಕ್ರಮವಾಗಿ ನಕಲಿ ಮದ್ಯ ಸಾಗಾಟವಾಗಿರುವುದರಿಂದ ತಕ್ಷೀರಿನಲ್ಲಿ ವಶಪಡಿಸಿಕೊಂಡ ಎಲ್ಲಾ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ 111-960 ಲೀಟರ್ ನಕಲಿ ಮದ್ಯವನ್ನು ಹಾಗೂ ಸಾಗಾಟಕ್ಕೆ ಬಳಸಿದ ಮಾರುತಿ 800 ಕಾರು ಸಂಖ್ಯೆ: ಕೆಎ-19-ಪಿ-7959ನ್ನು ಹಾಗೂ ಮೊಬೈಲ್ ಫೋನನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/282/ಡಿಟಿಸಿಆರ್/2008-09 ದಿ:22ನೇ ಆಗಸ್ಟ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ರು,ಪುತ್ತೂರು ವಲಯ,ಪುತ್ತೂರು ಇವರ ತಕ್ಷೀರು ಸಂ: 12/2008-09 ದಿ:09-03-2009 ರಲ್ಲಿ ಜಪ್ತುಪಡಿಸಿರುವ ಕಂಡ ಸೊತ್ತುಗಳನ್ನು ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳು;

ಮಾರುತಿ 800 ಕಾರು ಸಂಖ್ಯೆ: ಕೆಎ-19-ಪಿ-7959

ವಿಂಡ್ಸರ್ ವಿಸ್ಕಿ 180 ಎಂ.ಎಲ್‌ನ 336 ಸೀಸೆಗಳು- 60.480 ಲೀಟರ್ ಮದ್ಯದಲ್ಲಿ ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಮದ್ಯವನ್ನು ಹೊರತುಪಡಿಸಿ, 59.220 ಲೀಟರ್ ಮದ್ಯ.

ಒರಿಜಿನಲ್ ಚಾಯ್ಸ್ ವಿಸ್ಕಿ 180ಎಂ.ಎಲ್‌ನ 288 ಸೀಸೆಗಳು-51.840ಲೀಮದ್ಯದಲ್ಲಿ ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಮದ್ಯವನ್ನು ಹೊರತುಪಡಿಸಿ, 50.400 ಲೀಟರ್ ಮದ್ಯ.

ನೋಕಿಯೊ ಮೊಬೈಲ್ ಫೋನ್:1

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ ಸ್/2007 ದಿ:13-7-2007 ರಂತೆ ಮಾರಾಟ ಮಾಡಲು ನಿಷೇಧಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಗಳನ್ನು ನಾಶಪಡಿಸುವಂತೆ ಆದೇಶ ಇರುವುದರಿಂದ, ಸದ್ರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು, ಅಬಕಾರಿ ನಿರೀಕ್ಷಕರು,ಪುತ್ತೂರು ಹಾಗೂ ವ್ಯವಸ್ಥಾಪಕರು, ಕೆ.ಎಸ್.ಬಿ.ಸಿ.ಎಲ್ ಡಿಪೋ, ಪುತ್ತೂರು ಇವರನ್ನು ಮತ್ತು ಸ್ಥಳೀಯ ಜನಿಕರು ಹಾಗೂ ಮಾಧ್ಯಮ ಪತ್ರಿಕಾ ವರದಿಗಾರರನ್ನು ಸೇರಿಸಿ ಇವರುಗಳ ಸಮಕ್ಷಮ ಅಬಕಾರಿ ಕ್ತರು, ಕರ್ನಾಟಕ ರಾಜ್ಯ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ /2004 ದಿ:12-9-2005 ರ ಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ, ಮದ್ಯವನ್ನು ನಾಶಪಡಿಸಲು ಆದೇಶಿಸಿದೆ ಹಾಗೂ ಉಳಿದ ಖಾಲಿ ನ್ನು ಪ್ರಚಲಿತ ಹಳೆಯ ಖಾಲಿ ಸೀಸೆಗಳಿಗೆ ದಕ್ಕುವ ಗರಿಷ್ಟ ಮೌಲ್ಯಕ್ಕೆ ಮಾರಾಟ ಮಾಡಿ, ದಕ್ಕುವ ಪೂರ್ಣ ವನ್ನು ಸರಕಾರಕ್ಕೆ ಪಾವತಿಸಿ ಸೊತ್ತುಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಹಸ್ತಾಂತರ ಮಾಡಲು ಹಾಗೂ ನೋಕಿಯೊ ಲ್ ಫೋನ್‌ನ್ನು ವಿಲೇವಾರಿಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:22-08-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಾ-1: ಶ್ರೀ ಶಿವಪ್ರಸಾದ್,ಪುತ್ತೂರು ವಲಯ, ಪುತ್ತೂರು.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ಪಿ-1 : ಮಹಜರು.

ಪಿ-1ಎ : ಮಹಜರಿನಲ್ಲಿ ಫಿರ್ಯಾದುದಾರರ ಸಹಿ

ಪಿ-2 : ಪ್ರಥಮ ಮಾಹಿತಿ ವರದಿ

ಪಿ-2ಎ : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ

ಪಿ-3 : ರಾಸಾಯನಿಕ ವಿಶ್ಲೇಷಣಾ ವರದಿ

ಪಿ-4 : ಬಿ ಅಬ್‌ಸ್ಟ್ರ್ಯಾಕ್ಟ್ ವರದಿ.

ಪಿ-5 : ವಾಹನದ ಮಾಲೀಕರು ಮರಣ ಹೊಂದಿದ ಮರಣ ಪ್ರಮಾಣ ಪತ್ರ.

ಪಿ-6: ತನಿಖಾ ವರದಿ

ನಿಶಾನೆ ಪಿ-6ಎ : ತನಿಖಾ ವರದಿಯಲ್ಲಿರುವ ಫಿರ್ಯಾದುದಾರರ ಸಹಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.903

ಶಿಕ್ಷಣ ಇಲಾಖೆ

ಅಧಿಸೂಚನೆ

ಸಂಖ್ಯೆ: ಇಡಿ 234 ಡಿಪಿಐ 2008(3), ಬೆಂಗಳೂರು, ದಿನಾಂಕ:29ನೇ ಅಕ್ಟೋಬರ್, 2009

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ, ಗ್ರೂಪ್-'ಬಿ' ವೃಂದದ ವಿಭಾಗೀಯ ಅಧೀಕ್ಷಕರು (ವಿಶೇಷ ವರ್ಗ) ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2008 ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ- ವಿಭಾಗೀಯ ಅಧೀಕ್ಷಕರು (ಸಂಗೀತ, ನೃತ್ಯ ಮತ್ತು ನಾಟಕ)

ಸಾರ್ವಜನಿಕ ಶಿಕ್ಷಣ ಇಲಾಖೆಯ, ಗ್ರೂಪ್-'ಬಿ' ವೃಂದದ ವಿಭಾಗೀಯ ಅಧೀಕ್ಷಕರು (ಸಂಗೀತ, ನೃತ್ಯ ಮತ್ತು ನಾಟಕ) (ವಿಶೇಷ ವರ್ಗ) ಅಧಿಕಾರಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2008ರಂದು ಇದ್ದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ230 ಡಿಪಿಐ 2008, ದಿನಾಂಕ:14.08.2008ರಂದು ಪ್ರಕಟಿಸಿ, ಈ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಭಾದಿತರಾದ ಅಧಿಕಾರಿಗಳು ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಏನಾದರು ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸುವಂತೆ ತಿಳಿಸಲಾಗಿತ್ತು.

ಸದರಿ ಪಟ್ಟಿಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ. ಆದ್ದರಿಂದ, ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-'ಬಿ' ವೃಂದದ ವಿಭಾಗೀಯ ಅಧೀಕ್ಷಕರು (ಸಂಗೀತ, ನೃತ್ಯ ಮತ್ತು ನಾಟಕ) (ವಿಶೇಷ ವರ್ಗ) ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ಅನುಬಂಧದಲ್ಲಿರುವಂತೆ ಪ್ರಕಟಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎನ್. ಸೋಮಶೇಖರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಆಡಳಿತ)

ಅನುಬಂಧ

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-'ಬಿ' ವೃಂದದ ವಿಭಾಗೀಯ ಅಧೀಕ್ಷಕರು (ಸಂಗೀತ, ನೃತ್ಯ ಮತ್ತು ನಾಟಕ) (ವಿಶೇಷ ವರ್ಗ) ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿ ದಿನಾಂಕ:01.01.2008ರಲ್ಲಿದ್ದಂತೆ

ಕ್ರಮ ಸಂಖ್ಯೆ	ಗ್ರೇಡ್-ಎ ಕ್ರಮಸಂಖ್ಯೆ	ಜಾತಿ	ಅಧಿಕಾರಿಗಳ ಹೆಸರು ಶ್ರೀ/ಶ್ರೀಮತಿ	ಜನ್ಮ ದಿನಾಂಕ	ಪ್ರಸ್ತುತ ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ	ಷರಾ
1.	01	–	ಎಂ. ಲಿಂಗಮ್ಮ	12.02.49	04.01.2005	–
2.	02	–	ತಮ್ಮಯ್ಯ	15.07.50	04.01.2005	–
3.	03	–	ಟಿ. ರಾಜಲಕ್ಷ್ಮಿ	30.03.49	28.03.2007	–
4.	16	ಎಸ್.ಸಿ.	ಹೆಚ್. ಶಿವಣ್ಣ	17.02.52	28.03.2007	–
5.	18	–	ಎಂ.ಎನ್. ಮಂಜುಳಾ	24.04.52	10.05.2007	–

ಪಿ.ಆರ್.1139

ಎಂ.ಎನ್. ಸೋಮಶೇಖರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಆಡಳಿತ)

III-F-2-(★)

ಶಿಕ್ಷಣ ಇಲಾಖೆ
ಅಧಿಸೂಚನೆ

ಸಂಖ್ಯೆ: ಇಡಿ 234 ಡಿಪಿಐ 2008(2), ಬೆಂಗಳೂರು, ದಿನಾಂಕ:29ನೇ ಅಕ್ಟೋಬರ್, 2009

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ, ಗ್ರೂಪ್-'ಬಿ' ವೃಂದದ (ವಿಶೇಷ ವರ್ಗ) ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2008 ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ- ವಿಷಯ ಪರಿವೀಕ್ಷಕರು (ವೃತ್ತಿ).

ಸಾರ್ವಜನಿಕ ಶಿಕ್ಷಣ ಇಲಾಖೆಯ, ಗ್ರೂಪ್-'ಬಿ' ವೃಂದದ ವಿಷಯ ಪರಿವೀಕ್ಷಕರು (ವೃತ್ತಿ) (ವಿಶೇಷ ವರ್ಗ) ಧಿಕಾರಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2008ರಂದು ಇದ್ದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 0 ಡಿಪಿಐ 2008, ದಿನಾಂಕ:14.08.2008 ರಂದು ಪ್ರಕಟಿಸಿ, ಈ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಭಾದಿತರಾದ ಧಿಕಾರಿಗಳು ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಏನಾದರು ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸುವಂತೆ ಸಲಾಗಿತ್ತು.

ಸದರಿ ಪಟ್ಟಿಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ದಿರುವುದಿಲ್ಲ. ಆದ್ದರಿಂದ, ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-'ಬಿ' ವೃಂದದ ವಿಷಯ ಪರಿವೀಕ್ಷಕರು (ವೃತ್ತಿ) ಶೇಷ ವರ್ಗ) ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ಅನುಬಂಧದಲ್ಲಿರುವಂತೆ ಪ್ರಕಟಿಸಿ ರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎನ್. ಸೋಮಶೇಖರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಆಡಳಿತ)

ಅನುಬಂಧ

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-'ಬಿ' ವೃಂದದ ವಿಷಯ ಪರಿವೀಕ್ಷಕರು (ವೃತ್ತಿ)
(ವಿಶೇಷ ವರ್ಗ) ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿ ದಿನಾಂಕ:01.01.2008ರಲ್ಲಿದ್ದಂತೆ

ಮ ಂಖ್ಯೆ	ಗ್ರೇಡ್-ಎ ಕ್ರಮಸಂಖ್ಯೆ	ಜಾತಿ	ಅಧಿಕಾರಿಗಳ ಹೆಸರು ಶ್ರೀ/ಶ್ರೀಮತಿ	ಜನ್ಮ ದಿನಾಂಕ	ಪ್ರಸ್ತುತ ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ	ಷರಾ
1.	13	–	ಜಯದೇವಪ್ಪ	13.03.43	27.03.2001	–
2.	16	–	ಸಿ.ವಿ. ಕೃಷ್ಣಸ್ವಾಮಿ	01.12.44	02.11.2001	–
3.	20	–	ಬಿ.ಅಶ್ವಥನಾರಾಯಣರಾವ್	19.07.47	02.11.2001	–
4.	21	–	ಬಿ.ಡಿ. ಪುರೋಹಿತ	03.03.45	02.11.2001	–
5.	23	–	ಎಸ್.ಕೆ. ವಿಜಯಲಕ್ಷ್ಮಿ	01.12.45	02.11.2001	–
6.	25	–	ಕೆ.ವಾಸುದೇವಮೂರ್ತಿ	15.07.46	02.11.2001	–
7.	33	–	ಬಿ.ಸಿ. ಬೋಳಯ್ಯ	15.07.46	02.11.2001	–
8.	45	–	ಟಿ. ವೆಂಕಟರಮಣಯ್ಯ	24.06.47	02.11.2001	–
9.	53	–	ಹೆಚ್. ಬಸವರಾಜ್	04.01.49	02.11.2001	–
0.	54	–	ಬಿ.ಟಿ. ಹಾಲಪ್ಪ	25.05.52	02.11.2001	–
1.	71	–	ಎಂ. ಹನುಮಯ್ಯ	14.01.51	02.11.2001	–
2.	72	–	ಎಂ.ಎಂ. ಕುಟ್ಟಪ್ಪ	18.12.54	02.11.2001	–
3.	74	–	ಟಿ.ಹೆಚ್. ಶ್ರೀನಿವಾಸ್	15.01.51	02.11.2001	–
4.	79	–	ಪ್ರಭಾಕರ ಬಿ. ಬಡಿಗೇರ	20.05.58	02.11.2001	–
5.	90	–	ಡಿ.ಬಿ. ಮಾಲತಿ	18.11.44	02.11.2001	–
6.	96	–	ಅಸ್ರೂರ ರೆಹಮಾನ್	01.06.59	02.11.2001	–
7.	109	–	ಅಬ್ದುಲ್ ರಷೀದ್	08.03.56	02.11.2001	–

ಕ್ರಮ ಸಂಖ್ಯೆ	ಗ್ರೇಡ್-ಎ ಕ್ರಮಸಂಖ್ಯೆ	ಜಾತಿ	ಅಧಿಕಾರಿಗಳ ಹೆಸರು ಶ್ರೀ/ಶ್ರೀಮತಿ	ಜನ್ಮ ದಿನಾಂಕ	ಪ್ರಸ್ತುತ ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ	ಷರಾ
18.	113	–	ಗುರಯ್ಯ ಹಿರೇಮಠ್	01.01.61	02.11.2001	–
19.	115	–	ಅಫ್‌ಜರ್ ಅಬ್ದುಲ್‌ವಾಹಿದ್	15.05.55	02.11.2001	–
20.	121	–	ಶಕುಂತಾಲ ಬಾಯಿ	03.06.52	02.11.2001	–
21.	125	ಪ.ಜಾತಿ	ದುರ್ಗಯ್ಯ	19.02.54	02.11.2001	–
22.	126	ಪ.ಜಾತಿ	ಬಿ.ಎನ್. ಶಿವಮಾದಯ್ಯ	01.06.56	02.11.2001	–
23.	132	–	ದಾಕ್ಷಾಯಣಿ ಶಿವಪ್ಪ ಗುಗ್ರಿ	01.06.52	02.11.2001	–
24.	141	ಪ.ಜಾತಿ	ಡಿ.ಆರ್. ಹುಚ್ಚಪ್ಪ	20.06.56	02.11.2001	–
25.	147	ಪ.ಜಾತಿ	ಸಿದ್ದಮ್ಮ	01.02.64	02.11.2001	–
26.	202	ಪ.ಜಾತಿ	ಜಿ.ಎನ್. ನಾರಾಯಣಸ್ವಾಮಿ	09.11.62	02.11.2001	–
27.	25–ಎ	–	ಜಿ.ಎಲ್. ಭಾರದ್ವಾಜ	17.05.47	12.08.2004	–
28.	40	–	ಹುಸೇನ್ ಸಾಬ ಗುಡಿಯಾಳ	18.07.49	12.08.2004	–
29.	47	–	ಮಲ್ಲಪ್ಪ ಕಂಪ್ಲಿ	10.12.50	12.08.2004	–
30.	60	–	ಜೀರಪ್ಪ	26.02.55	12.08.2004	–
31.	68	ಪ.ಜಾತಿ	ಹೋಬಾನಾಯಕ್	01.05.56	12.08.2004	–
32.	82	–	ಪುಟ್ಟಶಾಮಾಚಾರ್	25.07.50	12.08.2004	–
33.	121–ಎ	ಪ.ವರ್ಗ	ಜಿ.ಎಸ್. ವಾಲೀಕರ್	01.06.52	12.08.2004	–
34.	74–ಎ	–	ಬಕ್ಕಪ್ಪಾ	30.05.52	05.12.2007	–
35.	78	–	ಶಬ್ಬೀರ್ ಅಹಮದ್	20.05.58	05.12.2007	–
36.	84–ಎ	–	ಎ.ಐ. ಖಾಜಿ	01.06.56	05.12.2007	–
37.	87	–	ನಾಗರತ್ನಮ್ಮ ಎಸ್.	01.06.58	05.12.2007	–
38.	98	ಪ.ಜಾತಿ	ಭೀಮರಾಯ ಡಿ.ಬಸಪ್ಪ	01.09.51	05.12.2007	–

ಎಂ.ಎನ್. ಸೋಮಶೇಖರ್
ಪಿ.ಆರ್.1140
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಆಡಳಿತ)

ಶಿಕ್ಷಣ ಇಲಾಖೆ
ಅಧಿಸೂಚನೆ

ಸಂಖ್ಯೆ: ಇಡಿ 234 ಡಿಪಿಐ 2008(1), ಬೆಂಗಳೂರು, ದಿನಾಂಕ:29ನೇ ಅಕ್ಟೋಬರ್, 2009

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ, ಗ್ರೂಪ್-'ಬಿ' ವೃಂದದ (ವಿಶೇಷ ವರ್ಗ) ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2008 ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ-ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು.

